ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 27 ಸೋಮವಾರ 2023

43

₹4

ಸಂಪುಟ: 43 | ಸಂಚಿಕೆ: 309 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಟಿ.ಚೌಡಯ್ಯನವರ ಕುರಿತು 'ಕಲಾ ಕೌಸ್ತುಭ' ಆಂಗ್ಲ ಪುಸ್ತಕ ಬಿಡುಗಡೆ

ಕರ್ನಾಟಕ ಸಂಗೀತ ಪರಂಪರೆಗೆ ಪಿಟೀಲು ಟಿ.ಚೌಡಯ್ಯರಿಂದ ವಿಶ್ವದರ್ಜೆ ಕೊಡುಗೆ

ಇಂತಹ ಮಹಾನುಭಾವರ ಕೊಡುಗೆಯಿಂದ ಕರ್ನಾಟಕ ಸಂಗೀತಕ್ಕೆ ಅತ್ಯಂತ ಮಾಧುರ್ಯವೆಂಬ ಮನ್ನಣೆ; ಚಿತ್ರವೀಣಾ ವಿದ್ವಾಂಸ ಎನ್.ರವಿಕಿರಣ್ ಅಭಿಮತ

ಮೈಸೂರು,ಫೆ.26(ಪಿಎಂ)– ಕರ್ನಾಟಕ ಸಂಗೀತ ಪರಂಪರೆಗೆ ಮೈಸೂರು ಪಿಟೀಲು ಟಿ.ಚೌಡಯ್ಯನವರು ಅಸಾಧಾರಣ, ವಿಶ್ವದರ್ಜೆಯ ಕೊಡುಗೆ ನೀಡಿದ್ದಾರೆ. ಇಂತಹ ಮಹಾನುಭಾವರ ಪರಿಶ್ರಮದಿಂದ ಕರ್ನಾಟಕ ಸಂಗೀತವು ನಿಸ್ಸಂದೇಹವಾಗಿ ಇಡೀ ಪ್ರಪಂಚದಲ್ಲೇ ಅತ್ಯಂತ ಮಾಧುರ್ಯವೆಂಬ ಮನ್ನಣೆ ಗಳಿಸಿದೆ ಎಂದು ಚಿತ್ರವೀಣಾ ವಿದ್ವಾಂಸ ಎನ್.ರವಿಕಿರಣ್ ಹೇಳಿದರು.


ಮೈಸೂರಿನ ಕೃಷ್ಣಮೂರ್ತಿಪುರಂನ ನಿತ್ಯೋತ್ಸವ ಕನ್ವೆನ್ಷನ್ ಸೆಂಟರ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೇಖಕಿ ಡಾ.ಪದ್ಮಾವತಿ ನರಸಿಂಹನ್ ಅವರ 'ಕಲಾ ಕೌಸ್ತುಭ' ಆಂಗ್ಲ ಪುಸ್ತಕ (ಕರ್ನಾಟಕ ಸಂಗೀತಕ್ಕೆ ಪಿಟೀಲು ಟಿ. ಚೌಡಯ್ಯನವರ ಕೊಡುಗೆ ಕುರಿತು ರಚಿಸಿರುವ ಪುಸ್ತಕ) ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪಿಟೀಲು ಚೌಡಯ್ಯನವರು ಕರ್ನಾಟಕ ಸಂಗೀತ ಪರಂಪರೆಯಲ್ಲಿ ಒಂದು ದಂತಕಥೆ. ಅವರ ಕುರಿತು ಇದೀಗ ಒಂದು ಅದ್ಭುತ ಪುಸ್ತಕ ಹೊರಬಂದಿದೆ. ಇಂಗ್ಲಿಷ್‌ನಲ್ಲಿ ರಚಿಸಿರುವ ಕಾರಣ ಅದು ಕನ್ನಡಿಗರು ಮಾತ್ರವಲ್ಲದೆ, ಪ್ರಪಂಚದ ವಿವಿಧ ಭಾಗಗಳ ಸಂಗೀತಾಸಕ್ತರಿಗೂ ತಲುಪುವ ಮೂಲಕ ಒಬ್ಬ ಅಸಾಧಾರಣ ಕಲಾವಿದನ ಯಶೋಗಾಥೆ ಪರಿಚಯಿಸಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚೌಡಯ್ಯನವರಂತಹ ಮಹಾನುಭಾವರ ಕೊಡುಗೆಯಿಂದ ಕರ್ನಾಟಕ ಸಂಗೀತವು ನಿಸ್ಸಂದೇಹವಾಗಿ ಅತ್ಯಂತ ಮಾಧುರ್ಯವೆಂಬ ಮನ್ನಣೆಗೆ ಭಾಜನವಾಗಿದೆ. ಇಂತಹ ಮಹನೀಯರು ಭಾರತೀಯ ಸಂಸ್ಕೃತಿ ಮತ್ತು ಕಲೆಯನ್ನು ಉಳಿಸಿ–ಬೆಳೆಸಲು ಜವಾಬ್ದಾರಿಯುತವಾಗಿ ಶ್ರಮಿಸಿದ್ದಾರೆ. ಹಾಗಾಗಿಯೇ ನಮ್ಮ ಸಂಗೀತ, ನೃತ್ಯ ಮತ್ತು ಇತರ ಕಲೆಗಳು ವಿಶ್ವ ಮನ್ನಣೆ ಗಳಿಸಿವೆ ಎಂದರು.

ಕರ್ನಾಟಕ ಸಂಗೀತ ಕೇವಲ ಒಬ್ಬರಿಂದ ಉದ್ಭವವಾಗಿಲ್ಲ. ಇದರ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಹಲವು ಮಹನೀಯರ ಕೊಡುಗೆ ಇದೆ. ಶತಮಾನಗಳಿಂದ ಆಯಾಯ ಕಾಲಘಟ್ಟದಲ್ಲಿ ಮಹಾನ್ ಕಲಾವಿದರ ಕೊಡುಗೆಯಿಂದ ಬೆಳೆದು ನಿಂತಿದೆ. ಆದರೆ ನಮ್ಮ ಸಂಗೀತ ಪರಂಪರೆಯ ಶ್ರೇಷ್ಠ ಸಾಧಕರ ಬಗ್ಗೆ ನಮ್ಮ ಯುವ ಪೀಳಿಗೆ ನಿರೀಕ್ಷಿತ ಮಟ್ಟದಲ್ಲಿ ಅರಿವು ಹೊಂದಿಲ್ಲ ಎಂಬುದು ಬೇಸರದ ಸಂಗತಿ ಎಂದು ವಿಷಾದಿಸಿದರು. ಪಿಟೀಲು ನುಡಿಸಲು ವಿಶೇಷವಾದ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯ ಅಗತ್ಯ. ಚೌಡಯ್ಯನವರು ಒಬ್ಬ ಪರಿಪೂರ್ಣ ಕಲಾವಿದರು. ಶ್ರೇಷ್ಠ ಪಿಟೀಲು ವಾದಕರಲ್ಲಿ ಮುಂಚೂಣಿಯಲ್ಲಿದ್ದವರು. ಅವರ ಪಿಟೀಲು ವಾದನ ಸಾರ್ವಕಾಲಿಕ ಶ್ರೇಷ್ಠತೆ ಗಳಿಸಿದೆ. ನಾನು ಹುಟ್ಟಿದ ಕೆಲವೇ ದಿನಗಳಲ್ಲಿ ಚೌಡಯ್ಯನವರು ನಿಧನ ಹೊಂದಿದ್ದರು. ಇದು ನನ್ನ ಸಂಗೀತ ಜೀವನದಲ್ಲಿ ದೊಡ್ಡ ನಷ್ಟ ಎಂದೇ ಭಾವಿಸಿದ್ದೇನೆ. ಮೈಸೂರಿನಲ್ಲಿದ್ದ ನಮ್ಮ ಕುಟುಂಬದ ಜೊತೆಗೆ ಅವರು ಉತ್ತಮ ಬಾಂಧವ್ಯ ಹೊಂದಿದ್ದರು. ಅವರು ತಮ್ಮ ದೂರದೃಷ್ಟಿಯಿಂದ ಕರ್ನಾಟಕ ಸಂಗೀತಕ್ಕೆ ಮಹತ್ವಪೂರ್ಣ ಕೊಡುಗೆ ನೀಡಿದ್ದು, ದೂರದೃಷ್ಟಿ ಎಂಬುದು ಸುಮ್ಮನೇ ಬರುವುದಿಲ್ಲ. ಅದು ಆಳವಾದ ಅಧ್ಯಯನ ಮತ್ತು ಜ್ಞಾನವನ್ನು ಅಪೇಕ್ಷಿಸುತ್ತದೆ ಎಂದು ಹೇಳಿದರು. ಪುಸ್ತಕ ಕುರಿತು ಮಾತನಾಡಿದ ಟಿ.ಚೌಡಯ್ಯನವರ ಹಿರಿಯ ಶಿಷ್ಯೆ ಡಾ.ಅನಸೂಯ ಕುಲಕರ್ಣಿ, ನನ್ನ ಗುರುಗಳ ಕುರಿತ ಪುಸ್ತಕದ ಬಗ್ಗೆ ಮಾತನಾಡುವ ಅವಕಾಶ ಕಲ್ಪಿಸಿರುವುದಕ್ಕೆ ನಾನು ಚಿರಋಣಿ. ಸಂಗೀತ ಕಛೇರಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ನನಗೆ ತೀರ್ಪುಗಾರರಾಗಿದ್ದ ಚೌಡಯ್ಯನವರ ಪರಿಚಯವಾಯಿತು. ಅದಕ್ಕೂ ಪೂರ್ವದಲ್ಲೇ ನಮ್ಮ ಕುಟುಂಬ ಮತ್ತು ಚೌಡಯ್ಯನವರ ಕುಟುಂಬ ಸ್ನೇಹ ಬಾಂಧವ್ಯ ಹೊಂದಿದೆ ಎಂಬುದು ನನಗೆ ನಂತರ ತಿಳಿಯಿತು. ಈ ಪುಸ್ತಕ ಅತ್ಯಂತ ಸರಳ ಇಂಗ್ಲಿಷ್‌ನಲ್ಲಿದ್ದು, ಆಸಕ್ತಿ ಇದ್ದರೆ ಸಂಗೀತದ ಬಗ್ಗೆ ಜ್ಞಾನವಿಲ್ಲದಿದ್ದರೂ ಅರ್ಥ ಮಾಡಿಕೊಳ್ಳಬಹುದು. ಅಲ್ಲದೇ, ಲೇಖಕರು ಪಿಟೀಲು ನಮ್ಮ ದೇಶಕ್ಕೆ ಬಂದ ಸಂದರ್ಭ ಉಲ್ಲೇಖಿಸಿದ್ದಾರೆ. ಇದು ಸಂಗೀತ ಕುರಿತಂತೆ ಹೆಚ್ಚು ಉಪಯುಕ್ತ ಪುಸ್ತಕ ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಹಿರಿಯ ಮೃದಂಗ ವಿದ್ವಾಂಸ ಎ.ವಿ.ಆನಂದ್ ಮಾತನಾಡಿ, ಇಂದು ನಾನೇನಾದರೂ ಸಾಧನೆ ಮಾಡಿದ್ದರೆ ಅದಕ್ಕೆ ಮೂಲ ಕಾರಣ ನನ್ನ ಗುರು ಕೆ.ಎಸ್.ಮಂಜುನಾಥರು. ಇವರೊಂದಿಗೆ ಚೌಡಯ್ಯನವರು ಬಹಳ ಆತ್ಮೀಯ ಸ್ನೇಹ ಹೊಂದಿದ್ದರು. ಚೌಡಯ್ಯನವರು ನನ್ನ ಗುರುಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಅಲ್ಲದೆ, ನನಗೂ ಪ್ರೋತ್ಸಾಹ ನೀಡುತ್ತಿದ್ದರು. ಚೌಡಯ್ಯನವರು ಅತ್ಯಂತ ದೈವ ಭಕ್ತರು. ನನಗೆ 11 ವರ್ಷವಿದ್ದಾಗಲೇ ಚೌಡಯ್ಯನವರು ತಮ್ಮ ಸಂಗೀತ ಕಛೇರಿಯಲ್ಲಿ ಮೃದಂಗ ನುಡಿಸಲು ನನಗೆ ಅವಕಾಶ ಕಲ್ಪಿಸಿದರು ಎಂದು ಸ್ಮರಿಸಿದರು.

ಇದಕ್ಕೂ ಮುನ್ನ ಕರ್ನಾಟಕ ಸಂಗೀತ ಗಾಯಕರು, ಸಂಗೀತಶಾಸ್ತ್ರಜ್ಞರು ಹಾಗೂ ಪುಸ್ತಕದ ಕರ್ತೃಗಳೂ ಆದ ಡಾ.ಪದ್ಮಾವತಿ ನರಸಿಂಹನ್ ಗಾಯನ ನೀಡಿರುವ ಚೌಡಯ್ಯನವರ 3 ಕೃತಿಗಳನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲಾಯಿತು. ಇದೇ ವೇಳೆ ಶ್ರೀ ವೇದಾಂತ ದೇಶಿಕರು ರಚಿಸಿ, ಎಂ.ಎನ್.ಅನಂತ ನಾರಾಯಣ ಅಯ್ಯಂಗಾರ್ ಅವರು ಕನ್ನಡಕ್ಕೆ ಅನುವಾದಿಸಿರುವ 'ಗೋದಾ ಸ್ತುತಿ'ಯ ಗಾಯನದ (ಗಾಯಕರು; ಕೋವಿಲಡಿ ಅರ್ಚನಾ ಎಲ್.ರಾವ್) ಸಿಡಿಯನ್ನು ಬಿಡುಗಡೆ ಮಾಡಲಾಯಿತು. ಉದ್ಯಮಿಗಳು, ರೈತರು, ಅಂಕಣಕಾರರೂ ಆದ ಭಾರತೀಯ ಸೇನೆಯ ನಿವೃತ್ತ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್, ಅಂಕಣಕಾರ ಡಾ.ಹೆಚ್.ವಿ.ನಾಗರಾಜರಾವ್, ಪುಸ್ತಕದ ಕರ್ತೃ ಡಾ.ಪದ್ಮಾವತಿ ನರಸಿಂಹನ್ ಮತ್ತಿತರರು ಹಾಜರಿದ್ದರು.



ಮೈಸೂರಿನ ನಿತ್ಯೋತ್ಸವ ಕನ್ವೆನ್ಷನ್ ಸೆಂಟರ್‌ನಲ್ಲಿ ಭಾನುವಾರ ಪಿಟೀಲು ಟಿ.ಚೌಡಯ್ಯನವರ ಕುರಿತ 'ಕಲಾ ಕೌಸ್ತುಭ' ಆಂಗ್ಲ ಪುಸ್ತಕವನ್ನು ಚಿತ್ರವೀಣಾ ವಿದ್ವಾಂಸ ಎನ್.ರವಿಕಿರಣ್ (ಎಡದಿಂದ 5ನೇಯವರು) ಬಿಡುಗಡೆ ಮಾಡಿದರು. ಎಡದಿಂದ, ಭಾರತೀಯ ಸೇನೆಯ ನಿವೃತ್ತ ಕ್ಯಾಪ್ಟನ್ ಜಿ.ಆರ್.ಗೋಪಿನಾಥ್, ಟಿ.ಚೌಡಯ್ಯನವರ ಹಿರಿಯ ಶಿಷ್ಯೆ ಡಾ.ಅನಸೂಯ ಕುಲಕರ್ಣಿ, ಪುಸ್ತಕ ಕರ್ತೃ ಡಾ.ಪದ್ಮಾವತಿ ನರಸಿಂಹನ್, ಹಿರಿಯ ಮೃದಂಗ ವಿದ್ವಾಂಸ ಎ.ವಿ.ಆನಂದ್, ಅಂಕಣಕಾರ ಡಾ.ಹೆಚ್.ವಿ.ನಾಗರಾಜರಾವ್ ಚಿತ್ರದಲ್ಲಿದ್ದಾರೆ.



ಮೈಸೂರಿನ ಆಲನಹಳ್ಳಿಯಲ್ಲಿ ಚಿತ್ಕಲಾ ಪ್ರತಿಷ್ಠಾನ ನಡೆಸುತ್ತಿರುವ ಅಕ್ಕಮಹಾದೇವಿ ವಿದ್ಯಾರ್ಥಿನಿಯರ ಹಾಸ್ಟೆಲ್ ಕಟ್ಟಡದ ದುರಸ್ತಿಗೆ ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ ಸಿಎಸ್‌ಆರ್ ನಿಧಿಯಿಂದ ಸಹಾಯ ಧನದ ಚೆಕ್ ಅನ್ನು ಸಂಸ್ಥೆಯ ಅಧ್ಯಕ್ಷ ಆರ್.ರಘು ಅವರು ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಜಿ.ಬಸವರಾಜು ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಮಂಡಳಿ ಅಧ್ಯಕ್ಷ ಮಹೇಶ್ ಹಾಗೂ ಮಹಿಳಾ ಅಭಿವೃದ್ಧಿ ನಿರ್ದೇಶಕಿ ಶ್ರೀಮತಿ ರೇಣುಕಾ ರಾಜು ಹಾಗೂ ಬಿಜೆಪಿ ಮುಖಂಡ ಸುತ್ತೂರು ಶ್ರೀಕಂಠಮೂರ್ತಿ ಉಪಸ್ಥಿತರಿದ್ದರು.

ನಾಳೆ ಕೆ.ಆರ್.ಕ್ಷೇತ್ರದ ಕನ್ನಡ ಸಾಹಿತ್ಯ ಸಮ್ಮೇಳನ

ಮೈಸೂರು, ಫೆ.26(ಎಂಟಿವೈ)– ಕನ್ನಡ ಸಾಹಿತ್ಯ ಪರಿಷತ್ ನಗರ ಘಟಕದ ವತಿಯಿಂದ ಕೃಷ್ಣರಾಜ ಕ್ಷೇತ್ರದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಫೆ.28ರಂದು ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆಯಲಿದೆ ಎಂದು ಕಸಾಪ ನಗರಾಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಫೆ.28ರಂದು ಬೆಳಗ್ಗೆ 8.30ಕ್ಕೆ ಧ್ವಜಾರೋಹಣ ನಡೆಯಲಿದೆ. ನಂತರ ಜೆಎಸ್‌ಎಸ್ ಮಹಾ ವಿದ್ಯಾಪೀಠ ಮುಂಭಾಗದ ಬಸವ ಪ್ರತಿಮೆ ಬಳಿಯಿಂದ ಸಮ್ಮೇಳನಾಧ್ಯಕ್ಷ ಎಲ್.ಶಿವಲಿಂಗಪ್ಪ ಅವರನ್ನು ಜಾನಪದ ಕಲಾ ತಂಡಗಳೊಡನೆ ಸಮ್ಮೇಳನ ನಡೆಯುವ ಸ್ಥಳಕ್ಕೆ ಮೆರವಣಿಗೆ ಮೂಲಕ ಕರೆತರಲಾಗುವುದು. ಬೆಳಗ್ಗೆ 11ಕ್ಕೆ ಶಾಸಕ ಎಸ್.ಎ. ರಾಮದಾಸ್ ಅಧ್ಯಕ್ಷತೆಯಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ. ಪ್ರಧಾನ ಗುರುದತ್ ವೇದಿಕೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸುವ ಕಾರ್ಯಕ್ರಮದಲ್ಲಿ ಡಾ.ವಿ.ರಂಗನಾಥ್ ಅವರು ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ದರ್ಶನ ಕುರಿತಂತೆ ವಿಶೇಷ ಉಪನ್ಯಾಸ ನೀಡಲಿದ್ದಾರೆ. ನಂತರ ಗೋಷ್ಠಿಗಳು, ಕವಿಗೋಷ್ಠಿ, ವಿವಿಧ ಕ್ಷೇತ್ರದ ಸಾಧಕರಿಗೆ ಅಭಿನಂದನೆ, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಜಾಫರ್ ಅಸಾದಿಯವರು ಮಾತನಾಡಲಿದ್ದಾರೆ.

ಆಟೋಲಿವ್ ಕಾರ್ಖಾನೆಗೆ ಭೂಮಿ ನೀಡಿದ ರೈತರಿಗೆ ಉದ್ಯೋಗ ವಂಚನೆ: ಇಂದಿನಿಂದ ಕೆಐಎಡಿಬಿ ಮುಂದೆ ಪ್ರತಿಭಟನೆ

ಮೈಸೂರು, ಫೆ.26(ಎಂಟಿವೈ)– ಕಡಕೊಳ ಕೈಗಾರಿಕಾ ಪ್ರದೇಶದ ಆಟೋಲಿವ್ ಕಾರ್ಖಾನೆ ಸ್ಥಾಪನೆಗಾಗಿ ಭೂಮಿ ನೀಡಿದ ರೈತರ ಕುಟುಂಬದವರಿಗೆ ಕೆಲಸ ನೀಡದೇ ವಂಚಿಸುತ್ತಿರುವುದನ್ನು ಖಂಡಿಸಿ, ಫೆ.27ರಿಂದ ಕೆಐಎಡಿಬಿ ಕಚೇರಿ ಬಳಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸುತ್ತಿರುವುದಾಗಿ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಮ್ಮಾವು ಎಸ್. ರಘು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ. ಸುದ್ದಿಗೋಷ್ಠಿ ಯಲ್ಲಿ ರೈತ ಸಂಘದ ಮಂಜುನಾಥ್, ಪವನ್, ರವಿ, ರಘು ಹಾಗೂ ಅಭಿಷೇಕ್ ಇದ್ದರು.

ಶ್ರೀ ತುಳಸೀ ರಾಮಾಯಣ, ಶ್ರೀರಾಮ ತಾರಕ ಹೋಮ

ಮೈಸೂರು, ಫೆ.26– ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಮಾ.2ರಿಂದ 10ರವರೆಗೆ ಶ್ರೀಕ್ಷೇತ್ರ ಹೆಬ್ಬಳ್ಳಿಯ ಶ್ರೀ ದತ್ತಾವಧೂತ ಮಹಾರಾಜರಿಂದ ಶ್ರೀ ತುಳಸಿ ರಾಮಾಯಣ ಪ್ರವಚನ ಮಾಲಿಕೆ ಹಾಗೂ ಶ್ರೀರಾಮ ತಾರಕ ಹೋಮವನ್ನು ಜಯನಗರದ ಶ್ರೀರಾಮ ಮಂದಿರದಲ್ಲಿ ಏರ್ಪಡಿಸಲಾಗಿದೆ.

ಮಾರ್ಚ್ 9ರವರೆಗೆ ಪ್ರತಿದಿನ ಸಂಜೆ 6 ರಿಂದ 8 ಗಂಟೆಯವರೆಗೆ ಪ್ರವಚನ ನಡೆಯಲಿದ್ದು, ಶ್ರೀ ಅರ್ಜುನ್ ಅವಧೂತರು ದಿವ್ಯಸಾನ್ನಿಧ್ಯ ವಹಿಸಲಿದ್ದಾರೆ. ಮಾ.10ರಂದು ಬೆಳಗ್ಗೆ 9.30 ರಿಂದ ಶ್ರೀರಾಮ ತಾರಕ ಹೋಮ ನಡೆಯಲಿದೆ. ಎಲ್ಲಾ ಗುರು ಬಂಧುಗಳು, ಆಧ್ಯಾತ್ಮಿಕ ಜಿಜ್ಞಾಸುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗುರುಗಳ ಕೃಪೆಗೆ ಪಾತ್ರರಾಗುವಂತೆ ಟ್ರಸ್ಟ್‌ನ ಪ್ರಕಟಣೆ ಕೋರಿದೆ.

ಮೈಸೂರಲ್ಲಿ ಯೋಗ ಕ್ರೀಡಾ ಸ್ಪರ್ಧೆ

400ಕ್ಕೂ ಹೆಚ್ಚು ಯೋಗಪಟುಗಳು ಭಾಗಿ



ಮೈಸೂರು, ಫೆ.26(ಎಂಟಿವೈ)– ರಾಷ್ಟ್ರೀಯ ಹಬ್ಬಗಳ ಆಚರಣೆ ಹಿನ್ನೆಲೆಯಲ್ಲಿ ಮೈಸೂರಿನ ಚಾಮುಂಡಿ ವಿಹಾರ ಒಳ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಯೋಗ ಕ್ರೀಡಾ ಸ್ಪರ್ಧೆ 400ಕ್ಕೂ ಹೆಚ್ಚು ಮಂದಿ ಯೋಗಪಟುಗಳು ಪಾಲ್ಗೊಂಡು ಯೋಗ ಪ್ರದರ್ಶನ ನೀಡಿ ಗಮನ ಸೆಳೆದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆ ವತಿಯಿಂದ ಅಂತರರಾಷ್ಟ್ರೀಯ ಯೋಗ ಪ್ರತಿಷ್ಠಾನ ಹಾಗೂ ಮೈಸೂರು ಯೋಗ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ದಕ್ಷಿಣ ಭಾರತದ ಯೋಗಾಸನ ಕ್ರೀಡಾ ಸ್ಪರ್ಧೆಗೆ ಉಪ ಮೇಯರ್ ಡಾ.ಜಿ.ರೂಪ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ರಾಷ್ಟ್ರೀಯ ಹಬ್ಬಗಳ ಆಚರಣೆ ಅಂಗವಾಗಿ ಯೋಗ ಕ್ರೀಡಾ ಸ್ಪರ್ಧೆ ಆಯೋಜಿಸಿರುವುದು ಶ್ಲಾಘನೀಯ. ಪ್ರಸ್ತುತ ಸಂದರ್ಭದಲ್ಲಿ ಹಲವು ಕಾರಣಗಳಿಂದ ಒತ್ತಡದ ಜೀವನ ನಡೆಸಬೇಕಾದ ಅನಿವಾರ್ಯತೆ ಎದುರಾಗಿದೆ. ಇದಕ್ಕೆ ಯೋಗವೇ ಪರಿಹಾರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ಪ್ರಸಿದ್ಧಿಗೊಳಿಸಿದ್ದಾರೆ ಎಂದರು.

ಸ್ಪರ್ಧೆಯಲ್ಲಿ 5 ಜಿಲ್ಲೆಗಳಿಂದ 400 ಯೋಗ ಕ್ರೀಡಾಪಟುಗಳು ಭಾಗವಹಿಸಿದ್ದು, ಅಣಕು ಯೋಗ ಪ್ರದರ್ಶನದ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಇದೇ ವೇಳೆ ಯೋಗ ಕ್ಷೇತ್ರದಲ್ಲಿ ಜೀವಮಾನ ಪ್ರಶಸ್ತಿ ವಿಜೇತ ಅಮರ್‌ನಾಥ್, ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ವಿಜೇತ ಶೇಖರ್ ಮತ್ತು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಯ ವಿಜೇತೆ ಖುಷಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಯೋಗಾಸನ ಸಂಸ್ಥೆಯ ಅಧ್ಯಕ್ಷ ಡಾ.ಪಿ.ಕೆ. ಮೂರ್ತಿ, ಮೈಸೂರು ಯೋಗ ಒಕ್ಕೂಟದ ಉಪಾಧ್ಯಕ್ಷರಾದ ಎಂ.ಎಸ್.ರಮೇಶ್ ಕುಮಾರ್, ಎಸ್‌ಜಿಎಸ್ ಅಂತಾರಾಷ್ಟ್ರೀಯ ಯೋಗ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ನಿರಂಜನ್ ಮೂರ್ತಿ ಹಾಗೂ ಇತರರು ಇದ್ದರು.

ಅಖಿಲ ಕರ್ನಾಟಕ ರಕ್ಷಣಾ ಸೇವಾದಳದ ರಾಜ್ಯಾಧ್ಯಕ್ಷ ಸಿಂಹ ಶಿವುಗೌಡ ಕೆ.ಆರ್.ನಗರದಿಂದ ಕಣಕ್ಕೆ

ಮೈಸೂರು, ಫೆ.26(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿರುವುದಾಗಿ ಅಖಂಡ ಕರ್ನಾಟಕ ರಕ್ಷಣಾ ಸೇವಾದಳ ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಸಿಂಹ ಶಿವುಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಖಂಡ ಕರ್ನಾಟಕ ರಕ್ಷಣಾ ಸೇವಾ ದಳ ಸಂಘಟನೆಯಿಂದ ರಾಜ್ಯದಾದ್ಯಂತ 101 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುತ್ತಿದೆ. ಕನ್ನಡ ನಾಡು, ನುಡಿ, ನೆಲ, ಜಲ, ಸಂಸ್ಕೃತಿ, ಸಂಸ್ಕಾರ, ಮಹಿಳೆಯರು, ಮಕ್ಕಳು ಮತ್ತು ಪ್ರಕೃತಿ ಸಂರಕ್ಷಣೆಯ ಬಗ್ಗೆ ವಿಶಾಲ ಮನೋಭಾವನೆಗಳೊಂದಿಗೆ ಈ ಸಂಘಟನೆ ಆರಂಭಿಸಲಾಗಿದೆ. ರೈತ, ಸೈನಿಕ ಎಲ್ಲಾ ಬಗೆಯ ಕಾರ್ಮಿಕರು ಹಾಗೂ ನೊಂದ ಮಾನವ ಪರ ನೋಯಿಸಿದವರ ವಿರುದ್ಧ ಪಕ್ಷಾತೀತ, ಜಾತ್ಯತೀತ ಭೇದ ಭಾವ ಮಾಡದೇ ಶಾಂತಿಯುತ ಹಾಗೂ ಕಾನೂನಾತ್ಮಕವಾಗಿ ಕಳೆದ ಐದು ವರ್ಷಗಳಿಂದ ರಾಜ್ಯದಾದ್ಯಂತ ಹಲವು ಸಾಮಾಜಿಕ ಹೋರಾಟ ನಡೆಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುತ್ತುರಾಜು, ಎಂ.ಎಂ. ಸುಮಂತ್, ಕೌಶಿಕ್ ಇದ್ದರು.

ಬಂಜಾರ ಸಮುದಾಯ ವಿಶಿಷ್ಟ ಸಂಸ್ಕೃತಿ, ಗುರು ಪರಂಪರೆ ಹೊಂದಿದೆ



ಮೈಸೂರು, ಫೆ.26(ಎಂಟಿವೈ)– ಬಂಜಾರ ಸಮುದಾಯ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಮತ್ತು ಗುರುಪರಂಪರೆಯನ್ನು ಹೊಂದಿದೆ ಎಂದು ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ತಿಳಿಸಿದ್ದಾರೆ.


ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ನಮ್ಮಲ್ಲಿ ನಡೆಯುವ ಬುಡಕಟ್ಟು ಸಂಸ್ಕೃತಿ ಉತ್ಸವ ವಿಭಿನ್ನವಾಗಿರುತ್ತದೆ. ಯಾವುದೇ ಧರ್ಮದಲ್ಲಿಯೂ ಇಲ್ಲದ ಆಚರಣೆ ಮತ್ತು ಸಂಪ್ರದಾಯ ನಮ್ಮಲ್ಲಿದೆ. ಸಂತ ಸೇವಾಲಾಲ್‌ರ ಸಂದೇಶವು ಸೇವೆಗಾಗಿ ಬಾಳು ಎನ್ನುವುದೇ ಆಗಿದೆ. ತಾಂಡ್ಯವೊಂದರಲ್ಲಿ 145 ಯುವಕರು ದೇಶಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇವಾಲಾಲರ ಪೀಠಕ್ಕೆ ಭೇಟಿ ನೀಡಿ 10 ಕೋಟಿ ರೂ. ನೀಡುವುದಾಗಿ ಹೇಳಿದ್ದಾರೆ. ಈಗಾಗಲೇ 5 ಕೋಟಿ ರೂ. ನೀಡಿದ್ದಾರೆ. ಪ್ರಧಾನಿ ನರೇಂದ್ರಮೋದಿ ಅವರು ನಮ್ಮ ತಾಂಡ್ಯಗಳಿಗೆ ಭೇಟಿ ನೀಡಿ ಹಕ್ಕುಪತ್ರ ನೀಡಿದ್ದಾರೆ. ಇದೆಲ್ಲವೂ ನಮಗೆ ಸಂತೋಷವನ್ನುಂಟು ಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಗುರು ಭಾರದ್ವಾಜ್ ಮಾತನಾಡಿ, ಸಂತರು ತನ್ನ ಸೇವೆಯಿಂದಾಗಿಯೇ ಹೆಸರು ಮಾಡಿದರು. ಬಂಜಾರ ಸಮುದಾಯ ಅಲೆಮಾರಿಗಳು ಎಂಬ ಭಾವನೆ ಈಗಲೂ ಅನೇಕರಲ್ಲಿದೆ. ಆದರೆ ಬಂಜಾರರು ಹೆಚ್ಚು ಪ್ರತಿಭಾವಂತರಾಗಿದ್ದಾರೆ. ನಿಂತಿದ್ದರೂ ಯಾವುದಾದರೂ ಕೆಲಸ ಮಾಡುವ ಶಕ್ತಿ ಹೊಂದಿದ್ದಾರೆ. ತಾಂತ್ರಿಕ ನೈಪುಣ್ಯತೆ ಇದೆ. ಅನೇಕ ಮಂದಿ ವಿದ್ಯಾವಂತರೂ ಹಾಗೂ ಅಧಿಕಾರಿಗಳಾಗಿಯೂ ಇದ್ದಾರೆ, ಗ್ರಾಮಾಂತರ ಪ್ರದೇಶದಲ್ಲಿ ಹಿಂದುಳಿದವರನ್ನು ಗುರುತಿಸಿ ಮುಂದೆ ತರಬೇಕಾದ ಜವಾಬ್ದಾರಿ ಸರ್ಕಾರ ಮತ್ತು ಸಂಘದ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಬಂಜಾರ ಸಂಘದ ಜಿಲ್ಲಾಧ್ಯಕ್ಷ ಎಂ. ಸುಂದರ್ ಮಾತನಾಡಿ, 17ನೇ ಶತಮಾನದಲ್ಲಿ ಸಂತ ಸೇವಾಲಾಲ್ ಅವರು ಕಷ್ಟಪಟ್ಟು ದುಡಿದು ತಿನ್ನುವುದನ್ನು ಹೇಳಿಕೊಟ್ಟರು. ಕಾಡು ಇರುವ ಕಡೆ ಬಂಜಾರರು ನೆಲೆಸಿದರು. ಸುದೀರ್ಘ ಅವಧಿಯ ನಂತರ ತಾಂಡ್ಯಗಳನ್ನು ಗುರುತಿಸಿ ಕಂದಾಯ ಗ್ರಾಮ ಎಂದು ಘೋಷಿಸಿ ಹಕ್ಕುಪತ್ರ ನೀಡಲಾಗಿದೆ. ದಕ್ಷಿಣ ಭಾಗದಲ್ಲಿ ಕೆಲವು ತಾಂಡ್ಯಗಳನ್ನು ಕೈಬಿಡಲಾಗಿದೆ. ಅದನ್ನು ಸರಿಪಡಿಸುವುದಾಗಿ ಕಂದಾಯ ಸಚಿವ ಆರ್. ಅಶೋಕ್ ಭರವಸೆ ನೀಡಿದ್ದಾರೆ. ಭಾರತ ಸರ್ಕಾರ ಕೂಡ ಭಾಷಾ ಅಕಾಡೆಮಿಯನ್ನು ಸ್ಥಾಪಿಸಿ ನಮಗೆ ನೆರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಹೋರಾಟಗಾರ ತಾಯೂರು ವಿಠಲಮೂರ್ತಿ, ಮುಕ್ತ ವಿವಿ ಪ್ರಾಧ್ಯಾಪಕ ಡಾ.ಆರ್. ಸಂತೋಷ್ ನಾಯಕ್, ಎಲ್. ಚಂದ್ರ ನಾಯಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಮುನಿರಾಜು, ಉದಯಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.2.2023 ಸೋಮವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

- **ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಧ್ವಜಾರೋಹಣ, ರಾತ್ರಿ ಸಿಂಹ ವಾಸನಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.
- **ಶ್ರೀ ದಿಗಂಬರ ಜೈನ ಸಮಾಜ ಮತ್ತು ಪದ್ಮಶ್ರೀ ಜೈನ ಮಹಿಳಾ ಸಮಾಜ:** ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಅಭಿಷೇಕ ಪೂಜೆ (30 ಅರ್ಘ್ಯಗಳು), ಮಾರ್ಗ ದರ್ಶನ–ಆಶೀರ್ವಾದ: ಶ್ರೀ ಕ್ಷೇತ್ರ ಕನಕಗಿರಿಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು, ಪ್ರವಚನ: ಶ್ರೀ ಅಭಿಜಿತ್ ಶಾಸ್ತ್ರಿ ಅವರಿಂದ, ಸ್ಥಳ: ಶ್ರೀ ಶಾಂತೀಶ್ವರ ಸ್ವಾಮಿ ಬಸದಿ (ಕೋಟೆ ಬಸದಿ), ಬೆಳಗ್ಗೆ 6 ಗಂಟೆಗೆಯಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಪುರುಷರಲ್ಲಿ ಬಂಜೆತನ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ ಆಲನಹಳ್ಳಿ, ಬೆಳಗ್ಗೆ 9.30ರಿಂದ.
- **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ, ಅಭಿನಂದನಾ ಸಮಿತಿ, ಸಂಶೋಧನ ವಿದ್ಯಾರ್ಥಿಗಳ ಸಹಯೋಗ:** ಸಾರ್ಥಕ ಸಾಧಕರಿಗೆ ಬೀಳ್ಕೊಡುಗೆ ಸಮಾರಂಭ, ಅಧ್ಯಕ್ಷತೆ: ಸಂಸದ ವಿ.ಶ್ರೀನಿವಾಸಪ್ರಸಾದ್, ವಿಶೇಷ ಆಹ್ವಾನಿತರು: ಪೊಲೀಸ್ ಆಯುಕ್ತ ಬಿ. ರಮೇಶ್ ಬಾನೋತ್, ಮುಖ್ಯ ಅತಿಥಿಗಳು: ಶಾಸಕರಾದ ಎನ್. ಮಹೇಶ್, ಹರ್ಷವರ್ಧನ್, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10 ಗಂಟೆಗೆ.
- **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ಕುವೆಂಪುನಗರ ಮತ್ತು ಮೈಸೂರು ತಾಲೂಕು):** ಮೈಸೂರು ನಗರದಲ್ಲಿ ಪ್ರಗತಿ ಬಂಧು ಸ್ವ–ಸಹಾಯ ಸಂಘದ ಸದಸ್ಯರಿಗೆ ಸ್ವಉದ್ಯೋಗ ಕಾರ್ಯಗಾರ ಮತ್ತು ವಾಹನ ವಿತರಣಾ ಕಾರ್ಯಕ್ರಮ, ಉದ್ಘಾಟನೆ: ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಅಧ್ಯಕ್ಷತೆ: ಮೇಯರ್ ಶಿವಕುಮಾರ್, ಸ್ಥಳ: ಶ್ರೀ ಬಸವೇಶ್ವರ ಸಮುದಾಯ ಭವನ, ಬೋಗಾದಿ, ಬೆಳಗ್ಗೆ 10.30ಕ್ಕೆ.
- **ರಾಜೀವ್ ಗಾಂಧಿ ರೂರಲ್ ಹೌಸಿಂಗ್ ಕಾರ್ಪೋರೇಷನ್‌ನ ನೊಂದ ಫಲಾನುಭವಿಗಳು :** ಆಶ್ರಯ ಯೋಜನೆಯ ನೊಂದ ಫಲಾನುಭವಿಗಳ ಪ್ರತಿಭಟನೆ, ಸ್ಥಳ: ಚಾಮುಂಡಿ ವನಂ, ವಿದ್ಯಾರಣ್ಯಪುರಂ, ಬೆಳಗ್ಗೆ 10.30 ಗಂಟೆಗೆ.
- **ಸುವರ್ಣ ಬೆಳಕು ಫೌಂಡೇಷನ್, ಎಎಸ್‌ಜಿ ಕಣ್ಣಿನ ಆಸ್ಪತ್ರೆ ಹಾಗೂ ಮೂರ್ತಿ ವಕ್ರದಂತ ಕ್ಲಿನಿಕ್:** ಅಂಬಿಗರ ಚೌಡಯ್ಯನವರ ಜಯಂತ್ಯೋತ್ಸವದ ಅಂಗವಾಗಿ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ: ಕಾಂಗ್ರೆಸ್ ಮುಖಂಡ ಎನ್.ಎಂ., ನವೀನ್ ಕುಮಾರ್, ಅಧ್ಯಕ್ಷತೆ: ಮಹಾರಾಜ ಕಾಲೇಜು ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ವಸಂತಮ್ಮ ಹೆಚ್.ಎಂ, ಸ್ಥಳ: ಬೆಸ್ತಗೇರಿ ರಾಮಮಂದಿರ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 11 ಗಂಟೆಯಿಂದ.
- **ಕ್ಯಾತಮಾರನಹಳ್ಳಿ ಗ್ರಾಮಸ್ಥರು:** ಹುಲಿಯಮ್ಮ ಜಾತ್ರಾ ಮಹೋತ್ಸವ, ರಾಮಾನುಜ ರಸ್ತೆಯಲ್ಲಿರುವ ಎಲೆ ತೋಟದಿಂದ ಸುಮಾರು 60 ಅಡಿ ಎತ್ತರದ ಅಡಿಕೆ ಮರ ತಂದು ದೇವಾಲಯದ ಬಳಿ ಇಡುವುದು, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.
- **ಸನಾತನ ಸಭಾ, ಮೈಸೂರು :** ರಾಮಾಯಣ ಪ್ರವಚನ ಮಾಲಿಕೆ ಆರಂಭೋತ್ಸವ ಮತ್ತು ಉದ್ಘಾಟನೆ (ಅರಣ್ಯ ಕಾಂಡ–ಪ್ರವಚನ ಆರನೇ ಸರಣಿ ಮುಂದುವರಿಕೆ), ಸ್ಥಳ: ನಾದಬ್ರಹ್ಮ ಸಂಗೀತಸಭಾ, ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: ಬೆಳಿಗ್ಗೆ 6.10 ಚಿಂತನ: ಡಾ. ಆನಂದಕುಮಾ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ: ಬಾನುಲಿ ಸರಣಿ, ಲೇಖನ ಮತ್ತುಪ್ರಸ್ತುತಿ– ಎ.ಪಿಚಂದ್ರಶೇಖರ್, 6.45 ಅರಿವಿನ ಶಿಖರ: ಗಾಯನ– ಸಿ. ವಿಶ್ವನಾಥ್, ಕೆ.ಪಿ. ರೇವತಿ, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 8.30 'ವಿಶಿಷ್ಟ ವ್ಯಕ್ತಿ: ವಿಶೇಷ ಯತ್ನ' ಬಾನುಲಿ ಸರಣಿ: ಜಾಗತಿಕ ಆರ್ಥಿಕ ಸಲಹೆಗಾರ ಸಂಗಸ್ವಾಮಿ ಮೂಕನಹಳ್ಳಿ ಅವರೊಂದಿಗೆ ಸಂದರ್ಶನ, ಸಂದರ್ಶಕರು ದಿವಾಕರ ಹೆಗಡೆ, 9.40 ನಮ್ಮ ಆರೋಗ್ಯ: ರೇರ್ ಡಿಸೀಸಸ್ ಡೇ ಸಂದರ್ಭದಲ್ಲಿ ಅತಿ ವಿರಳ ಕಾಯಿಲೆಗಳು ಮತ್ತು ಚಿಕಿತ್ಸೆ ಕುರಿತು ಡಾ. ದೀಪಾ ಭಟ್ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ: ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ: ಕಿಕ್ಕೇರಿಯ ಕೇಂಬ್ರಿಡ್ಜ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಮನ್ ಕಿ ಬಾತ್: ದೇಶದ ಜನತೆಯೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕಿ ಬಾತ್: ದೇಶದ ಜನತೆಯೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ.

ಮಧ್ಯಾಹ್ನ: 12.30 ದೇವರನಾಮ: ಎಂ. ರಾಘವೇಂದ್ರ, 12.45 ಜನಪದ ಸಂಗೀತ: ಮಾದಶೆಟ್ಟಿ ಮತ್ತು ತಂಡ, 1.20 ಭಾವಗೀತೆಗಳು: ಕೆ.ಆರ್. ಸವಿತ, ಡಾ.ಸುಷ್ಮಾ ಕೃಷ್ಣಮೂರ್ತಿ, 3.45 ಯಕ್ಷಗಾನ ತಾಳ ಮದ್ದಲೆ– ಪ್ರಸಂಗ– ಶಿವ ಪಂಚಾಕ್ಷರಿ ಮಹಿಮೆ, ಪ್ರಸ್ತುತಿ– ಪುತ್ತೂರು ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿ ಕಲಾವಿದರು.

ಸಂಜೆ 6.50 ಕೃಷಿರಂಗ: ರೇಬೀಸ್ ಕುರಿತು ಅನುಸರಿಸಬೇಕಾದ ಮುನ್ನೆಚ್ಚರಿಕೆ ಹಾಗೂ ಚಿಕಿತ್ಸೆ ಕುರಿತು ಡಾ. ಸುಮಂತ್ ಬೇದ್ರೆ ಅವರೊಂದಿಗ್ ಸಂದರ್ಶನ, ಸಂದರ್ಶಕರು– ಎಸ್.ಸಿ. ಹೇಮಕುಮಾರ್. **ರಾತ್ರಿ:** 8.00 ಮನ್ ಕಿ ಬಾತ್: ದೇಶದ ಜನತೆಯೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ, ಮನದ ಮಾತಿನ ಕನ್ನಡ ಅನುವಾದದ ಮರು ಪ್ರಸಾರ, 9.15 ರಂಗಗೀತೆಗಳು: ರಾಜಸೂಯಾ ಯಾಗ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ವಿದುಷಿ ಶುಭಾ ಮುದ್ಗಲಿ– ಗಾಯನ.

ಚಂದ್ರವಾಡಿಯಲ್ಲಿಂದು, ನಂಜನಗೂಡು ತಾಲೂಕು

- **ಜೆಎಸ್‌ಎಸ್ ಪಾಲಿಟೆಕ್ನಿಕ್ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ :** ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಗ್ರಾಮದ ಧ್ವಜಾರೋಹಣ, ಬೆಳಗ್ಗೆ 8 ಗಂಟೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಸಂಜೆ 5 ಗಂಟೆಗೆ ಉಪನ್ಯಾಸ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 27 ಸೋಮವಾರ 2023

ಸಂಪುಟ: 43 | ಸಂಚಿಕೆ: 309 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ
ಈ ವರ್ಷವೂ ಕೃಪಾಂಕ

ಬೆಂಗಳೂರು, ಫೆ.26– 2022–23ನೇ ಸಾಲಿನ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಶಿಕ್ಷಣ ಇಲಾಖೆ ಸಿಹಿ ಸುದ್ದಿಯೊಂದನ್ನು ನೀಡಿದ್ದು, ಕಳೆದ ವರ್ಷದಂತೆ ಈ ಬಾರಿಯೂ ಕೃಪಾಂಕ ನೀಡಲಿದೆ ಎನ್ನಲಾಗಿದೆ. ಕೋವಿಡ್ ಕಾರಣದಿಂದಾಗಿ ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಲಾಗಿತ್ತು. ಇದೇ ಕೃಪಾಂಕವನ್ನು ಈ ವರ್ಷವೂ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಒಟ್ಟಾರೆ ಕನಿಷ್ಠ ಅಂಕ ಗಳಿಸುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶೇ.10ರಷ್ಟು ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಶೇ.5ರಷ್ಟು ಕೃಪಾಂಕವನ್ನು ನೀಡಲಿದೆ ಎಂದು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ. ಕೋವಿಡ್ ಕಾರಣದಿಂದ ಕಲಿಕೆ ಮೇಲೆ ಉಂಟಾಗಿರುವ ಪರಿಣಾಮದಿಂದ ಮಕ್ಕಳು ಇನ್ನೂ ಪೂರ್ಣ ಪ್ರಮಾಣದಲ್ಲಿ ಹೊರಬಂದಿಲ್ಲ. ಚೇತರಿಕೆಯನ್ನು ▶ 10ನೇ ಪುಟಕ್ಕೆ





ಇಂದು ಪ್ರಧಾನಿ ಮೋದಿಯಿಂದ
ಶಿವಮೊಗ್ಗ ಏರ್‌ಪೋರ್ಟ್ ಲೋಕಾರ್ಪಣೆ

ಬೆಂಗಳೂರು, ಫೆ.26– ಕರ್ನಾಟಕದಲ್ಲಿ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲು ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ಚುನಾವಣಾ ಚಾಣಕ್ಯ ಅಮಿತ್ ಶಾ ಅವರು ರಣತಂತ್ರಗಳನ್ನು ರೂಪಿಸಿದ್ದು ರಾಜ್ಯದಲ್ಲಿ ಸರಣಿ ಸಭೆ, ಸಮಾರಂಭಗಳಿಗೆ ಮುಂದಾಗಿದ್ದಾರೆ.

ಮತ್ತೊಂದೆಡೆ ಪ್ರಧಾನಿ ನರೇಂದ್ರ ಮೋದಿ ಅವರು ಸರ್ಕಾರಿ ಕಾರ್ಯಕ್ರಮಗಳ ಹೆಸರಿನಲ್ಲಿ ಪದೇ ಪದೆ ರಾಜ್ಯಕ್ಕೆ ಭೇಟಿ ನೀಡುವ ಮೂಲಕ ಭರ್ಜರಿ ಪ್ರಚಾರ ಮಾಡುತ್ತಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕನಸಿನ ಯೋಜನೆಯಾದ ಶಿವಮೊಗ್ಗ ವಿಮಾನ ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಫೆಬ್ರವರಿ 27ರಂದು ಉದ್ಘಾಟಿಸಲಿದ್ದಾರೆ. ಸುಸಜ್ಜಿತ ವಿಮಾನ ನಿಲ್ದಾಣವು 662.38 ಎಕರೆ ಭೂಮಿಯಲ್ಲಿದೆ. ರನ್‌ವೇ, ಟರ್ಮಿನಲ್ ಕಟ್ಟಡ, ಎಟಿಸಿ ಟವರ್ ಮತ್ತು ಅಗ್ನಿಶಾಮಕ ಠಾಣೆ ಕಟ್ಟಡವನ್ನು ಹೊರತುಪಡಿಸಿ, ಇದು ಟ್ಯಾಕ್ಸಿವೇ, ಏಪ್ರನ್, ಅಪ್ರೋಚ್ ರಸ್ತೆ, ಪೆರಿಫೆರಲ್ ರಸ್ತೆ ಮತ್ತು ಕಾಂಪೌಂಡ್ ಗೋಡೆಯನ್ನು ಹೊಂದಿದೆ. ಇನ್ನೂ ಹಲವು ಅಭಿವೃದ್ಧಿ ಕಾಮಗಾರಿಗಳು ಇಲ್ಲಿ ನಡೆಯಬೇಕಿದೆ. ಶಿವಮೊಗ್ಗ ಜಿಲ್ಲೆಯ ಸೊಗಾನೆಯಲ್ಲಿರುವ ಗ್ರೀನ್‌ಫೀಲ್ಡ್ ದೇಶೀಯ ವಿಮಾನ ನಿಲ್ದಾಣವನ್ನು ಕೇಂದ್ರದ ಉಡಾನ್ ಯೋಜನೆಯಡಿ ಎಲ್ಲರಿಗೂ ಕೈಗೆಟುಕುವ ವಿಮಾನ ಪ್ರಯಾಣ ಸಿಗುವ ಉದ್ದೇಶದಿಂದ ನಿರ್ಮಿಸಲಾಗಿದೆ. ಫೆಬ್ರವರಿ 27 ರಂದು ಶಿವಮೊಗ್ಗ ವಿಮಾನ ನಿಲ್ದಾಣವನ್ನು ಪ್ರಧಾನಿ ಮೋದಿ ಉದ್ಘಾಟಿಸಲಿದ್ದು, ಉದ್ಘಾಟನಾ ದಿನದಂದು ▶ 10ನೇ ಪುಟಕ್ಕೆ





ಮೈಸೂರಿನ ಯಾದವಗಿರಿಯಲ್ಲಿ ಆರ್.ಕೆ.ನಾರಾಯಣ್ ಅವರ
ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆ ಅನಾವರಣ ■ಪುಟ–9

ಮೈಸೂರಿನಲ್ಲಿ ರಾಜ್ಯ ಮಟ್ಟದ ಬೌದ್ಧ ಮಹಾ ಸಮ್ಮೇಳನ
ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂವಿಧಾನದಲ್ಲಿ ಅವಕಾಶ ನೀಡಿದ್ದರೂ ಅದನ್ನು ಧಮನ ಮಾಡಲಾಗುತ್ತಿದೆ ■ಪುಟ–6



ದೆಹಲಿ ಡಿಸಿಎಂ ಮನೀಶ್ ಸಿಸೋಡಿಯಾ ಬಂಧನ

ನವದೆಹಲಿ, ಫೆ.26– ದೆಹಲಿ ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಸಿಬಿಐ ಬಂಧಿಸಿದೆ. ಇಂದು ಮನೀಶ್ ಸಿಸೋಡಿಯಾ ಅವರನ್ನು ಸತತ 8 ಗಂಟೆಗಳ ಕಾಲ ವಿಚಾರಣೆ ನಡೆಸಿದ ಬಳಿಕ ಸಿಬಿಐ ಅವರನ್ನು ಬಂಧಿಸಿದೆ. ಸಿಸೋಡಿಯಾ ವಿಚಾರಣೆ ಹಿನ್ನೆಲೆಯಲ್ಲಿ ಸಿಬಿಐ ಕೇಂದ್ರ ಕಚೇರಿ ಸುತ್ತಮುತ್ತ ಪೊಲೀಸರು ಸೆಕ್ಷನ್ 144 ಜಾರಿಗೊಳಿಸಿದ್ದರು. ಆಮ್ ಆದ್ಮಿ ಪಕ್ಷದ (ಎಎಪಿ) ಮಹತ್ವಾಕಾಂಕ್ಷೆಯ ದೆಹಲಿ ಅಬಕಾರಿ ನೀತಿಯನ್ನು 31 ಜುಲೈ ▶ 10ನೇ ಪುಟಕ್ಕೆ



ಕೊಳ್ಳೇಗಾಲದ ಕವಿ ಮಂಜುನಾಥರ ಲಾಲಿ ಹಾಡಿಗೆ ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಮೋದಿ ಮೆಚ್ಚುಗೆ


ನವದೆಹಲಿ, ಫೆ.26–ಪ್ರಧಾನಿ ಮೋದಿಯವರ 98ನೇ ಮನ್ ಕಿ ಬಾತ್‌ನಲ್ಲಿ 'ಏಕ್ತಾ ದಿವಸ್' ಸ್ಪರ್ಧಾ ವಿಜೇತರನ್ನು ಘೋಷಿಸಿದ್ದು, ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಕವಿ ಮಂಜುನಾಥ್ ಅವರ 'ಮಲಗು ಕಂದಾ, ಮಲಗು ಕೂಸೇ' ಲಾಲಿ ಹಾಡಿಗೆ ಪ್ರಧಾನಿ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕನ್ನಡದ 'ಮಲಗು ಕಂದಾ, ಮಲಗು ಕೂಸೇ' ಲಾಲಿ ಹಾಡನ್ನು ನಾನು ಕೇಳಿದ್ದೇನೆ, ನೀವೂ ಕೇಳಿ. ಅದು ಆನಂದ ನೀಡುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದು, ಈ ಹಾಡಿಗೆ ಬಹುಮಾನ ಉಳಿದಿದೆ. ಕೊಳ್ಳೇಗಾಲದ ಕವಿ ಬಾಲಹುಣಿಸೆ ಮಂಜುನಾಥ್ ಅವರು ಕನ್ನಡದಲ್ಲಿ ಬರೆದ 'ಮಲಗು ಕಂದಾ' ಲಾಲಿ ಹಾಡನ್ನು ಕೇಂದ್ರ ಸರ್ಕಾರ ಅಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಅಖಿಲ ಭಾರತ ಹಂತದ ಲಾಲಿ ಹಾಡು ಸ್ಪರ್ಧೆಗೆ ಕಳುಹಿಸಿದ್ದರು. ಈ ಹಾಡಿಗೆ ರಾಷ್ಟ್ರ ಮಟ್ಟದ ಮನ್ನಣೆ ಜೊತೆಗೆ ಪ್ರಥಮ ಬಹುಮಾನ 6 ಲಕ್ಷ ರೂ. ಲಭಿಸಿತ್ತು. ಈ ಕುರಿತು ಕೊಳ್ಳೇಗಾಲದಲ್ಲಿ 'ಮೈಸೂರು ಮಿತ್ರ'ನ ಜೊತೆ ಮಾತನಾಡಿದ ಮಂಜುನಾಥ್, ಲಾಲಿ ಹಾಡಿಗೆ ರಾಷ್ಟ್ರೀಯ ಮನ್ನಣೆ ಸಿಕ್ಕಿರುವುದು ಸಂತಸದ ವಿಚಾರ. ಇದಕ್ಕೆ ಪ್ರೇರಣೆ ಅಮ್ಮ ಮತ್ತು ಅಜ್ಜಿಯ ಲಾಲಿ ಹಾಡು. ಈ ಹಾಡು ನಾನು ಕೇಳಿದ್ದೇನೆ, ನೀವೂ ಕೇಳಿ. ಆನಂದ ನೀಡುತ್ತದೆ ಎಂದು ಪ್ರಧಾನಿ ಮೋದಿಯವರು ▶ 10ನೇ ಪುಟಕ್ಕೆ


ಮಂಜುನಾಥ್

—— ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ——

ನಾಳೆಯಿಂದ ಬೆಂಗಳೂರು–ನಿಡಘಟ್ಟ ನಡುವೆ ಟೋಲ್ ಫೀ ಸಂಗ್ರಹ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ವಿವಿಧ ಬಗೆಯ ವಾಹನಗಳಿಗೆ ಶುಲ್ಕ ನಿಗದಿ




ಮೈಸೂರು, ಫೆ.26(ಆರ್‌ಕೆ)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಫೆಬ್ರವರಿ 28ರಿಂದ ಟೋಲ್ ಶುಲ್ಕ ಸಂಗ್ರಹಿಸಲು ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ನಿರ್ಧರಿಸಿದೆ. ಮೊದಲ ಹಂತದಲ್ಲಿ ಬೆಂಗಳೂರು–ನಿಡಘಟ್ಟ ನಡುವಿನ ಟೋಲ್‌ಗೇಟ್‌ನಲ್ಲಿ ಶುಲ್ಕ ಸಂಗ್ರಹಿಸುತ್ತಿದ್ದು, ವಿವಿಧ ಮಾದರಿಯ ವಾಹನಗಳಿಗೆ ಟೋಲ್ ಶುಲ್ಕ ನಿಗದಿಪಡಿಸಿ ಪ್ರಾಧಿಕಾರವು ಅಧಿಸೂಚನೆ ಹೊರಡಿಸಿದೆ. ಕಣಿಮಿಣಿಕೆ–ಶೇಷಗಿರಿಹಳ್ಳಿ ಗ್ರಾಮಗಳ ಟೋಲ್ ಪ್ಲಾಜಾದಲ್ಲಿ ಮಂಗಳವಾರ ಬೆಳಗ್ಗೆ 8 ಗಂಟೆಯಿಂದ ಶುಲ್ಕ ಸಂಗ್ರಹಿಸಲು ಸಿದ್ಧತೆ ಮಾಡಲಾಗಿದೆ.

ಬೆಂಗಳೂರು–ನಿಡಘಟ್ಟ ನಡುವೆ ಹೆದ್ದಾರಿಯ ಮೇನ್ ಕ್ಯಾರಿಯೇಜ್ ಕಾಮಗಾರಿ ಪೂರ್ಣಗೊಂಡಿದ್ದು, ಟೋಲ್ ಸಂಗ್ರಹ ಸಂಬಂಧ ಪ್ರಾಧಿಕಾರದ ಯೋಜನಾ ನಿರ್ದೇಶಕ ಬಿ.ಟಿ.ಶ್ರೀಧರ ಅವರು ರಾಮನಗರ ಜಿಲ್ಲಾಧಿಕಾರಿ ಹಾಗೂ ಎಸ್ಪಿ ಅವರಿಗೆ ಪತ್ರ ಬರೆದಿದ್ದಾರೆ. ಬೆಂಗಳೂರು–ನಿಡಘಟ್ಟ ನಡುವೆ 56 ಕಿ.ಮೀ. ಮತ್ತು ನಿಡಘಟ್ಟ–ಮೈಸೂರು ನಡುವೆ 61 ಕಿ.ಮೀ.ವರೆಗೆ ಎರಡು ಪ್ಯಾಕೇಜ್‌ಗಳಲ್ಲಿ ಎಕ್ಸ್‌ಪ್ರೆಸ್ ವೇ ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಎರಡನೇ ಪ್ಯಾಕೇಜ್ ಕಾಮಗಾರಿ ಪೂರ್ಣಗೊಳ್ಳದಿರುವುದರಿಂದ ಅದರ ಟೋಲ್ ಫೀ ಸಂಗ್ರಹಿಸಲು ಇನ್ನೂ ದಿನಾಂಕ ನಿಗದಿಯಾಗಿಲ್ಲ. ಪೂರ್ಣಗೊಂಡ ನಂತರ ಶ್ರೀರಂಗಪಟ್ಟಣ ಬಳಿಯ ಕೆ.ಶೆಟ್ಟಹಳ್ಳಿ ಗಣಂಗೂರು ನಡುವೆ ಪ್ಲಾಜಾದಲ್ಲಿ ಶುಲ್ಕ ಸಂಗ್ರಹಿಸಲಾಗುವುದು. ಪ್ಲಾಜಾಗಳು 11 ಗೇಟ್‌ಗಳನ್ನು ಹೊಂದಿದ್ದು, ಫಾಸ್ಟ್ಯಾಗ್ ಸೇರಿದಂತೆ ಹೈಟೆಕ್ ಟೋಲ್ ಸಿಸ್ಟಂಗಳನ್ನು ಅಳವಡಿಸಿ ವಾಹನಗಳು ವೇಗವಾಗಿ ಹೋಗಲು ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ.

ವಿವಿಧ ಬಗೆಯ ವಾಹನಗಳ ಟೋಲ್ ದರ

ಕ್ರಮ ಸಂಖ್ಯೆ	ವರ್ಗ	ಒಂದು ಬಾರಿಗೆ ಪ್ರಯಾಣಕ್ಕೆ ದರ (ರೂ.ಗಳಲ್ಲಿ)	ಹಿಂತಿರುಗುವ ಪ್ರಯಾಣಕ್ಕೆ ದರ ಒಂದು ದಿನಕ್ಕೆ (ರೂ.ಗಳಲ್ಲಿ)	ಟ್ರಾಫಿಕ್ ದರ (ಟೋಲ್ ಇರುವ ಜಿಲ್ಲೆಯಲ್ಲಿ ನೋಂದಣಿಯಾದ ಸ್ಥಳೀಯ ವಾಣಿಜ್ಯ ವಾಹನಗಳು)	50 ಬಾರಿ ಒಂದು ಕಡೆ ಪ್ರಯಾಣಕ್ಕೆ ದರ ವಾಹನಗಳ ತಿಂಗಳ ಪಾಸ್ ದರ
1	ಕಾರ್/ಜೀಪ್/ವ್ಯಾನ್	135	205	70	4,525
2	ಲಘು ವಾಣಿಜ್ಯ ವಾಹನಗಳು, ಲಘು ಗೂಡ್ಸ್ ವಾಹನಗಳು ಅಥವಾ ಮಿನಿ ಬಸ್	220	330	110	7,315
3	ಬಸ್ ಅಥವಾ ಟ್ರಕ್ (2 ಆಕ್ಸೆಲ್)	460	690	230	15,325
4	3 ಆಕ್ಸೆಲ್ ವಾಣಿಜ್ಯ ವಾಹನಗಳು	500	750	250	16,715
5	ಬೃಹತ್ ಕನ್‌ಸ್ಟ್ರಕ್ಷನ್ ಮೆಷಿನ್‌ಗಳು/ಅರ್ಥ್ ಮೂವಿಂಗ್ ಎಕ್ವಿಪ್‌ಮೆಂಟ್/ಎಂಎವಿ (4–6 ಆಕ್ಸೆಲ್)	720	1,080	360	24,030
6	ಓವರ್‌ಸೈಜ್ಡ್ ವೆಹಿಕಲ್ಸ್ (7 ಅಥವಾ ಅಧಿಕ ಆಕ್ಸೆಲ್)	880	1,315	440	29,255



ನಕ್ಕರೆ ಅದೇ ಸ್ವರ್ಗ

ಆನೆ : ಐ ಲವ್ ಯೂ ಕಣೆ.
ಇರುವೆ : ಬೇಡ ಕಣೋ ನನ್ನನ್ನು ಮರೆತುಬಿಡು.
ಆನೆ : ಯಾಕೆ?
ಇರುವೆ : ಪ್ಲೀಸ್ ಕಣೋ ನಮ್ಮ ಮನೇಲಿ ಇಷ್ಟು ದೊಡ್ಡ ಸಂಬಂಧ ಒಪ್ಪಲ್ಲ...!

ಮೈಸೂರು ಮಿತ್ರ

ಸೋಮವಾರ, 27 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಧ್ಯಾನ ಎಂದರೆ ಮನೆಗೆ ಹಿಂತಿರುಗಿದಂತೆ. ಅದು ನಿಮ್ಮ ಅಂತರಾಳದ ಕೇಂದ್ರದಲ್ಲಿ ನೆಲೆಗೊಳ್ಳುವ ಪ್ರಕ್ರಿಯೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡಂತೆ.

ನಿಮ್ಮ ಪತ್ರಗಳು

ಮನೆಯೊಳಗೆ ನುಗ್ಗುವ ಯುಜಿಡಿ ನೀರು

ಮಾನ್ಯರೆ,

ಮೈಸೂರಿನ ಕುವೆಂಪುನಗರ 3ನೇ ಹಂತ, 4ನೇ ಕ್ರಾಸ್ ಕೆಎಚ್‌ಬಿ ಕಾಲೋನಿ



(ಇಡಬ್ಲ್ಯೂಎಸ್)ಯಲ್ಲಿ ಕಳೆದ ಒಂದು ವರ್ಷದಿಂದ ಯುಜಿಡಿ ಸಮಸ್ಯೆ ತಲೆದೋರಿದ್ದು, ನಿವಾಸಿಗಳು ಪರಿತಪಿಸುವಂತಾಗಿದೆ. ತಿಂಗಳಲ್ಲಿ ಐದಾರು ಬಾರಿ ಯುಜಿಡಿ ಸಮಸ್ಯೆ ತಲೆದೋರುವುದರಿಂದ ಗಲೀಜು ನೀರು ಮನೆಯೊಳಗೆ ನುಗ್ಗಿ ಗಬ್ಬು ವಾಸನೆ ಉಂಟಾಗುತ್ತಿದೆಯಲ್ಲದೆ, ಜೀವನವೇ ನರಕಯಾತನೆಯಾಗಿದೆ. ಯುಜಿಡಿಗೆ ಅಳವಡಿಸಿರುವ ಪೈಪುಗಳು ತುಂಬಾ ಹಳೆದಾಗಿರುವುದರಿಂದ ಕೊಳಚೆ ನೀರು ಸರಾಗವಾಗಿ ಹರಿಯಲಾಗದೆ ಮನೆಯೊಳಗೆ ನುಗ್ಗುತ್ತಿದೆ.

ಈ ಸಂಬಂಧ ವಾರ್ಡಿನ ಕಾರ್ಪೊರೇಟರ್ ಮತ್ತು ನಗರ ಪಾಲಿಕೆಗೆ ಹಲವಾರು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅವರುಗಳು ಈ ಸಮಸ್ಯೆ ಬಗ್ಗೆ ಸ್ಪಂದಿಸುವ ಲಕ್ಷಣಗಳು ಕಾಣುತ್ತಿಲ್ಲ. ಇದರಿಂದ ನಿವಾಸಿಗಳು ತುಂಬಾ ನೋವಿನಲ್ಲಿ ಜೀವನ ನಿರ್ವಹಿಸಬೇಕಾಗಿದೆ.

ಕ್ಷೇತ್ರದ ಶಾಸಕರು ಮತ್ತು ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ತಕ್ಷಣ ಇದರತ್ತ ಗಮನಹರಿಸಿ ಈ ಯುಜಿಡಿ ಲೈನ್ ಬದಲಾಯಿಸಿ ನಮಗಾಗುತ್ತಿರುವ ಈ ತೊಂದರೆಯನ್ನು ನಿವಾರಿಸಬೇಕು ಎಂದು ಕೈಮುಗಿದು ಬೇಡಿಕೊಳ್ಳುತ್ತೇವೆ.

– ನೊಂದ ನಿವಾಸಿಗಳು, ಕುವೆಂಪುನಗರ, ಮೈಸೂರು.

ನೌಕರರ ಪಿಂಚಣಿ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ರಾಜ್ಯದ ಅನುದಾನಿತ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ನೌಕರರು (ನಿವೃತ್ತರೂ ಸೇರಿದಂತೆ) ಕಳೆದ ಹಲವಾರು ದಿನಗಳಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶಾಂತಿಯುತ ಹೋರಾಟ ನಡೆಸುತ್ತಿದ್ದರೂ ಸರ್ಕಾರದಿಂದ ಈವರೆಗೆ ಸ್ಪಷ್ಟ ಭರವಸೆ ಸಿಗದಿರುವುದು ಬೇಸರ ಮತ್ತು ದುರದೃಷ್ಟಕರ ಸಂಗತಿ.

ಎನ್‌ಪಿಎಸ್ ಯೋಜನೆ ವಂತಿಗೆಯನ್ನು ಸರ್ಕಾರವೇ ಭರಿಸಬೇಕೆಂಬುದು ಧರಣಿನಿರತ ಅನುದಾನಿತ ನೌಕರರ ಬೇಡಿಕೆ. ಕಳೆದ ಹಲವಾರು ದಿನಗಳಿಂದ ನಿರಂತರವಾಗಿ ಅನುದಾನಿತ ನೌಕರರು ಬಹಳ ದೂರ ದೂರದ ಊರುಗಳಿಂದ ಆಗಮಿಸಿ ತಮ್ಮ ಕುಟುಂಬ ಬಿಟ್ಟು ಹಗಲು–ರಾತ್ರಿ ಎನ್ನದೆ ಶಾಂತಿಯುತವಾಗಿ ಧರಣಿ ನಡೆಸುತ್ತಿದ್ದಾರೆ. ಇಷ್ಟಾದರೂ ಅವರ ಬೇಡಿಕೆಗೆ ಸರ್ಕಾರ ಕಣ್ತೆರೆಯದಿರುವುದು ವಿಷಾದನೀಯ. ಅನುದಾನಿತ ನೌಕರರ ನಿವೃತ್ತಿ ನಂತರದ ಜೀವನ ಸಂಕಷ್ಟಮಯವಾಗಿದೆ. ಅವರ ಕುಟುಂಬಕ್ಕೆ ಜೀವನ ಭದ್ರತೆಯಿಲ್ಲ. ಹೀಗಾಗಿ ಅನುದಾನಿತ ನೌಕರರ ನ್ಯಾಯಯುತ ಬೇಡಿಕೆಗಳಿಗೆ ಶೀಘ್ರವಾಗಿ ಸ್ಪಂದಿಸುವುದು ಸರ್ಕಾರದ ಕರ್ತವ್ಯ.

– ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಮೊಬೈಲ್ ಕಂಪನಿಗಳ ಕರೆಗಳಿಗೆ ಕಡಿವಾಣವಿರಲಿ

ಮಾನ್ಯರೆ,

ಮೊಬೈಲ್ ಫೋನ್ ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಅತ್ಯಗತ್ಯವಾಗಿದೆ. ಇದರಿಂದ ಸಾಕಷ್ಟು ಅನುಕೂಲಗಳು ಹಾಗೂ ಅನಾನುಕೂಲಗಳು ಇರುತ್ತವೆ. ಮೊಬೈಲ್ ಕಂಪನಿಗಳಿಂದ ಹಲವಾರು ಕರೆಗಳು ಸಮಯದ ಮಿತಿ ಇಲ್ಲದೆ ಬರುತ್ತಿರುತ್ತವೆ. ಆ ವ್ಯಕ್ತಿ ಹಲವಾರು ಕಾರಣಕ್ಕಾಗಿ ಕರೆಯ ನಿರೀಕ್ಷೆಯಲ್ಲಿ ಇರಬಹುದು. ವ್ಯಕ್ತಿಯು ರಸ್ತೆಯಲ್ಲಿ ವಾಹನ ಚಲಾಯಿಸುತ್ತಿರಬಹುದು. ಆ ಸಂದರ್ಭದಲ್ಲಿ ಮೊಬೈಲ್ ಕಂಪನಿಗಳಿಂದ ಕರೆ ಮಾಡಿ ರೀಚಾರ್ಜ್ ಮಾಡಿಸಿ, ಚುನಾವಣೆಯ ಪ್ರಚಾರದ ಕರೆಗಳು ಹೊತ್ತು ಗೊತ್ತಿಲ್ಲದೆ ಬರುತ್ತಿರುತ್ತವೆ.

ವಾಹನ ಓಡಿಸುತ್ತಿದ್ದಾಗ ಕರೆ ಬಂದರೆ ನಿರೀಕ್ಷಿತ ಕರೆ ಎಂದು ಫೋನ್ ರಿಸೀವ್ ಮಾಡಿದರೆ ಮೊಬೈಲ್ ಕಂಪನಿಗಳ ಅನಗತ್ಯ ಕರೆಗಳಾಗಿರುತ್ತವೆ. (ವಾಹನ ಚಲಾಯಿಸುವಾಗ ಮೊಬೈಲ್‌ನಲ್ಲಿ ಮಾತನಾಡಬಾರದು ಎಂದು ಕಾನೂನು ಇದ್ದರೂ ಕೆಲವರು ನಿಯಮವನ್ನು ಪಾಲಿಸುವುದಿಲ್ಲ). ಆದ್ದರಿಂದ ಜನರ ಪರಿಸ್ಥಿತಿ ಅರಿತು ನಿರ್ದಿಷ್ಟ ಸಮಯದಲ್ಲಿ ಕರೆ ಮಾಡಿ ಇದರಿಂದ ರಸ್ತೆಯಲ್ಲಿ ಅಪಘಾತಗಳು ತಡೆಗಟ್ಟಿದಂತಾಗುತ್ತದೆ. ಆದ್ದರಿಂದ ಯಾವುದೇ ಕರೆ ಮಾಡಬೇಕಾದರೂ (ಮೊಬೈಲ್ ಕಂಪನಿಗಳು) ಅದಕ್ಕೂ ನಿರ್ದಿಷ್ಟ ಸಮಯ ಮೀಸಲಿಡಿ. ಇದು ಸಾರ್ವಜನಿಕರ ಹಿತ ದೃಷ್ಟಿಗೂ ಒಳ್ಳೆಯದು.

– ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಆದರ್ಶ ಮೆರೆದ ನಿವೃತ್ತ ಅಧಿಕಾರಿ

ಮಾನ್ಯರೆ,

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕತ್ತರಘಟ್ಟ ಗ್ರಾಮದ ಲೋಕೋಪಯೋಗಿ ಇಲಾಖೆಯ ನಿವೃತ್ತ ಇಂಜಿನಿಯರ್ ಕೆ.ಪಿ. ಶಿವಕುಮಾರ್ ಅವರು ತಾವು ಓದಿದ ತಮ್ಮ ಗ್ರಾಮದ ಶಾಲೆಯ ದುಸ್ಥಿತಿಯನ್ನು ಕಂಡು, ನೂತನ ಕಟ್ಟಡ ನಿರ್ಮಾಣಕ್ಕೆ ತಮ್ಮ ತಂದೆಯ ಜ್ಞಾಪಕಾರ್ಥವಾಗಿ 50 ಲಕ್ಷ ರೂ. ದೇಣಿಗೆ ನೀಡಿರುವುದು ನಿಜಕ್ಕೂ ಮೆಚ್ಚುಗೆ ವಿಷಯ. ಹಳ್ಳಿ–ಹಳ್ಳಿಗಳಲ್ಲಿ ವ್ಯಾಸಂಗ ಮಾಡಿ, ಇಂದು ದೊಡ್ಡ ದೊಡ್ಡ ಸರ್ಕಾರದ ಹುದ್ದೆಗಳಲ್ಲಿ ಇರುವವರು, ತಾವುಗಳು ಓದಿದ ಶಾಲೆಗಳಿಗೆ ಒಮ್ಮೆ ಭೇಟಿ ನೀಡಿ, ನಿಮ್ಮೂರಿನಲ್ಲೂ, ಇಂತಹ ಬಿದ್ದು ಹೋಗುತ್ತಿರುವ ಶಾಲೆಗಳು ಸಿಗುತ್ತವೆ. ಈ ಶಾಲೆಗಳಿಗೆ ಪುನರ್ ಜೀವನ ಕಲ್ಪಿಸಿ, ಶಿವಕುಮಾರ್ ಅವರ ಆದರ್ಶ ಎಲ್ಲ ಶ್ರೀಮಂತ ಅಧಿಕಾರಿಗಳಿಗೆ ಮಾರ್ಗದರ್ಶನವಾಗಲಿ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಹೊಂಗೆಯ ಮರದ ಬುಡಕ್ಕೆ ಕಸ ಸುರಿದು ಬೆಂಕಿ

ಮಾನ್ಯರೆ,



ಮೈಸೂರು ಕುವೆಂಪುನಗರದ ನೃಪತುಂಗ ರಸ್ತೆಯ ಮನೆಯೊಂದರ ಮಾಲೀಕರು ಭಾನುವಾರ ಬೆಳಗ್ಗೆ ಮನೆಯ ಸುತ್ತಮುತ್ತಲಿನ ಕಸವನ್ನು ಹೊಂಗೆಯ ಮರದ ಬುಡಕ್ಕೆ ಸುರಿದು ಬೆಂಕಿ ಹಚ್ಚಿದ್ದಾರೆ.

ತಕ್ಷಣ ನಾನು ಮಣ್ಣು ಸುರಿದು ಬೆಂಕಿಯನ್ನು ನಂದಿಸದಿದ್ದರೆ ಇಡೀ ಮರವೇ ಬೆಂಕಿಗೆ ಆಹುತಿಯಾಗುತ್ತಿತ್ತು. ಕಸಕ್ಕೆ ಬೆಂಕಿ ಹಚ್ಚುವುದೂ ಅಪರಾಧ. ಮರವನ್ನು ಜೀವಂತವಾಗಿ ಸುಡುವುದು ಗಂಭೀರ ಅಪರಾಧ. ಇಂತಹವರ ವಿರುದ್ಧ ಕ್ರಮ ಜರುಗಿಸಿ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಆಸೆ ಈಡೇರಿಸೋ ಅಪ್ಪ ಬೇಕು !

> ಮಕ್ಕಳ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ತನ್ನ ಶಕ್ತಿಮೀರಿ ಕೆಲಸ ಮಾಡುತ್ತಾ, ಕೈಮೀರಿ ಸಾಲ ಮಾಡುತ್ತಾ, ಮಕ್ಕಳ ಸುಖನಿದ್ರೆಗಾಗಿ ನಿದ್ದೆಗೆಡುವ ಶ್ರಮ ಜೀವಿ ಅಪ್ಪ. ಮಕ್ಕಳ ಅಗತ್ಯವನ್ನು ಅರಿಯುವ ಅಪ್ಪ ಅವಧಿಗೂ ಮೀರಿ ಮೊದಲೇ ಒದಗಿಸುವ ಪ್ರಯತ್ನ ಮಾಡುತ್ತಾನೆ. ತಾನು ಸಾಧಾರಣ ಬಟ್ಟೆ ಧರಿಸಿದರೂ ಮಕ್ಕಳು ಒಳ್ಳೆಯ ಬಟ್ಟೆ ಧರಿಸಿಲಿ ಎಂದು ಬಯಸುತ್ತಾನೆ. ತಾನು ಕಡಿಮೆ ಬೆಲೆಯ ಮೊಬೈಲ್ ಫೋನ್ ಬಳಸಿದರೂ, ಮಕ್ಕಳಿಗೆ ದುಬಾರಿ ಬೆಲೆಯ ಫೋನ್ ಕೊಡಿಸುತ್ತಾನೆ. ತಾನು ಬಸ್‌ನಲ್ಲಿ ಪಯಣಿಸಿದರೂ, ಮಕ್ಕಳು ಬೈಕ್‌ನಲ್ಲಿ ಸ್ವತಂತ್ರವಾಗಿ ಓಡಾಡಲಿ ಎಂದು ಬೈಕ್ ಕೊಡಿಸಲು ಇಚ್ಛಿಸುತ್ತಾನೆ. ಆದರೆ ಇಂದಿನ ಮಕ್ಕಳಿಗೆ ದುರಾಸೆ ಜಾಸ್ತಿ. ಜಗತ್ತಿನ ಸುಖವನ್ನೆಲ್ಲಾ ಹದಿಹರೆಯದಲ್ಲಿಯೇ ಅನುಭವಿಸಿ ಬಿಡಬೇಕೆಂಬ ಅಭೀಪ್ಸೆ. ಅಪ್ಪ ತನ್ನೆಲ್ಲಾ ಸುಖವನ್ನು ತ್ಯಾಗ ಮಾಡಿ ಒದಗಿಸಿದ ಅಗತ್ಯಗಳಿಗೆ ಬೆಲೆ ಕೊಡದೆ ಅಪ್ಪನಿಂದ ತಮ್ಮ ಆಸೆ-ದುರಾಸೆಗಳನ್ನು ಈಡೇರಿಸಿಕೊಳ್ಳಲು ಬಯಸುತ್ತಾರೆ.

'ಮೈ ವೈಫ್ ಈಸ್ ಮೈ ಲೈಫ್' ಎಂದು ತಮ್ಮ ಕಾರಿನ ಗಾಜಿನ ಮೇಲೆ ಬರೆಯಿಸಿಕೊಂಡಿರುವವರು ಹೇರಳ. 'ಮೈ ಫಾದರ್ ಈಸ್ ಮೈ ಹೀರೋ' ಎಂದು ಬರೆಯಿಸಿಕೊಂಡವರು ವಿರಳ. ಮೂವತ್ತು ವರ್ಷದ ಅಪ್ಪನ ಪ್ರೀತಿಗಿಂತ ಮೂರು ವರ್ಷದ ಮಡದಿ ಪ್ರೀತಿ ಹೆಚ್ಚಾಗುವುದು ಸೋಜಿಗದ ಸಂಗತಿ. ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ ಎಂದ ಬಾಳ ಸಂಗಾತಿ ಹೊಂದಾಣಿಕೆ ಕೊರತೆಯಿಂದ ಎಂದಾದರು ಒಂದು ಒಂದು ದಿನ ಕೈ ಕೊಟ್ಟರೂ ಕೊಡಬಹುದು, ಆದರೆ ಜನ್ಮ ಕೊಟ್ಟ ಅಪ್ಪ ಎಂದಿಗೂ ಕೈಕೊಡುವುದಿಲ್ಲ. ಅಪ್ಪನ ಧರ್ಮ ಎನ್ನುವುದೇ ಹಾಗೆ, ಅದು ಕೈಕೊಡುವುದಲ್ಲ, ಕೈಹಿಡಿಯುವ ಧರ್ಮ. ಮಕ್ಕಳು ಸಾಮಾಜಿಕವಾಗಿ ತನ್ನ ಕುಟುಂಬಕ್ಕೆ ಅವಮಾನವಾಗುವ ರೀತಿಯಲ್ಲಿ ನಡೆದುಕೊಂಡರೂ, ತನ್ನ ಮನದಲ್ಲಿ ಹಾಗೂ ಮನೆಯಲ್ಲಿ ಆಶ್ರಯ ಕೊಡಲು ಸಾಧ್ಯವಾಗುವುದು ಅಪ್ಪನಿಗೆ ಮಾತ್ರ. ತಾನು ಮಾಡಿದ ತ್ಯಾಗಕ್ಕೆ ಪ್ರತಿಯಾಗಿ ಏನನ್ನೂ ಬಯಸದೇ ಕೇವಲ ಮಕ್ಕಳಿಂದ ಪ್ರೀತಿಯನ್ನು ಬಯಸುವ ಹೃದಯವಂತ ಅಪ್ಪ.



ಮಹಿಳೆಯೊಬ್ಬಳು ಮಗುವೊಂದಕ್ಕೆ ಜನ್ಮ ನೀಡಿದಾಗ ತಾಯಿ ಮಾತ್ರ ಹುಟ್ಟುವುದಿಲ್ಲ, ಒಬ್ಬ ತಂದೆಯೂ ಸಹ ಹುಟ್ಟುತ್ತಾನೆ. ಅಷ್ಟೇ ಅಲ್ಲ ಆ ಅಪ್ಪನಿಗೆ ಮಗುವಿನ ಕುರಿತು ಅನೇಕ ಕನಸುಗಳು ಹುಟ್ಟುತ್ತವೆ. ಅಪ್ಪನಾದ ಮೇಲೆ ಆತ ತನಗಾಗಿ ಬದುಕುವುದನ್ನೇ ಮರೆಯುತ್ತಾನೆ. ಸದಾ ತನ್ನ ಕುಟುಂಬದ ಶ್ರೇಯಸ್ಸಿಗಾಗಿಯೇ ದುಡಿಯುತ್ತಾನೆ, ಅವಿರತವಾಗಿ ಶ್ರಮಿಸುತ್ತಾನೆ. ಮಕ್ಕಳ ಖುಷಿಗಾಗಿ ತನ್ನ ಖುಷಿಯನ್ನು ಬಲಿಕೊಡುತ್ತಾನೆ ಅಥವಾ ಮಕ್ಕಳ ಖುಷಿಯಲ್ಲೇ ತನ್ನ ಖುಷಿಯನ್ನು ಕಂಡುಕೊಳ್ಳುತ್ತಾನೆ. ಅಪ್ಪ ಮಕ್ಕಳ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಮಾಡುವಷ್ಟು ಮಕ್ಕಳು ಅಪ್ಪನ ಹುಟ್ಟು ಹಬ್ಬವನ್ನು ಆಚರಿಸುವುದಿಲ್ಲ. ಅದಾವುದಕ್ಕೂ ತಲೆಕೆಡಿಸಿಕೊಳ್ಳದ ಅಪ್ಪ ಇಳಿವಯಸ್ಸಿನಲ್ಲಿ ನನ್ನ ಮಕ್ಕಳು ನನಗೆ ಆಸರೆಯಾಗಬಹುದು ಎಂಬ ಭೇಷರತ್ ಭರವಸೆ ಇಟ್ಟುಕೊಂಡಿರುತ್ತಾನೆ. ಅಪ್ಪ ಮಾಡುವ ಒಂದು ತಪ್ಪು ಕೆಲಸವೆಂದರೆ ತನ್ನ ಮಕ್ಕಳ ಮೇಲಿನ ಅತಿಯಾದ ಪ್ರೀತಿ ಹಾಗೂ ಕಾಳಜಿ ಭರದಲ್ಲಿ ತನ್ನ ಹೆತ್ತವರನ್ನು ಕಡೆಗಣಿಸಿಬಿಡುತ್ತಾನೆ.

ಮಕ್ಕಳ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ತನ್ನ ಶಕ್ತಿಮೀರಿ ಕೆಲಸ ಮಾಡುತ್ತಾ, ಕೈಮೀರಿ ಸಾಲ ಮಾಡುತ್ತಾ, ಮಕ್ಕಳ ಸುಖನಿದ್ರೆಗಾಗಿ ನಿದ್ದೆಗೆಡುವ ಶ್ರಮಜೀವಿ ಅಪ್ಪ. ಮಕ್ಕಳ ಅಗತ್ಯವನ್ನು ಅರಿಯುವ ಅಪ್ಪ ಅವಧಿಗೂ ಮೀರಿ ಮೊದಲೇ ಒದಗಿಸುವ ಪ್ರಯತ್ನ ಮಾಡುತ್ತಾನೆ. ತನ್ನ ಬದುಕಿನಲ್ಲಾದ ಕೊರತೆಗಳು ತನ್ನ ಮಕ್ಕಳಿಗೆ ಆಗಬಾರದು ಎಂದು ಭಾವಿಸುತ್ತಾನೆ. ತಾನು ಸಾಧಾರಣ ಬಟ್ಟೆ ಧರಿಸಿದರೂ ಮಕ್ಕಳು ಒಳ್ಳೆಯ ಬಟ್ಟೆ ಧರಿಸಿಲಿ ಎಂದು ಕೊಡಿಸುತ್ತಾನೆ. ತಾನು ಕಡಿಮೆ ಬೆಲೆಯ ಮೊಬೈಲ್ ಫೋನ್ ಬಳಸಿದರೂ, ಮಕ್ಕಳಿಗೆ ದುಬಾರಿ ಬೆಲೆಯ ಫೋನ್ ಕೊಡಿಸುತ್ತಾನೆ. ಆದರೆ ಇಂದಿನ ಮಕ್ಕಳಿಗೆ ದುರಾಸೆ ಜಾಸ್ತಿ. ಜಗತ್ತಿನ ಸುಖವನ್ನೆಲ್ಲಾ ಹದಿಹರೆಯದಲ್ಲಿಯೇ ಅನುಭವಿಸಿ ಬಿಡಬೇಕೆಂಬ ಅಭೀಪ್ಸೆ. ಅಪ್ಪ ತನ್ನೆಲ್ಲಾ ಸುಖವನ್ನು ತ್ಯಾಗ ಮಾಡಿ ಒದಗಿಸಿದ ಅಗತ್ಯಗಳಿಗೆ ಬೆಲೆ ಕೊಡದೆ ಅಪ್ಪನಿಂದ ತಮ್ಮ ಆಸೆ–ದುರಾಸೆಗಳನ್ನು ಈಡೇರಿಸಿಕೊಳ್ಳಲು ಬಯಸುತ್ತಾರೆ. ಅದಕ್ಕಾಗಿ ಅಪ್ಪನನ್ನು ಪೀಡಿಸುತ್ತಾರೆ, ಬ್ಲಾಕ್‌ಮೇಲ್ ಮಾಡುತ್ತಾರೆ. ಯಾರೋ ಶ್ರೀಮಂತರು ತಮ್ಮ ಮಕ್ಕಳಿಗೆ ಅಗತ್ಯ ಮೀರಿ ಸೌಕರ್ಯಗಳನ್ನು ಒದಗಿಸಿದರು ಎಂದು ಮಾತ್ರಕ್ಕೆ ಎಲ್ಲಾ ವರ್ಗದವರಿಗೂ ಅದು ಸಾಧ್ಯವಿರುವುದಿಲ್ಲ. ಅದನ್ನು ಅರಿಯದೆ ಅಪ್ಪನ ಮುಂದೆ ಬೇಡಿಕೆಗಳ ಪಟ್ಟಿಯನ್ನು ಇಡುತ್ತಾ ಹೋಗುತ್ತಾರೆ. ಅಪ್ಪನ ಕೈಯಲ್ಲಿ ಅದನ್ನು ಈಡೇರಿಸಲು ಆಗದೇ ಇದ್ದ ಪಕ್ಷದಲ್ಲಿ ಅಪ್ಪನನ್ನು ಬೆಪ್ಪನಂತೆ, ನಿರುಪಯೋಗಿ ಎನ್ನುವಂತೆ ಭಾವಿಸುತ್ತಾರೆ. ಅವರಿಗೆ ಅಗತ್ಯ ಈಡೇರಿಸುವ ಅಪ್ಪನಿಗಿಂತ ಆಸೆ ಈಡೇರಿಸುವ ಅಪ್ಪ ಬೇಕು. ಆಗ ಮಾತ್ರ 'ಅಪ್ಪ, ಐ ಲವ್ ಯೂ ಪಾ' ಎಂಬ ಗಾನ ಗುನುಗುತ್ತಾರೆ. ಆದರೆ ಮಕ್ಕಳ ಆಸೆ ಈಡೇರಿಸುವುದರಲ್ಲೇ ಅಪ್ಪನ ಆಯುಷ್ಯ ಮುಗಿದು ಹೋಗುವುದು ಮಾತ್ರ ವಿಪರ್ಯಾಸ. ಇದನ್ನು ಮನಗಂಡು ಅಪ್ಪ ಅಲ್ಪಸ್ವಲ್ಪ ಸ್ವಾರ್ಥಿಯಾಗುವುದು ಒಳಿತು.

ಮಕ್ಕಳು ವಿದ್ಯಾರ್ಥಿ ದೆಸೆಯಲ್ಲಿ ಅನೇಕ ಸಂಗತಿಗಳನ್ನು ತ್ಯಜಿಸಬೇಕಾಗುತ್ತದೆ. ಕೆಲವು ಆಸೆಗಳನ್ನು ಸಹ ಮುಂದೂಡಬೇಕಾಗುತ್ತದೆ. 25 ವರ್ಷಕ್ಕೆ ಆಯುಷ್ಯ ಮುಗಿದು ಹೋಗುವುದಿಲ್ಲ. ಫೋನ್, ಬೈಕ್‌ಗಳನ್ನು ಪ್ರದರ್ಶಿಸಿ ತಮ್ಮ ಸ್ನೇಹಿತರ ಮುಂದೆ ತಲೆ ಎತ್ತಿ ನಡೆಯಬೇಕಿಲ್ಲ. ಅಪ್ಪನ ದುಡ್ಡಿನಲ್ಲಿ ಮೋಜು–ಮಸ್ತಿ, ಶೋಕಿ ಮಾಡುವವರು ದೊಡ್ಡವರೆನಿಸಿಕೊಳ್ಳುವುದಲ್ಲ. ತಾಕತ್ತಿದ್ದರೆ ತಾವು ದುಡಿದು ಶೋಕಿ ಮಾಡಬೇಕು. ಅಪ್ಪ ಬೆವರು ಸುರಿಸಿ ದುಡಿದ ಹಣವನ್ನು ನೀರಿನಂತೆ ವ್ಯಯ ಮಾಡುವುದು ಯಾವ ಹೀರೋನ ಲಕ್ಷಣವಲ್ಲ.

ಜನ್ಮಕೊಟ್ಟ ಅಪ್ಪ ಎಲ್ಲವನ್ನೂ ಧಾರೆ ಎರೆದು ಎದೆ ಎತ್ತರಕ್ಕೆ ಬೆಳೆಸಿದರೂ, ಮಕ್ಕಳಿಗೆ ಅಪ್ಪ ಮಾಡಿದ್ದರಿಂದ ತೃಪ್ತಿಭಾವ ಮೂಡುವುದಿಲ್ಲ. ತನ್ನ ಹೆತ್ತವರನ್ನು ಇವರು ನಮ್ಮ ಹೆತ್ತವರು ಎಂದು ಸಮಾಜದ ಮುಂದೆ ಪರಿಚಯಿಸಲು ಅನೇಕ ಮಕ್ಕಳು ಮುಜುಗರಪಟ್ಟುಕೊಳ್ಳುತ್ತಾರೆ, ನಾಚಿಕೆಪಟ್ಟುಕೊಳ್ಳುತ್ತಾರೆ. ಆದರೆ ನಿಜವಾಗಿಯೂ ಅಂತಹ ಮಕ್ಕಳಿಗೆ ಜನ್ಮಕೊಟ್ಟ ತಪ್ಪಿಗೆ ಹೆತ್ತವರು ನಾಚಿಕೆಪಟ್ಟುಕೊಳ್ಳಬೇಕು. ಕೆಲವು ಮಕ್ಕಳು ಮಾತ್ರ ಅಪ್ಪ ಅಮ್ಮನ ಬೆಲೆಯನ್ನು ಬಾಲ್ಯದಲ್ಲಿಯೇ ಅರಿತು ದೇವರಿಗಿಂತ ಹೆಚ್ಚಾಗಿ ಪೂಜಿಸಿ ಗೌರವಿಸುವುದುಂಟು

ಅಪ್ಪ ಎಂದರೆ ಎ.ಟಿ.ಎಂ ಮೆಷಿನ್ ಎಂದು ಅನೇಕ ಮಕ್ಕಳು ಭಾವಿಸಿದಂತಿದೆ. ಕೇಳಿದಾಗ ಖರ್ಚಿಗೆ ಹಣ ಕೊಡಲಾಗದ ಅಪ್ಪ ಮಕ್ಕಳಿಗೆ ಅನುಪಯುಕ್ತ ವಸ್ತುವಿನಂತೆ ಕಾಣುತ್ತಾನೆ. ಆಸೆ ಈಡೇರಿಸಲಾಗದ ಅಪ್ಪನನ್ನು ಕಂಡು ಮಕ್ಕಳಿಗೆ ಅನುಕಂಪ ಮೂಡುವ ಬದಲು ಆಕ್ರೋಶ ಮೂಡುತ್ತದೆ. ಮಕ್ಕಳ ಚುಚ್ಚು ನುಡಿಗಳನ್ನು ಕೇಳಿಸಿಕೊಳ್ಳಲಾಗದ ಅಪ್ಪನಿಗೆ ಅವರ್ಣನೀಯವಾದ ನೋವಾಗುತ್ತದೆ. ಅಸಹಾಯಕ ಅಪ್ಪನಿಗೆ ತಾನು ಪುರುಷನಾಗಿ ಹುಟ್ಟಿದ್ದಕ್ಕಾಗಿ ಶಪಿಸುತ್ತಾ, ಅವನ ಜೀವನದ ಬಗ್ಗೆ ಜಿಗುಪ್ಸೆ ಮೂಡದೇ ಇರುವುದಿಲ್ಲ. ಅಮ್ಮನಿಗೆ ನೋವಾದರೆ ಕಣ್ಣೀರಿಟ್ಟು ಸಮಾಧಾನ ಮಾಡಿಕೊಳ್ಳುತ್ತಾಳೆ. ಆದರೆ ಅಪ್ಪನಿಗೆ ನೋವಾದಾಗ ಪುರುಷನಾಗಿ ಅವನು ಕಣ್ಣೀರು ಸುರಿಸಿ ಅಳಲು ಆಗದು. ತನ್ನ ಅಳಲನ್ನು ಯಾರ ಬಳಿಯೂ ತೋಡಿಕೊಳ್ಳಲೂ ಆಗದು. ಕೆಲವು ಮನೆಗಳಲ್ಲಿ ತಾಯಿ ಮಕ್ಕಳು ಒಂದಾಗಿ ಯಜಮಾನನ್ನು ಜವಾನನಂತೆ ಮಾಡಿಬಿಟ್ಟಿರುವುದು ಸುಳ್ಳಲ್ಲ.

ಮಕ್ಕಳು ದೊಡ್ಡತನ ಮೆರೆಯಬೇಕಾದುದು ಶೈಕ್ಷಣಿಕ ಪ್ರಗತಿಯಲ್ಲಿ, ಅಥವಾ ಪ್ರತಿಭೆಯ ಅನಾವರಣದಲ್ಲಿ. ಕೇವಲ ಅಪ್ಪನ ದುಡ್ಡಿನಲ್ಲಿ ಒಳಗಾಗಿ ಶೋಆಫ್ ಜೀವನ ಮಾಡುವುದರಲ್ಲ. ನಾಲ್ಕೈದು ದಶಕಗಳ ಹಿಂದೆ ಮನೆ ಯಜಮಾನನೊಬ್ಬನ ಸಂಪಾದನೆಯಲ್ಲಿ ಐದಾರು ಮಕ್ಕಳನ್ನು ಸಾಕಬಹುದಾಗಿತ್ತು, ಆದರೆ ಇಂದು ಪತಿ–ಪತ್ನಿ ಇಬ್ಬರೂ ದುಡಿದರೂ ಇರುವ ಒಂದು ಅಥವಾ ಎರಡು ಮಕ್ಕಳ ಅಗತ್ಯಗಳನ್ನೇ ಪೂರೈಸಲು ಸಾಧ್ಯವಾಗುತ್ತಿಲ್ಲ. ಶಾಲಾ ಶುಲ್ಕ, ಟ್ಯೂಷನ್ ಶುಲ್ಕ, ವಾಹನ ಶುಲ್ಕ, ಪುಸ್ತಕಗಳು... ಹೀಗೆ ಅನೇಕ ರೀತಿಯ ಖರ್ಚುಗಳು ಇವೆ. ಮಗುವೊಂದರ ಒಂದು ವರ್ಷದ ಶೈಕ್ಷಣಿಕ ಖರ್ಚಿನಲ್ಲಿ ಅಪ್ಪ ತನ್ನ ಇಡೀ ಶಿಕ್ಷಣವನ್ನು ಪೂರೈಸಿರುತ್ತಾನೆ. ಇಂದಿನ ಮಕ್ಕಳನ್ನು ಸಲಹುವುದು ಅಷ್ಟು ಸುಲಭದ ಮಾತಲ್ಲ. ಬಿಳಿ ಆನೆ ಸಾಕಿದ ರೀತಿಯಾಗುತ್ತದೆ. ಮಧ್ಯಮ ಹಾಗೂ ಕೆಳವರ್ಗದ ಜನರಿಗೆ ಮಕ್ಕಳನ್ನು ಸಲಹುವುದೇ ಒಂದು ದೊಡ್ಡ ಹೊರೆಯಾಗಿರುತ್ತದೆ. ಆದರೆ ಅದರ ಚಿಂತೆ ಮಕ್ಕಳಿಗೆ ಆಗದಂತೆ ನೋಡಿಕೊಳ್ಳುವವನೇ ಅಪ್ಪ.

ಅಪ್ಪನ ಕನಸುಗಳನ್ನು, ಭರವಸೆಗಳನ್ನು ಭಗ್ನಗೊಳಿಸುವ ಕೃತಜ್ಞಹೀನ ಮಕ್ಕಳು ಯಾವ ಅಪರಾಧಿಗಳಿಗೂ ಕಡಿಮೆಯಿಲ್ಲ. ಅಪ್ಪನ ಆಸ್ತಿ ಮೇಲೆ ಎಲ್ಲಾ ಮಕ್ಕಳಿಗೂ ಹಕ್ಕಿದೆ. ಆದರೆ ಅಪ್ಪನಿಗೆ ಯಾವೊಬ್ಬ ಮಕ್ಕಳ ಆಸ್ತಿಯ ಮೇಲೂ ಹಕ್ಕಿಲ್ಲದೇ ಇರುವುದು ವಿಪರ್ಯಾಸ. ಅಪ್ಪ ಮಕ್ಕಳ ಬದುಕಿನ ದಾರಿಗೆ ದೀಪದ ಸ್ತಂಭವಾಗಿದ್ದರೂ ಅವನ ಬದುಕಿನ ಬುಡವೇ ಕತ್ತಲಾಗುವುದು ವಿಡಂಬನೆಯೇ ಸರಿ. ಒಬ್ಬ ಅಪ್ಪನಾಗಿ ತನ್ನ ಕರ್ತವ್ಯ ನಿರ್ವಹಿಸಿದ್ದರೂ, ತಾನು ಏನು ತಪ್ಪು ಮಾಡದಿದ್ದರೂ ಶಿಕ್ಷೆ ಅನುಭವಿಸಬೇಕಾದ ಪರಿಸ್ಥಿತಿ ಅಪ್ಪನಿಗೆ ಉಂಟಾಗುವುದು ಮಾತ್ರ ದುರದೃಷ್ಟಕರ. ಯಾರೋ ಒಂದಿಬ್ಬರು ಬೇಜವಾಬ್ದಾರಿ ಅಪ್ಪಂದಿರು ಸಹ ಇರಬಹುದು, ಆದರೆ ಬಹುಪಾಲು ಎಲ್ಲರೂ ತ್ಯಾಗಮೂರ್ತಿಗಳೆ.

ಅಪ್ಪ ಇದ್ದಾಗ ಅಪ್ಪನಿಗೆ ಋಣ ತೀರಿಸಲು ಅನೇಕ ಅವಕಾಶಗಳು ಇರುತ್ತವೆ. ಅವುಗಳನ್ನು ಕೈಚೆಲ್ಲಿ ಅಪ್ಪ ನಿಧನಹೊಂದಿದ ನಂತರ ಅವರ ಹೆಸರಿನಲ್ಲಿ ಸ್ಮಾರಕ ಕಟ್ಟಿಸಿದರೆ, ದತ್ತಿ ಸ್ಥಾಪಿಸಿ ದಾನ ಮಾಡಿದರೆ, ಅಪ್ಪನ ಹೆಸರನ್ನು ತಾನು ಕಟ್ಟಿಸಿದ ಮನೆಗೆ ಇಟ್ಟರೆ ಅಪ್ಪನಿಗೆ ಸಿಕ್ಕ ಲಾಭವಾದರೂ ಏನು? ಅಪ್ಪನ ಹೆಸರನ್ನು ಉಳಿಸುವ ಸತ್ಕಾರ್ಯವೇ ಅದು ಇರಬಹುದು, ಆದರೆ ಅಪ್ಪ ಮೆಚ್ಚುವ ಕಾರ್ಯ ಮಾಡದೆ ಅಪ್ಪನ ಹೆಸರಲ್ಲಿ ಸಮಾಜ ಮೆಚ್ಚುವಂತೆ ತೋರ್ಪಡಿಕೆಗೆ ಮಾಡುವ ಕಾರ್ಯದಿಂದ ಅಪ್ಪನ ಆತ್ಮ ತೃಪ್ತಿಪಡುವುದೇ? ತಾನು ಕಿಂಗ್ ಆಗದಿದ್ದರೂ ತನ್ನ ಮಕ್ಕಳನ್ನು ಕಿಂಗ್ ಅಥವಾ ಕ್ವೀನ್ ಮಾಡಿ ಕಿಂಗ್ ಮೇಕರ್ ಆಗಲು ಬಯಸುವವನೇ ಅಪ್ಪ. ಬಾಲ್ಯದಲ್ಲಿ ಮಕ್ಕಳನ್ನು ಮೆರೆಸುವ ಅಪ್ಪ ಇಳಿವಯಸ್ಸಿನಲ್ಲಿ ನನ್ನ ಮರೆಯದಿದ್ದರೆ ಸಾಕು ಎಂದಷ್ಟೇ ಬಯಸುತ್ತಾನೆ.

ಮಗುವಿನ ಅಗತ್ಯಗಳನ್ನು ಈಡೇರಿಸುವಲ್ಲಿ ಅಮ್ಮನ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಆದರೆ ಅಪ್ಪನ ಪಾತ್ರವೂ ಕಡಿಮೆ ಏನಿಲ್ಲ. ತಾಯಿ ಆದವಳು 9 ತಿಂಗಳು ಹೊಟ್ಟೆಯಲ್ಲಿ ಇಟ್ಟುಕೊಂಡು ಜನ್ಮಕೊಡಬಹುದು, ಆದರೆ ತನ್ನ ಜೀವನ ಪರ್ಯಂತ ಅಪ್ಪ ತನ್ನ ಮಕ್ಕಳನ್ನು ಹೃದಯದಲ್ಲಿ ಇಟ್ಟುಕೊಂಡು ಪೋಷಿಸುತ್ತಾನೆ. 'ತಾಯಿಯೇ ದೇವರು' ಎಂಬ ಘೋಷವಾಕ್ಯವನ್ನು 'ತಾಯಿ ಜೊತೆಗೆ ತಂದೆಯೂ ದೇವರು' ಎಂದು ಮಾರ್ಪಾಡು ಮಾಡುವ ಅಗತ್ಯವಿದೆ. ನನ್ನದೊಂದು ಚೌಪದಿ ಹೀಗಿದೆ.

'ಸರ್ವರಿಗೂ ಕಾಣುವುದು ಅಮ್ಮನ ಶ್ರಮ–ತ್ಯಾಗ
ಯಾರಿಗೂ ಕಾಣಿಸದು ಅಪ್ಪ ಹೊತ್ತ ಭಾರದ ನೊಗ
ಅಮ್ಮ ಬತ್ತಿಯಾದರೆ, ಅಪ್ಪ ಎಣ್ಣೆ ತರುವ ಗಾಣಿಗ
ಎಂದ ನಮ್ಮ ಅರಿವಿನ ಅಪ್ರಮೇಯ'

ಅಮ್ಮನನ್ನು ಹೊಗಳುವ ಭರದಲ್ಲಿ ಅಪ್ಪ ಮರೆಯಾಗದಿರಲಿ, ಹಿಂದೆ ಉಳಿಯದಿರಲಿ ಎಂದು ಆಶಿಸುತ್ತೇನೆ.

ಪದ ತಾಂಬೂಲ : ತನಗಿಂತ ತನ್ನ ಮಕ್ಕಳು ಮೇಲಿನ ಸ್ಥಾನಕ್ಕೆ ಏರಬೇಕು ಎಂದು ಬಯಸಲು ಸಾಧ್ಯವಾಗುವುದು ಅಪ್ಪನಿಗೆ ಮಾತ್ರ.

ಮಕ್ಕಳ ಸಾಹಿತ್ಯ ಸಂಭ್ರಮದಲ್ಲಿ ಚಿಣ್ಣರ ಚಿಲಿಪಿಲಿ





ಮೈಸೂರು, ಫೆ.26(ಎಂಕೆ)– ಚಿಣ್ಣರ ಚಿಲಿಪಿಲಿಯ ನಡುವೆ ಸಾಹಿತ್ಯ ಸಂಭ್ರಮ... ಸುಂದರ ಪುಟಾಣಿಗಳಿಂದ ಕಥೆಗಳ ಹೂರಣ...!

ಮೈಸೂರಿನ ನಜರ್‌ಬಾದ್‌ನಲ್ಲಿರುವ ವಿಂಡ್ ಚೈಮ್ಸ್‌ನಲ್ಲಿ ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ ವತಿಯಿಂದ ಆಯೋಜಿಸಿದ್ದ 'ಮಕ್ಕಳ ಸಾಹಿತ್ಯ ಸಂಭ್ರಮ'ದಲ್ಲಿ ಮಿಂದೆದ್ದ ನೂರಾರು ಚಿಣ್ಣರು ತಮ್ಮ ಜಾಣ್ಮೆ–ಕೌಶಲ್ಯತೆಗಳನ್ನು ಅನಾವರಣಗೊಳಿಸಿದರು.

ವಿಶೇಷಚೇತನ ಮಕ್ಕಳ ಬ್ಯಾಂಡ್ ಸಂಗೀತದೊಂದಿಗೆ ವಿಧ್ಯುಕ್ತ ಚಾಲನೆ ಪಡೆದ ಸಾಹಿತ್ಯ ಸಂಭ್ರಮಕ್ಕೆ ಹತ್ತಾರು ಮಕ್ಕಳು ಬೆಳಗುತ್ತಿದ್ದ ದೀಪಗಳನ್ನು ನೀರಿನಲ್ಲಿ ತೇಲಿಬಿಡುವ ಮೂಲಕ ಉದ್ಘಾಟಿಸಿದರಲ್ಲದೆ ಮಕ್ಕಳ ಸಾಹಿತ್ಯ ಸಂಭ್ರಮದ ಕಿರು ಪರಿಚಯ ಹಾಗೂ ಉದ್ದೇಶವನ್ನು ತಿಳಿಸಿಕೊಟ್ಟರು.

ಬಳಿಕ 'ಚಿಂಪು ಮಂಕಿ ಸರ್ಚ್ ಫಾರ್ ಗಿಫ್ಟ್', 'ಬುಲೆಟ್ ಡಾಕ್ಟರ್ ಮೇಕ್ಸ್ ಫ್ರೆಂಡ್ಸ್ ವಿತ್ ಎ ಬುಲ್' ಎಂಬ ಕತೆಗಳನ್ನು ಹೇಳಿಕೊಡುವ ಮೂಲಕ ನೆರೆದಿದ್ದ ಪುಟಾಣಿಗಳನ್ನು ರಂಜಿಸಿದ ರಂಗಕರ್ಮಿ ವಿಕ್ರಮ್ ಶ್ರೀಧರ್, ಪೋಷಕರ ಜವಾಬ್ದಾರಿ ಕುರಿತು ಬೆಳಕು ಚೆಲ್ಲಿದರು. ಅಲ್ಲದೆ ತಂತ್ರಜ್ಞಾನವು ನಮ್ಮೆಲ್ಲರ ಬದುಕನ್ನು ಆವರಿಸಿಕೊಂಡು ನಮ್ಮ ನಮ್ಮ ನಡುವೆಯೇ ಕೋಟೆ ನಿರ್ಮಾಣ ಮಾಡಿದೆ. ಕುಟುಂಬದಲ್ಲಿ ಎಲ್ಲರೂ ಒಂದಾಗಿ ಇರಬೇಕು ಎಂಬುದನ್ನು ಕತೆಯ ಮೂಲಕವೇ ರಸವತ್ತಾಗಿ ತಿಳಿಸಿಕೊಟ್ಟರು.

ಮಕ್ಕಳೊಂದಿಗೆ ಬೆರೆತು ಮಕ್ಕಳಂತೆಯೇ ಹಾವ–ಭಾವಾಭಿನಯದ ಮೂಲಕ ಕತೆ ಹೇಳಿಕೊಟ್ಟ ವಿಕ್ರಮ್ ಶ್ರೀಧರ್, ಎಲ್ಲರನ್ನು ನಗುವಿನ ಅಲೆಯ ತೇಲಿಸಿದರು. ಹಾಸ್ಯ, ಪ್ರಶ್ನೆ–ಮರುಪ್ರಶ್ನೆಗಳ ಮೂಲಕ ಮಕ್ಕಳನ್ನು ಯೋಚನಾಶೀಲರನ್ನಾಗಿಸಿದರಲ್ಲದೆ ಮಕ್ಕಳ ಚುರುಕು ಬುದ್ಧಿಗೆ ಸೋತು ಅವರ ಅಭಿಮಾನಿಯಾದರು. ಅಲ್ಲದೆ ಪೋಷಕರು ಮಕ್ಕಳೊಂದಿಗೆ ಹೇಗಿರಬೇಕು, ಮನೆಯಲ್ಲಿ ಯಾವ ರೀತಿಯ ವಾತಾವರಣ ನಿರ್ಮಾಣ ಮಾಡಬೇಕು ಎಂಬುದರ ಕುರಿತು ಜಾಗೃತಿ ಮೂಡಿಸಿದರು.

ಪುಟಾಣಿಗಳ ಕುಣಿತ: ಯುವ ಗಾಯಕರಾದ ಲಕ್ಷ್ ಮತ್ತು ನಿಖಿತಾ ಹಾಡಿದ 'ಬಿಲಿವ್' ಹಾಡಿಗೆ ಪುಟಾಣಿಗಳು ಕುಣಿದು ಕುಪ್ಪಳಿಸಿದರು. 13 ವರ್ಷದ ಯೂಟ್ಯೂಬರ್ ತನ್ಮಯಿ ಎಸ್.ಚೌಡಿಪುರ ಅವರ ಸುಮಧುರ ಗಾಯನ ಎಲ್ಲರ ಮನಗೆದ್ದಿತು. ಮಕ್ಕಳ ಜೊತೆಗೆ ಪೋಷಕರು ಕುಣಿದು ಸಂಭ್ರಮಿಸಿದರು.

ಸಂವಾದ: 'ಲಿಟಲ್ ಹ್ಯಾಂಡ್ ಬುಕ್ ಆಫ್ ಟೆಕ್ನಾಲಜಿ' ಪುಸ್ತಕದ ಲೇಖಕರಾದ ಶಾಲಿನಿ ಸತೀಶ್ ಮತ್ತು ರಾವ್ ಭರಣೀದರ್ ಮಕ್ಕಳೊಂದಿಗೆ ಸಂವಾದ ನಡೆಸಿದರು. ಆಟ–ಪಾಠದ ಜೊತೆಗೆ ಕಲೆ, ಸಾಹಿತ್ಯ, ಅಭಿನಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿಯೂ ಮಕ್ಕಳು ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು ಎನ್ನುತ್ತಾ ಮಕ್ಕಳ ಹತ್ತಾರು ಪ್ರಶ್ನೆಗಳಿಗೆ ಉತ್ತರ ನೀಡುತ್ತಾ ಕಲಿಯುವ ಕಡೆಗೆ ಹೆಚ್ಚಿನ ಗಮನ ನೀಡುವಂತೆ ಸಲಹೆ ನೀಡಿದರು.

ಬೊಂಬೆಯಾಟಕ್ಕೆ ಪುಟಾಣಿಗಳು ಫಿದಾ!: ಮೈಸೂರು ಪಪ್ಪೆಟ್ ಥಿಯೇಟರ್ ಪ್ರಸ್ತುತಪಡಿಸಿದ 'ಬೊಂಬೆ ಆಟ' ಮಕ್ಕಳ ಮನಗೆದ್ದಿತು. 'ನರಕಾಸುರ ವಧೆ' ಪ್ರಸಂಗ ಮಕ್ಕಳ ಮನದಾಳಕ್ಕಿಳಿಯಿತು. ಶ್ರೀಕೃಷ್ಣ ನರಕಾಸುರನನ್ನು ಸಂಹರಿಸುವ ದೃಶ್ಯಾವಳಿಗಳನ್ನು ಕಣ್ಣರಳಿಸಿ ಬಿಟ್ಟು ಬಿಡದಂತೆ ನೋಡಿದ ಚಿಣ್ಣರು ಮನರಂಜನೆಯ ಜೊತೆಗೆ ಪೌರಾಣಿಕ ಕತೆಯನ್ನು ಆಸ್ವಾದಿಸಿದರು.

ಸಾವಿರಕ್ಕೂ ಹೆಚ್ಚು ಮಕ್ಕಳು: ಕಲೆ, ಸಾಹಿತ್ಯ, ಸಂಗೀತ ಮತ್ತು ಮನರಂಜನಾ ಕ್ರೀಡೆಗಳ ಸಂಗಮವಾಗಿದ್ದ 'ಮಕ್ಕಳ ಸಾಹಿತ್ಯ ಸಂಭ್ರಮ'ದಲ್ಲಿ 4 ರಿಂದ 14 ವರ್ಷದೊಳಗಿನ ಸಾವಿರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿ ಸಂಭ್ರಮದಲ್ಲಿ ಮಿಂದೆದ್ದರು. ಮಕ್ಕಳಿಂದಲೇ ತುಂಬಿ ತುಳುಕುತ್ತಿದ್ದ ವಾತಾವರಣದಲ್ಲಿ ಮೈಸೂರಿನ ಹೆಸರಾಂತ ರಾಮ್‌ಸನ್ಸ್ ಬೊಂಬೆಮನೆಯಿಂದ ಅತ್ಯಾಕರ್ಷಕ ಬೊಂಬೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಜೊತೆಗೆ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ತಿಂಡಿ ತಿನಿಸುಗಳ ವ್ಯವಸ್ಥೆಯೂ ಅಚ್ಚುಕಟ್ಟಾಗಿತ್ತು. ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್‌ನ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಹೋರಾಟದ ಜೊತೆಜೊತೆಗೆ ತಳಮಟ್ಟದಿಂದ ಹಂತ ಹಂತವಾಗಿ ಬೆಳೆದು ನಾಲ್ಕು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಜನಪರ ಆಡಳಿತದ ಮೂಲಕ ಜನಮಾನಸದಲ್ಲಿ ಹಸಿರಾಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು, ರಾಜಕಾರಣಿಗಳಿಗೆ ಮಾದರಿ. ಅದರಲ್ಲೂ ರಾಜಕೀಯ ಕ್ಷೇತ್ರದಲ್ಲಿ ಏನಾದರೂ ಸಾಧಿಸಬೇಕೆಂಬ ಕನಸು ಹೊತ್ತಿರುವ ಯುವಕರಿಗೆ ಬಿಎಸ್‌ವೈ ಸ್ಫೂರ್ತಿಯ ಸೆಲೆ. 80 ವರ್ಷದ ಹಿರಿಯ ಮುತ್ಸದ್ದಿ ಅದೆಷ್ಟೋ ಜನರಿಗೆ ಮಾರ್ಗದರ್ಶನ ನೀಡಿರುವ ದಾರಿದೀಪ. ಹಾಗೆಯೇ ಮೈಸೂರಿನ ಬಿಜೆಪಿ ಯುವ ಮುಖಂಡ ಎಲ್.ಆರ್.ಮಹದೇವಸ್ವಾಮಿ ಅವರಿಗೂ ಬಿಎಸ್‌ವೈ ರಾಜಕೀಯ ಗುರುವಿದ್ದಂತೆ. ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣ ರೂಡಿಸಿಕೊಂಡಿರುವ ಎಲ್.ಆರ್.ಮಹದೇವಸ್ವಾಮಿ, ತಮಗೆ ದಕ್ಕಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವ ಹಾಗೂ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿರಲು ಬಿಎಸ್‌ವೈ ಅವರೇ ಸ್ಫೂರ್ತಿ. ಬಿಎಸ್‌ವೈ ಹಾಗೂ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರೊಂದಿಗೆ ಒಡನಾಟ ಹೊಂದಿರುವ ಇವರು, ಮೈಸೂರು ಭಾಗವಷ್ಟೇ ಅಲ್ಲ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ಉತ್ತಮ ಆಡಳಿತ ನಿರ್ವಹಿಸುವ ಮೂಲಕ ರಾಜ್ಯ ಮಟ್ಟದಲ್ಲೂ ಪರಿಚಿತರಾಗಿದ್ದಾರೆ.





ವಿದ್ಯಾವಂತ, ಅತ್ಯುತ್ತಮ ಸಂಘಟಕ

ಎಲ್.ಆರ್.ಮಹದೇವಸ್ವಾಮಿ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಆಲನಹಳ್ಳಿ ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಎಲ್.ರಾಜಣ್ಣ ಹಾಗೂ ಕುಸುಮಾ ರಾಜಣ್ಣ ಅವರ ಪುತ್ರರಾಗಿ 1985ರ ಮಾರ್ಚ್ 28ರಂದು ಜನಿಸಿದರು. ಬಿಬಿಎಂ, ಎಂಬಿಎ ಪದವೀಧರರಾಗಿರುವ ಇವರು ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣ ರೂಡಿಸಿಕೊಂಡಿಸಿದ್ದಾರೆ. ಅತ್ಯುತ್ತಮ ಸಂಘಟಕ, ಸಂಘಜೀವಿ, ಸ್ನೇಹಪರ ವ್ಯಕ್ತಿಯಾಗಿದ್ದು ಜನರೊಂದಿಗೆ ಬಾಂಧವ್ಯ ಸಾಧಿಸಿದ್ದಾರೆ. 2004ರಿಂದ 2006ರವರೆಗೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಕಾರ್ಯದರ್ಶಿಯಾಗಿ, 2005–06ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಿಬಿಎಂ ಅಸೋಸಿಯೇಷನ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. 2006ರಲ್ಲಿ ರೋಟರ್ಯಾಕ್ಟ್ ಮೈಸೂರು ನಾರ್ಥ್ ಸದಸ್ಯತ್ವ ಪಡೆದು, 2010ರಲ್ಲಿ ಅದರ ಅಧ್ಯಕ್ಷರಾಗಿ, 2012ರಲ್ಲಿ ವಲಯಾಧ್ಯಕ್ಷರಾಗಿ, 2015ರಲ್ಲಿ 8 ರೆವಿನ್ಯೂ ಜಿಲ್ಲೆಗಳಿಗೆ ಜಿಲ್ಲಾ ಗವರ್ನರ್(3180) ಆಗಿ, 2016–17ರಲ್ಲಿ ದಕ್ಷಿಣ ಏಷಿಯಾದ ಸಾಕ್ಷರತಾ ಯೋಜನೆ ನಿರ್ದೇಶಕರಾಗಿ ಅತ್ಯುತ್ತಮ ಕಾರ್ಯ ನಿರ್ವಹಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿನ ಪಯಣ

ಮಹದೇವಸ್ವಾಮಿ ಅವರ ತಂದೆ ರಾಜಣ್ಣ ಬಿಜೆಪಿ ಪ್ರಮುಖರಾಗಿದ್ದರು. ಜೊತೆಗೆ ಇಡೀ ಕುಟುಂಬ ಹಿಂದಿನಿಂದಲೂ ಬಿಜೆಪಿ ಬೆಂಬಲಿಸಿಕೊಂಡು ಬಂದಿದೆ. ವಿದ್ಯಾರ್ಥಿ ದೆಸೆಯಲ್ಲಿ ಸಂಘಟನಾತ್ಮಕ ಚಟುವಟಿಕೆಯಲ್ಲಿ ಸಕ್ರಿಯವಾಗಿದ್ದ ಎಲ್.ಆರ್.ಮಹದೇವಸ್ವಾಮಿ ಅವರಿಗೆ ಸಹಜವಾಗಿ ಅವರ ತಂದೆಯ ಪ್ರಭಾವವಿತ್ತು. ಪಕ್ಷದ ಕಾರ್ಯಕರ್ತರಾಗಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ನಂತರ ಬಿ.ಎಸ್.ಯಡಿಯೂರಪ್ಪನವರ ನಾಯಕತ್ವ, ಬಿ.ವೈ.ವಿಜಯೇಂದ್ರ ಅವರ ಸಂಘಟನಾ ಚತುರತೆ ಎಲ್.ಆರ್.ಮಹದೇವಸ್ವಾಮಿ ಅವರಿಗೆ ಮತ್ತಷ್ಟು ಪ್ರೇರಣೆ ನೀಡಿತು. ಪರಿಣಾಮ ಪಕ್ಷದ ವಿವಿಧ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದರು. 2010ರಲ್ಲಿ ಬಿಜೆಪಿ ವರುಣಾ ವಿಧಾನಸಭಾ ಕ್ಷೇತ್ರದ ಯುವಮೋರ್ಚಾ ಅಧ್ಯಕ್ಷರಾಗಿ ಯುವ ಸಮುದಾಯವನ್ನು ಪಕ್ಷಕ್ಕೆ ಸೆಳೆಯುವಲ್ಲಿ ಯಶಸ್ವಿಯಾದರು. ಅದೇ ವರ್ಷ ಡಿ.31ರಂದು ಮೈಸೂರು ತಾಲೂಕು ಪಂಚಾಯ್ತಿ ಚುನಾವಣೆಯಲ್ಲಿ ಆಲನಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ದಾಖಲಿಸುವ ಮೂಲಕ ಚುನಾವಣಾ ರಾಜಕೀಯಕ್ಕೆ ದಿಟ್ಟ ಹೆಜ್ಜೆ ಇಟ್ಟರು. ನಂತರ ತಾಲೂಕು ಪಂಚಾಯ್ತಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಮುಂದುವರೆದು ಮೈಸೂರು ತಾಪಂ ಅಧ್ಯಕ್ಷರಾಗಿಯೂ ಉತ್ತಮ ಆಡಳಿತ ನಡೆಸುವ ಮೂಲಕ ಜನಸೇವೆಯನ್ನು ವಿಸ್ತರಿಸಿಕೊಂಡರು. 2014–15ರಲ್ಲಿ ಬಿಜೆಪಿ ಯುವ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ, 2016ರಲ್ಲಿ ಮೈಸೂರು ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷರಾಗಿ ಪಕ್ಷ ಸಂಘಟನೆಗೆ ಶ್ರಮಿಸಿದರು.

ಸಂಘಟನಾ ಚತುರ

ಎಲ್.ಆರ್.ಮಹದೇವಸ್ವಾಮಿ

ಯಡಿಯೂರಪ್ಪ ಆಶ್ರಯದಲ್ಲಿ ಅವಿಶ್ರಾಂತ ಸೇವೆ

ಹಿರಿಯರು, ಮಾರ್ಗದರ್ಶಕರೂ ಆದ ಬಿ.ಎಸ್.ಯಡಿಯೂರಪ್ಪನವರು 80 ವರ್ಷ ಪೂರೈಸಿದ್ದು, ಅವರಿಗೆ ಜನ್ಮದಿನದ ಶುಭಾಶಯಗಳನ್ನು ಅರ್ಪಿಸುತ್ತೇನೆ. ಬಿಎಸ್‌ವೈ ಹಾಗೂ ಸೋದರ ಸಮಾನ ಬಿ.ವೈ.ವಿಜಯೇಂದ್ರ ಅವರೇ ನಮಗೆ ಸ್ಫೂರ್ತಿ. ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇನೆ. ಜನಸೇವೆ ಕನಸಿನೊಂದಿಗೆ ರಾಜಕೀಯ ಕ್ಷೇತ್ರದಲ್ಲಿ ಹೆಜ್ಜೆ ಇಡುವ ನನ್ನಂತ ಸಾವಿರಾರು ಯುವಕರಿಗೆ ಇವರೇ ದಾರಿದೀಪವಾಗಿದ್ದಾರೆ. ಸಾಧ್ಯವಾದಷ್ಟು ಜನಸೇವೆ ಮಾಡುವ ಮೂಲಕ ಅವರ ಹಾದಿಯಲ್ಲಿ ಸಾಗಬೇಕೆಂಬುದು ನನ್ನ ಆಶಯ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ನೇತೃತ್ವದ ರಾಜ್ಯ ಸರ್ಕಾರ ಹಲವಾರು ಜನಪರ ಯೋಜನೆಗಳು, ಕಾರ್ಯಕ್ರಮಗಳ ಮೂಲಕ ಉತ್ತಮ ಆಡಳಿತ ನೀಡಿದೆ. ಇದಕ್ಕೆ ಒತ್ತಾಸೆಯಾಗಿ ಪಕ್ಷ ಸಂಘಟನೆಯಲ್ಲಿ ಮತ್ತಷ್ಟು ಸಕ್ರಿಯವಾಗಿ ಪಕ್ಷದಲ್ಲಿನ ಯುವಶಕ್ತಿ ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ.

–ಎಲ್.ಆರ್.ಮಹದೇವಸ್ವಾಮಿ





ಸಂಕಷ್ಟದಲ್ಲಿದ್ದ ಮೃಗಾಲಯ ಪ್ರಾಧಿಕಾರದ ಸಾರಥ್ಯ

ಕೊರೊನಾ ಇಡೀ ಜಗತ್ತನ್ನೇ ತಲ್ಲಣಗೊಳಿಸಿದ್ದ ಸಂದರ್ಭ. ಜನಜೀವನದ ಜೊತೆಗೆ ಪರೋಕ್ಷವಾಗಿ ಮನುಷ್ಯ ಅವಲಂಬಿತ ಜೀವ ಸಂಕುಲಕ್ಕೂ ಸಂಕಟ ತಂದೊಡ್ಡಿತ್ತು. ಅದರಂತೆ ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಸೇರಿದಂತೆ ರಾಜ್ಯದ ಎಲ್ಲಾ ಮೃಗಾಲಯಗಳ ನಿರ್ವಹಣೆ ಕಷ್ಟ ಸಾಧ್ಯ ಎನ್ನುವಂತಹ ದುಸ್ಥಿತಿ ನಿರ್ಮಾಣವಾಗಿತ್ತು. ಸೋಂಕು ಹರಡುವಿಕೆ ಭೀತಿ, ಲಾಕ್‌ಡೌನ್ ಕಾರಣದಿಂದ ವೀಕ್ಷಕರಿಲ್ಲದೆ ಆರ್ಥಿಕ ಸ್ಥಿತಿ ನೆಲಕಚ್ಚಿತ್ತು. ಆ ಸಂದರ್ಭದಲ್ಲಿ ಅಗತ್ಯದಷ್ಟು ನೆರವು ನೀಡಲು ಸರ್ಕಾರಕ್ಕೂ ಸುಲಭ ಸಾಧ್ಯವಾಗಿರಲಿಲ್ಲ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲ್.ಆರ್.ಮಹದೇವಸ್ವಾಮಿ ಅವರನ್ನು ಕರ್ನಾಟಕ ಮೃಗಾಲಯಗಳ ಪ್ರಾಧಿಕಾರದ ಅಧ್ಯಕ್ಷರಾಗಿ ಸರ್ಕಾರ ನೇಮಿಸಿತು. 2020ರ ನವೆಂಬರ್ 26ರಂದು ಪ್ರಾಧಿಕಾರದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಎಲ್.ಆರ್.ಮಹದೇವಸ್ವಾಮಿ ಅವರಿಗೆ ಆರ್ಥಿಕ ಸಂಕಷ್ಟದಲ್ಲಿ ಮೃಗಾಲಯಗಳ ನಿರ್ವಹಣೆ ಕಷ್ಟಸಾಧ್ಯವಾಗಿತ್ತು. ಆದರೂ ಅವರು ವಿಚಲಿತರಾಗದೆ ಅಧಿಕಾರಿಗಳು, ಸಿಬ್ಬಂದಿಯೊಂದಿಗೆ ಸಮನ್ವಯದಿಂದ ಸಮರ್ಥವಾಗಿ ಆಡಳಿತ ನಡೆಸಿದರು. ಸರ್ಕಾರ, ಸಾರ್ವಜನಿಕರು, ದಾನಿಗಳ ಸಹಕಾರದಿಂದ ಕೊರೊನಾ ಸಂದಿಗ್ಧತೆಯಲ್ಲೂ ಮೃಗಾಲಯಗಳ ಪ್ರಾಣಿ–ಪಕ್ಷಿ ಜೀವ ಸಂಕುಲ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದರು.





ನಿರ್ವಹಣೆ ಜೊತೆಗೆ ಅಭಿವೃದ್ಧಿ ಕಾರ್ಯ

ಮೃಗಾಲಯಗಳ ನಿರ್ವಹಣೆಗಷ್ಟೇ ಸೀಮಿತವಾಗದೆ ಅವುಗಳ ಅಭಿವೃದ್ಧಿಗೂ ಎಲ್.ಆರ್.ಮಹದೇವಸ್ವಾಮಿ ದಿಟ್ಟ ಹೆಜ್ಜೆಗಳನ್ನಿಟ್ಟು, ಹಲವು ಕಾರ್ಯಗಳನ್ನು ಸಾಕಾರಗೊಳಿಸಿದರು. ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೆ ಬರುವ ರಾಜ್ಯದ 9 ಮೃಗಾಲಯಗಳಲ್ಲಿ ನಾನಾ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಅಭಿವೃದ್ಧಿ ಪಥದತ್ತ ಕೊಂಡೊಯ್ದರು. ಹೊಸ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಮೂಲಕ ಹೆಚ್ಚು ವಿದೇಶಿ ಪ್ರವಾಸಿಗರನ್ನು ಸೆಳೆಯುವ ಪ್ರಯತ್ನದಲ್ಲೂ ಸಫಲರಾದರು. ನಿರ್ವಹಣೆಯಲ್ಲಿ ಕೈಗೊಂಡ ಸುಧಾರಣಾ ಕ್ರಮಗಳು, ಪ್ರಾಣಿ ವಿನಿಮಯ ಯೋಜನೆಗಳ ಮೂಲಕ ಅಪರೂಪದ ಪ್ರಾಣಿ, ಪಕ್ಷಿಗಳನ್ನು ದೇಶ ವಿದೇಶಗಳ ನಾನಾ ಮೃಗಾಲಯಗಳಿಂದ ರಾಜ್ಯದ ಮೃಗಾಲಯಗಳಿಗೆ ತರಿಸಿದರು. ತಮ್ಮ ಅಧಿಕಾರಾವಧಿಯಲ್ಲಿ ಜನ ಮೆಚ್ಚುವಂತೆ ಶಾಶ್ವತ ಕೆಲಸ ಮಾಡಬೇಕೆಂಬ ಸಂಕಲ್ಪ ಮಾಡಿದ್ದ ಅವರು, ಆ ನಿಟ್ಟಿನಲ್ಲಿ ಎಲ್ಲಾ ಅವಕಾಶಗಳನ್ನೂ ಸದುಪಯೋಗಪಡಿಸಿಕೊಂಡರು. ಕೇವಲ ಒಂದೆರಡು ಮೃಗಾಲಯಗಳಿಗೆ ಮಾತ್ರ ಸೀಮಿತವಾಗಿದ್ದ ಪ್ರವಾಸಿಗರ ಭೇಟಿಯನ್ನು 9 ಮೃಗಾಲಯಗಳಿಗೆ ವಿಸ್ತರಣೆ ಮಾಡಿದರಲ್ಲದೆ ಪ್ರಾಣಿ–ಪಕ್ಷಿಗಳ ವೀಕ್ಷಣೆಯನ್ನು ವಿದೇಶಗಳಲ್ಲಿ ಇರುವಂತೆ ಸಫಾರಿ ಮೂಲಕ ವೀಕ್ಷಿಸುವ ಹೈಟೆಕ್ ಸ್ಪರ್ಶ ನೀಡಿದ್ದು ಇವರ ಹೆಗ್ಗಳಿಕೆ. ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪನವರಿಂದ ಮೃಗಾಲಯಗಳ ಅಭಿವೃದ್ಧಿಗೆ 26 ಕೋಟಿ ರೂ.ಗೂ ಹೆಚ್ಚು ಅನುದಾನ ಪಡೆದು ಅಭಿವೃದ್ಧಿಗೆ ಮುನ್ನುಡಿ ಬರೆದರು. ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಮೃಗಾಲಯ ಅಭಿವೃದ್ಧಿಗೆ ಸಾಕಷ್ಟು ನೆರವು ನೀಡಿದರು. ಅಲ್ಲದೆ ಮೃಗಾಲಯಗಳಿಗೆ ಸಂಘ–ಸಂಸ್ಥೆಗಳು ಹಾಗೂ ದಾನಿಗಳಿಂದ ನೆರವಿನ ಮಹಾಪೂರವೇ ಹರಿದು ಬರುವಂತೆ ಮಾಡಿದರು. ನಟ ದರ್ಶನ್ ಮೂಲಕ ಪ್ರಾಣಿ ಪ್ರಿಯರಿಗೆ ನೆರವು ನೀಡುವಂತೆ ಮನವಿ ಮಾಡಿ, ಅಪಾರ ಪ್ರಮಾಣದಲ್ಲಿ ದೇಣಿಗೆ ಸಂಗ್ರಹವಾಗುವಲ್ಲಿ ಮಹದೇವಸ್ವಾಮಿ ಪ್ರಮುಖ ಪಾತ್ರ ವಹಿಸಿದ್ದರು. ರಾಜ್ಯದ ಎಲ್ಲಾ ಮೃಗಾಲಯಗಳಲ್ಲಿ ಪ್ರಾಣಿಗಳ ದತ್ತು ಸ್ವೀಕಾರಕ್ಕೆ ಪ್ರೋತ್ಸಾಹ ನೀಡಿ, ಸತ್ಕಾರ್ಯಕ್ಕೆ ಕೈ ಜೋಡಿಸಿದವರಿಗೆ ಮೃಗಾಲಯ ವೀಕ್ಷಣೆಗೆ ಉಚಿತ ಪ್ರವೇಶ ಹಾಗೂ ಅಭಿನಂದನಾ ಪತ್ರದ ಮೂಲಕ ಕೃತಜ್ಞತೆ ಸಲ್ಲಿಸುವ ಪರಿಪಾಠ ಆರಂಭಿಸಿದರು. ಲಾಕ್‌ಡೌನ್‌ನಿಂದ ಸಂತ್ರಸ್ತರಾಗಿದ್ದ ಮೃಗಾಲಯದ ನೌಕರರು ಮತ್ತು ಸಿಬ್ಬಂದಿಗೆ ದಿನಸಿ ನೀಡುವ ಮೂಲಕ ನೆರವಾಗಿದ್ದರು. 'ಮೈ ಸೇವಾ ಫೌಂಡೇಷನ್' ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನೂರಾರು ಸಿಬ್ಬಂದಿಗೆ ತರಕಾರಿಯೊಂದಿಗೆ ಪಡಿತರ ಕಿಟ್ ವಿತರಿಸಿದ್ದರು. ಮೈಸೂರಿನ ಹೊರವಲಯ ಕೂರ್ಗಳ್ಳಿಯಲ್ಲಿರುವ ಪ್ರಾಣಿಗಳ ಪುನರ್ವಸತಿ ಕೇಂದ್ರದಲ್ಲಿ ಆನೆಗಳಿಗಾಗಿ ವಿಶೇಷ ಈಜುಕೊಳ ನಿರ್ಮಿಸಿದರು. ಪ್ರಾಧಿಕಾರ ವ್ಯಾಪ್ತಿಯ ಮೈಸೂರು, ಬನ್ನೇರುಘಟ್ಟ, ಶಿವಮೊಗ್ಗ, ಹಂಪಿ, ಗದಗ, ಚಿತ್ರದುರ್ಗ, ದಾವಣಗೆರೆ ಮೃಗಾಲಯಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡರು. ವಿದೇಶಗಳಿಂದ ಮೈಸೂರು ಮೃಗಾಲಯಕ್ಕೆ ತರಿಸಿರುವ ಗೊರಿಲ್ಲಾ ಮತ್ತು ಒರಂಗೂಟಾನ್ ಪ್ರಾಣಿಗಳಿಗೆ ಆರ್‌ಬಿಐ ಮತ್ತು ಇನ್ಫೋಸಿಸ್‌ನ ಸಿಎಸ್‌ಆರ್ ಅನುದಾನದಡಿ ಪ್ರಾಣಿ ಮನೆಗಳನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಶಿವಮೊಗ್ಗದಲ್ಲಿ ಸಂಸದ ಬಿ.ವೈ.ರಾಘವೇಂದ್ರ ಅವರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ 38 ಪ್ರಾಣಿ ಮನೆಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ಮೈಸೂರು ಮೃಗಾಲಯದ ಎದುರು ಪ್ರವಾಸಿಗರ ಅನುಕೂಲಕ್ಕಾಗಿ ಅಂಡರ್‌ಪಾಸ್ ನಿರ್ಮಾಣವಾಗುವಲ್ಲಿ ಮಹದೇವಸ್ವಾಮಿ ಅವರ ಪಾತ್ರ ಮಹತ್ವದ್ದಾಗಿದೆ. ಇಂತಹ ಹತ್ತಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಗಮನ ಸೆಳೆದರು.

ಸಾರ್ಥಕ ಸೇವಾ ಕಾರ್ಯದಲ್ಲೂ ಮುಂದು

ಎಲ್.ಆರ್.ಮಹದೇವಸ್ವಾಮಿ ಅವರು ರಾಜಕೀಯ, ಪಕ್ಷ ಸಂಘಟನೆಗಷ್ಟೇ ಸೀಮಿತರಾಗದೆ ಜನಸೇವೆಯನ್ನೂ ಮುಂದುವರೆಸಿಕೊಂಡು ಬಂದಿದ್ದಾರೆ. ಕೋವಿಡ್ ಸಂದರ್ಭದಲ್ಲಿ ತಮ್ಮ ಸ್ನೇಹಿತರೊಂದಿಗೆ ಸೇರಿಕೊಂಡು ಸಾಕಷ್ಟು ಸೇವೆ ಮಾಡಿದ್ದಾರೆ. ಬಿ.ವೈ.ವಿಜಯೇಂದ್ರ ಅಭಿಮಾನಿ ಬಳಗದ ಮೂಲಕ ಕೊರೊನಾ ಸಂತ್ರಸ್ತರಿಗೆ ನೆರವಾಗುವ ಮೂಲಕ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಸಾವಿರಾರು ಬಡ ಕುಟುಂಬಗಳಿಗೆ ದಿನಸಿ ಕಿಟ್ ನೀಡಿ ನೆರವಾಗಿದ್ದಾರೆ. ಜನರಿಗೆ ಆಹಾರ ಪದಾರ್ಥ, ಔಷಧಿ ಕಲ್ಪಿಸುವುದರ ಜೊತೆಗೆ ಪಶುಪಕ್ಷಿಗಳಿಗೂ ಆಹಾರ ಒದಗಿಸುವ ಸತ್ಕಾರ್ಯ ಮಾಡಿದ್ದಾರೆ. ಬಳಗದ ಮೂಲಕ ಕುವೆಂಪುನಗರದ ಮರಳು ಸಿದ್ದೇಶ್ವರ ದೇವಸ್ಥಾನದಲ್ಲಿ ಸರಳ ಮದುವೆಗೆ ನೆರವಾಗಿ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ರಂಜಾನ್ ಸಂದರ್ಭದಲ್ಲಿ ಮುಸ್ಲಿಂ ಬಡ ಕುಟುಂಬಗಳಿಗೆ ಆಹಾರ ಕಿಟ್ ಹಾಗೂ ಹಬ್ಬಕ್ಕೆ ಅಗತ್ಯ ವಸ್ತುಗಳನ್ನು ಕಲ್ಪಿಸಿ ಸಾಮರಸ್ಯ ಸಂದೇಶ ಸಾರಿದ್ದಾರೆ. ವರುಣಾ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಲಕ್ಷಾಂತರ ಮೌಲ್ಯದ ಕೋವಿಡ್ ಮೆಡಿಸಿನ್ ಕಿಟ್, ಆಕ್ಸಿಜನ್ ಕಾನ್ಸನ್‌ಟ್ರೇಟರ್‌ಗಳನ್ನು ಬಳಗದ ವತಿಯಿಂದ ನೀಡಿದ್ದಾರೆ. ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಹಾಗೂ ಸ್ಮಾರ್ಟ್‌ಫೋನ್ ಕೊಡಿಸಿದ್ದಾರೆ. ಬೇಸಿಗೆಯಲ್ಲಿ ಪ್ರಾಣಿ, ಪಕ್ಷಿಗಳಿಗೆ ಆಹಾರ ನೀರು ಒದಗಿಸುವ ಅಭಿಯಾನಕ್ಕೂ ಕೈ ಜೋಡಿಸಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಚಿಕಿತ್ಸೆ ಹಾಗೂ ಲಸಿಕೆ ಪಡೆಯಲು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನೂ ಮಾಡಿದ್ದಾರೆ. ಒಟ್ಟಾರೆ ತಮಗೆ ದೊರೆತ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವುದರ ಜೊತೆಗೆ ಚುನಾವಣೆ ಸಂದರ್ಭಗಳಲ್ಲಿ ಪ್ರಚಾರ, ನಿರಂತರ ಸಂಘಟನಾ ಚಟುವಟಿಕೆಯಲ್ಲಿ ತೊಡಗುವುದಷ್ಟೇ ಅಲ್ಲದೆ ಸಾಧ್ಯವಾದ ರೀತಿಯಲ್ಲಿ ಸಮಾಜಕ್ಕೆ ನೆರವಾಗಿದ್ದಾರೆ.



ವರುಣಾ ಕ್ಷೇತ್ರದ ಮನೆ ಮಗನಂತೆ ಸೇವೆ

ಬಿಜೆಪಿ ನಿಷ್ಠಾವಂತ ಕಾರ್ಯಕರ್ತರಾಗಿರುವ ಎಲ್.ಆರ್.ಮಹದೇವಸ್ವಾಮಿ, ಪಕ್ಷದ ಹಲವು ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ಹಿರಿಯ ನಾಯಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೂಲಕ ರಾಜ್ಯಮಟ್ಟದಲ್ಲೂ ಪರಿಚಿತರಾದ ಮಹದೇವಸ್ವಾಮಿ ಅವರು ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚು ಒಡನಾಟ ಹೊಂದಿದ್ದಾರೆ. ಕೊರೊನಾ ಸಂದರ್ಭದಲ್ಲೂ ಬಡವರಿಗೆ ದಿನಸಿ, ಔಷಧಿ ಒದಗಿಸಿದ್ದಾರೆ. ಆನ್‌ಲೈನ್ ಕಲಿಕೆ ಅನಿವಾರ್ಯವಾಗಿದ್ದಾಗ ಹಲವು ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಕಲ್ಪಿಸಿಕೊಟ್ಟಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಜನ್ಮದಿನದ ಹಿನ್ನೆಲೆಯಲ್ಲಿ ಮೈಸೂರಲ್ಲಿ ವರುಣಾ ವಿಧಾನಸಭಾ ಕ್ಷೇತ್ರದ 27 ರೈತರಿಗೆ ಬೆಳೆಗೆ ಔಷಧಿ ಸಿಂಪಡಿಸುವ ಮೋಟಾರ್ ಚಾಲಿತ ಸ್ಪ್ರೇಯರ್ ಹಾಗೂ ಹೊಲಿಗೆ ಯಂತ್ರಗಳನ್ನು ನೀಡಿದ್ದಾರೆ. ಕಷ್ಟ–ಸುಖದಲ್ಲಿ ಭಾಗಿಯಾಗುವ ಇವರನ್ನು ಜನ ತಮ್ಮ ಮನೆ ಮಗನಂತೆ ಕಾಣುತ್ತಾರೆ.



ಬಿಜೆಪಿ ಸರ್ಕಾರದಲ್ಲಿ ಸಾಧನೆಗಿಂತ ಹಗರಣಗಳೇ ಹೆಚ್ಚು

ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಆರೋಪ



ಪಾಂಡವಪುರ, ಫೆ.26– ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದಲ್ಲಿ ಸಾಧನೆಗಿಂತ ಹಗರಣಗಳೇ ಹೆಚ್ಚಾಗಿದೆ ಎಂದು ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಆರೋಪಿಸಿದರು.

ತಾಲೂಕಿನ ಹರಳಹಳ್ಳಿ ಗ್ರಾಮದ ಬಳಿಯ ಜಾಮಿಯಾ ಫೈಸುಲ್ ರಸೂಲ್ ಸುನ್ನಿ ಎಜುಕೇಷನ್ ಟ್ರಸ್ಟ್ ಜಾಗದಲ್ಲಿ ನಡೆದ ತಾಲೂಕು ಮಟ್ಟದ ಜೆಡಿಎಸ್ ಅಲ್ಪ ಸಂಖ್ಯಾತರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಜಾತಿ ಜಾತಿಗಳ ನಡುವೆ, ಧರ್ಮಗಳ ನಡುವೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದೆ. ಮುಸ್ಲಿಂ ಓಲೈಕೆ ಮಾಡುವ ಕಾಂಗ್ರೆಸ್‌ನವರು ಹಿಜಾಬ್ ವಿವಾದ ಸಂದರ್ಭ ಯಾರು ಬಾಯಿ ಬಿಚ್ಚಲಿಲ್ಲ. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮಾತ್ರ ಹಿಜಾಬ್ ವಿವಾದವನ್ನು ಬಹಿರಂಗವಾಗಿ ವಿರೋಧಿಸಿ ಮುಸ್ಲಿಂರ ಪರ ನಿಂತರು. ಬಿಜೆಪಿ ಅವರನ್ನು ಸೋಲಿಸಲು ಕಾಂಗ್ರೆಸ್‌ನಿಂದ ಸಾಧ್ಯವಿಲ್ಲ. ಈ ರಾಜ್ಯದ ಗೌಡರು, ರೈತಾಪಿ ವರ್ಗ ಬಿಜೆಪಿ ಕಿತ್ತೊಗೆಯಲಿದೆ ಎಂದು ಕಿಡಿಕಾರಿದರು.

2013ರಲ್ಲಿ 120 ಸ್ಥಾನ ಗೆದ್ದಿದ್ದ ಕಾಂಗ್ರೆಸ್ 2018ರಲ್ಲಿ 70 ಸ್ಥಾನಕ್ಕೆ ಕುಸಿಯಿತು. ರಾಜ್ಯದಲ್ಲಿ ಅತಂತ್ರ ಸ್ಥಿತಿ ಎದುರಾದಾಗ ಕಾಂಗ್ರೆಸ್ ಹೈಕಮೆಂಡ್, ದೇವೇಗೌಡರ ಮನೆಗೆ ಬಾಗಿಲಿಗೆ ಬಂದು ಮೈತ್ರಿ ಸರ್ಕಾರ ರಚಿಸಿದರು. ಆದರೆ ಕಾಂಗ್ರೆಸ್‌ನವರು ತಮ್ಮ ಶಾಸಕರನ್ನು ಬಾಂಬೆಗೆ ಕಳುಹಿಸಿ ಕುಮಾರಸ್ವಾಮಿ ಅವರ ಸರ್ಕಾರ ತೆಗೆದರು. ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್‌ನ ಮುಸ್ಲಿಂ ಸಮುದಾಯ ಅಭ್ಯರ್ಥಿಯನ್ನು ಕಾಂಗ್ರೆಸ್‌ನವರು ಸೋಲಿಸಿದರು. ಸಿದ್ದರಾಮಯ್ಯ ಬಾದಾಮಿಯಲ್ಲಿ ಗೆದ್ದು ಇದೀಗ ಕೋಲಾರಕ್ಕೆ ಬರುತ್ತಿದ್ದಾರೆ. ಕೋಲಾರದಲ್ಲಿ ಇರುವ ಮುಸ್ಲಿಂಮರು ನನಗೆ ಮತ ನೀಡಲಿದ್ದಾರೆ ಎನ್ನುವ ಹಗಲುಗನಸು ಕಾಣುತ್ತಿದ್ದಾರೆ ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, 1994ರಲ್ಲಿ ಸಿ.ಎಂ.ಇಬ್ರಾಹಿಂ ಜೆಡಿಎಸ್ ರಾಜ್ಯಾಧ್ಯಕ್ಷರಾಗಿದ್ದಾಗ ಜೆಡಿಎಸ್ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿತ್ತು. ಇದೀಗ ಮತ್ತೆ ರಾಜ್ಯದಲ್ಲಿ ಜೆಡಿಎಸ್ ಪರ್ವ ಮರುಕಳಿಸಲಿದೆ ಎಂದರು.

ಎರಡೂ ರಾಷ್ಟ್ರೀಯ ಪಕ್ಷಗಳ ದುರಾಡಳಿತದಿಂದ ಜನತೆ ಬೇಸತ್ತಿದ್ದಾರೆ. ಹಾಗಾಗಿ ರಾಜ್ಯದ ಜನತೆಗೆ ಪ್ರಾದೇಶಿಕ ಪಕ್ಷದ ಅವಶ್ಯಕತೆ ಇದ್ದು ಮುಂದಿನ 2023ರ ಚುನಾವಣೆಯಲ್ಲಿ ಪ್ರಾದೇಶಿಕ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಲಿದೆ. ಎಚ್.ಡಿ.ಕುಮಾರಸ್ವಾಮಿ ಮುಖ್ಯ ಮಂತ್ರಿಯಾಗಲಿದ್ದಾರೆ ಎಂದರು.

ಸಮಾವೇಶದಲ್ಲಿ ಜೆಡಿಎಸ್ ರಾಷ್ಟ್ರೀಯ ಉಪಾಧ್ಯಕ್ಷ ಜಫ್ರುಲ್ಲಾಖಾನ್, ಮಹಿಳಾ ವಿಭಾಗದ ರಾಜ್ಯ ಕಾರ್ಯದರ್ಶಿ ನಜ್ಮಾ ನಜೀರ್, ಹೈಕೋರ್ಟ್ ವಕೀಲ ಎಂ.ಎಸ್. ಮುಕ್ರಂಪಾಷ, ವಸ್ತು ಪ್ರದರ್ಶನ ಪ್ರಾಧಿಕಾರ ಮಾಜಿ ಅಧ್ಯಕ್ಷ ಅಬ್ದುಲ್ಲಾ ಜೆಡಿಎಸ್ ತಾಲೂಕು ಅಧ್ಯಕ್ಷ ಮಲ್ಲೇಶ್, ಮೌಲಾನಾ ಅಬ್ದುಲ್ ಸಲಾಂ, ವಾಜೀದ್ ಖೈರಿ, ಪುರಸಭಾಧ್ಯಕ್ಷೆ ಅರ್ಚನ ಚಂದ್ರು, ಉಪಾಧ್ಯಕ್ಷೆ ಶ್ವೇತಾ, ಸದಸ್ಯ ಇಮ್ರಾನ್ ಷರೀಫ್, ನಜೀರ್ ಅಹಮದ್, ಸಮಿಯುಲ್ಲಾ, ಅಬ್ದುಲ್ ವಾಹಿದ್, ಲಿಂಗರಾಜು ಇನ್ನಿತರರಿದ್ದರು.

6 ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬಂದು ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ, ಸಿ.ಎಸ್. ಪುಟ್ಟರಾಜು ಮಂತ್ರಿಯಾಗುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಸಿ.ಎಸ್.ಪುಟ್ಟರಾಜು ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಕ್ಷೇತ್ರದ ಜನರ ಕಣ್ಮುಂದಿದೆ. ಹಾಗಾಗಿ ಕ್ಷೇತ್ರದ ಜನತೆ ಪುಟ್ಟರಾಜು ಅವರನ್ನು ಈ ಬಾರಿ ಅಧಿಕ ಮತಗಳಿಂದ ಗೆಲ್ಲಿಸಿ ರಾಜ್ಯದಲ್ಲಿ ಮತ್ತೊಮ್ಮೆ ಸಚಿವರನ್ನಾಗಿಸಲಿದ್ದಾರೆ.

- ಸಿ.ಎಂ.ಇಬ್ರಾಹಿಂ, ಜೆಡಿಎಸ್ ರಾಜ್ಯಾಧ್ಯಕ್ಷ.

ವಿಜೃಂಭಣೆಯ ಶ್ರೀಲಕ್ಷ್ಮೀ ನಾರಾಯಣಸ್ವಾಮಿ ಬ್ರಹ್ಮ ರಥೋತ್ಸವ



ಕೆ.ಆರ್.ಪೇಟೆ, ಫೆ.26– ತಾಲೂಕಿನ ಇತಿಹಾಸ ಪ್ರಸಿದ್ಧ ಹೊಸಹೊಳಲು ಗ್ರಾಮದ ಶ್ರೀಲಕ್ಷ್ಮೀ ನಾರಾಯಣಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ತಹಸೀಲ್ದಾರ್ ನಿಸರ್ಗಪ್ರಿಯ ಮತ್ತು ಪುರಸಭಾಧ್ಯಕ್ಷೆ ಮಹದೇವಿ, ಉಪಾಧ್ಯಕ್ಷೆ ಗಾಯಿತ್ರಿ ಸುಬ್ರಹ್ಮಣ್ಯ ಅವರು, ದೇವಾಲಯ ಸಮಿತಿ ಸದಸ್ಯರೊಂದಿಗೆ ರಥೋತ್ಸವಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಸಾವಿರಾರು ಭಕ್ತರು ರಥ ಎಳೆಯುವ ಮೂಲಕ ಹಣ್ಣು ಜವನ ಎಸೆದು ಭಕ್ತಿಭಾವ ಸಮರ್ಪಿಸಿದರು. ಉಘೇ ಗೋವಿಂದ, ಉಘೇ ಉಘೇ ಶ್ರೀನಿವಾಸ, ಉಘೇ ನಾರಾಯಣ, ಉಘೇ ಉಘೇ.. ವೆಂಕಟರಮಣ ಎಂಬ ಜಯಘೋಷಗಳು ರಥೋತ್ಸವ ಸಂದರ್ಭ ಮುಗಿಲು ಮುಟ್ಟಿದ್ದವು. ಸರ್ವಾಲಂಕಾರಗೊಂಡಿದ್ದ ರಥ ಹೊಸಹೊಳಲು ಗ್ರಾಮದ ಮುಖ್ಯ ಬೀದಿಗಳಲ್ಲಿ ಸಂಚರಿಸಿತು.

ಈ ವೇಳೆ ದೇವಾಲಯ ಧರ್ಮದರ್ಶಿ ಸಮಿತಿ ಸಂಚಾಲಕ ಹೆಚ್.ಆರ್.ಲೋಕೇಶ್, ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್, ವಿಜಯ್ ರಾಮೇಗೌಡ, ಹೆಚ್.ಜಿ. ಸೋಮಶೇಖರ್, ಪುರಸಭಾ ಮುಖ್ಯಾಧಿಕಾರಿ ಬಸವರಾಜು, ರಾಜಸ್ವ ನಿರೀಕ್ಷಕ ಹರೀಶ್, ಗ್ರಾಮದ ಮುಖಂಡರಾದ ಡಾ.ಶ್ರೀನಿವಾಸಶೆಟ್ಟಿ, ತಮ್ಮಣ್ಣಶೆಟ್ಟಿ, ಪುರಸಭಾಧ್ಯಕ್ಷೆ ಮಹಾದೇವಿ, ಉಪಾಧ್ಯಕ್ಷೆ ಗಾಯತ್ರಿ, ಸದಸ್ಯರಾದ ಪ್ರವೀಣ್ ಕಲ್ಪನಾ, ಹೆಚ್.ಡಿ.ಅಶೋಕ್, ಮುಖಂಡರಾದ ಬಾಳೇಕಾಯಿ ಬಸವೇಗೌಡ, ರಾಮೇಗೌಡ, ಕೃಷ್ಣೇಗೌಡ, ಕೆ. ಮಂಜುಳಾ, ಯೋಗೇಶ್, ರಾಜು, ಗೋಪಿ, ಜಯಮ್ಮ ಸೇರಿದಂತೆ ಸಾವಿರಾರು ಭಕ್ತರಿದ್ದರು.

ಕರಾಮುವಿ ಪ್ರವೇಶಾತಿ ಪ್ರಾರಂಭ



ಮಂಡ್ಯ, ಫೆ.26– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2022–23ನೇ ಸಾಲಿನ ಪ್ರವೇಶಾತಿ ಪ್ರಾರಂಭವಾಗಿದ್ದು, ಪ್ರಸಕ್ತ ವರ್ಷ 1 ಲಕ್ಷ ಪ್ರವೇಶಾತಿ ಗುರಿ ಹೊಂದಲಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ತಿಳಿಸಿದರು. ನಗರದ ಕೆಎಸ್‌ಓಯು ಪ್ರಾದೇಶಿಕ ಕೇಂದ್ರದ ಆವರಣದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 1046 ಲರ್ನಿಂಗ್ ಸೆಂಟರ್‌ಗಳಿದ್ದು, 1050ಕ್ಕೂ ಹೆಚ್ಚು ಉಪನ್ಯಾಸಕರು ಹಾಗೂ 900 ಅತಿಥಿ ಉಪನ್ಯಾಸಕರಿದ್ದಾರೆ. ಪ್ರಸ್ತುತ 64 ಕೋರ್ಸ್‌ಗಳಿವೆ. ಜೊತೆಗೆ ಈ ವರ್ಷದಿಂದ 10 ಹೊಸ ಕೋರ್ಸ್‌ಗಳು ಸೇರ್ಪಡೆಯಾಗಲಿವೆ ಎಂದರು.

ಅಂಕಪಟ್ಟಿ ಸಂಪೂರ್ಣ ಡಿಜಿಟಲೀಕರಣವಾಗಿದ್ದು, ಪ್ರವೇಶಾತಿಯನ್ನು ಆನ್‌ಲೈನ್ ಮೂಲಕವೇ ನಡೆಸಲಾಗುತ್ತದೆ. ಸಂಪೂರ್ಣ ಪಾರದರ್ಶಕತೆಗೆ ಅನುಗುಣವಾಗಿ ಶುಲ್ಕವನ್ನು ಆನ್‌ಲೈನ್ ಮುಖಾಂತರ ತೆಗೆದುಕೊಳ್ಳಲಾಗುತ್ತದೆ. ವಿದ್ಯಾರ್ಥಿಗಳು ತಾವಿರುವ ಜಿಲ್ಲೆಯಲ್ಲಿಯೇ ಶೈಕ್ಷಣಿಕ ಪ್ರಯೋಜನ ಪಡೆದುಕೊಳ್ಳಲು ಸುಸಜ್ಜಿತ ಕಟ್ಟಡಗಳ ಪ್ರಾದೇಶಿಕ ಕೇಂದ್ರಗಳು ಲಭ್ಯವಿದೆ ಎಂದರು. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಅವಕಾಶ ಕಲ್ಪಿಸಲಾಗಿದೆ. ವಿಶ್ವವಿದ್ಯಾನಿಲಯವು ಪ್ಲೇಸ್ಮೆಂಟ್ಸ್ ಮುಖಾಂತರ ನಿಯಮಿತವಾಗಿ ಉದ್ಯೋಗ ಮೇಳ ಆಯೋಜಿಸಲಾಗುತ್ತದೆ ಎಂದರು.

ಪ್ರವೇಶಾತಿ ವಿಶೇಷಗಳು: ಯುಜಿಸಿ ನಿಯಮಾವಳಿಯಂತೆ ವಿವಿ ದ್ವಿ ಪದವಿಗೆ ಅವಕಾಶ ಕಲ್ಪಿಸಿದೆ. ಆಟೋ/ಕ್ಯಾಬ್ ಡ್ರೈವರ್ ಗಳ ಕುಟುಂಬಕ್ಕೆ ಬೋಧನಾ ಶುಲ್ಕದಲ್ಲಿ ಶೇ.30 ರಷ್ಟು ವಿನಾಯಿತಿ ಪಡೆಯಬಹುದು. ವಿದ್ಯಾರ್ಥಿಗಳ ಪೋಷಕರು ಕೋವಿಡ್–19 ಸಾಂಕ್ರಮಿಕ ರೋಗದಿಂದ ಮರಣ ಹೊಂದಿದ್ದಲ್ಲಿ, ಪ್ರವೇಶಾತಿ ಶುಲ್ಕವನ್ನು 100ರಷ್ಟು ವಿನಾಯಿತಿ ಪಡೆಯಬಹುದು. ಇದೇ ಸಂದರ್ಭ ಪ್ರವೇಶಾತಿ ಸಂಬಂಧ ಭಿತ್ತಿಪತ್ರ ಬಿಡುಗಡೆ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವರಾದ ಪ್ರೊ.ಕೆ.ಎಲ್.ಎನ್ ಮೂರ್ತಿ, ಅಧ್ಯಯನ ವಿಭಾಗದ ಡೀನ್ ಪ್ರೊ.ರಾಮನಾಥ್, ಪ್ರಾದೇಶಿಕ ನಿರ್ದೇಶಕರಾದ ಮಿಲನಾ ಹಾಜರಿದ್ದರು.

ಗ್ರಾಮಾಭಿವೃದ್ಧಿಗೆ ಶ್ರೀಧರ್ಮಸ್ಥಳ ಸಂಸ್ಥೆ ಕಲ್ಪವೃಕ್ಷವಿದ್ದಂತೆ

ತಾಲೂಕು ಕಸಾಪ ನಿಕಟಪೂರ್ವ ಕಾರ್ಯಾಧ್ಯಕ್ಷ ಮಂಜುನಾಥ್



ಕೆ.ಆರ್.ಪೇಟೆ, ಫೆ.26– ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಗ್ರಾಮಾಭಿವೃದ್ಧಿಗಾಗಿ ಕೇಳಿದ್ದನ್ನು ಕೊಡುವ ಕಾಮಧೇನು, ಕಲ್ಪವೃಕ್ಷದಂತೆ ಕೆಲಸ ಮಾಡುತ್ತಿದೆ ಎಂದು ತಾಲೂಕು ಕಸಾಪ ನಿಕಟಪೂರ್ವ ಕಾರ್ಯಾಧ್ಯಕ್ಷ ಮಂಜುನಾಥ್ ಅಭಿಪ್ರಾಯಪಟ್ಟರು.

ತಾಲೂಕಿನ ಶೀಳನೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಪ್ರಗತಿಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿ ಅವರು ಮಾತನಾಡಿದರು. ತಮ್ಮ ಪಾಲಿನ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವ ಮೂಲಕ ನಮ್ಮ ಸಂಸ್ಕೃತಿ ಹಾಗೂ ಪರಂಪರೆ ಉಳಿಸಿ, ಬೆಳೆಸುವ ಕೆಲಸವನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಾವಿರಾರು ಕಾರ್ಯಕರ್ತರು ಹಾಗೂ ಸೇವಾ ಪ್ರತಿನಿಧಿಗಳು ಬದ್ಧತೆಯಿಂದ ಮಾಡುತ್ತಿದ್ದಾರೆ. ಇಂದು ಸಾವಿರಾರು ಮಹಿಳೆಯರನ್ನು ಸಂಘಟಿಸಿ ಸತ್ಯನಾರಾಯಣಸ್ವಾಮಿ ಪೂಜೆ ಮಾಡುವ ಮೂಲಕ ಗ್ರಾಮೀಣ ಶ್ರೀಸಾಮಾನ್ಯರಲ್ಲಿ ಧಾರ್ಮಿಕ ಪ್ರಜ್ಞೆ ಹಾಗೂ ಮನೋಭಾವ ತುಂಬಿ ನ್ಯಾಯ, ನೀತಿ, ಧರ್ಮ ಹಾಗೂ ಸತ್ಯದ ಹಾದಿಯಲ್ಲಿಯೇ ಸಾಗಿ ಗುರಿ ಮುಟ್ಟಲು ಪ್ರೇರಕ ಶಕ್ತಿಯಾಗಿರುವ ಧರ್ಮಸ್ಥಳ ಸಂಸ್ಥೆ ಸರ್ಕಾರ ಮಾಡಲಾಗದ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಿದೆ ತಾಲೂಕಿನ 5 ಸಾವಿರಕ್ಕೂ ಹೆಚ್ಚಿನ ಪ್ರಗತಿ ಬಂಧು ಮಹಿಳಾ ಸ್ವಸಹಾಯ ಸಂಘಗಳಿಗೆ 85 ಕೋಟಿಗೂ ಹೆಚ್ಚು ಸಾಲ ಸೌಲಭ್ಯ ವಿತರಿಸುವ ಮೂಲಕ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ ಗ್ರಾಮಾಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡು ತ್ತಿದೆ ಎಂದರು. ಜಿಪಂ ಮಾಜಿ ಉಪಾಧ್ಯಕ್ಷ ಅಂಬ ರೀಶ್ ಕಾರ್ಯಕ್ರಮ ಉದ್ಘಾಟಿಸಿದರು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್ ಪ್ರಗತಿಬಂಧು ಮಹಿಳಾ ಸ್ವಸಹಾಯ ಗುಂಪುಗಳಿಗೆ ದಾಖಲೆಗಳನ್ನು ಹಸ್ತಾಂತರಿಸಿದರು.

ಶೀಳನೆರೆ ಗ್ರಾಪಂ ಅಧ್ಯಕ್ಷೆ ಗಾಯತ್ರಿ, ಸದಸ್ಯರಾದ ಎಸ್.ಪಿ.ಸಿದ್ದೇಶ್, ಸವಿತಾ, ಗ್ಯಾಸ್ ಉದ್ಯಮಿ ಬಿ.ರಾಜಶೇಖರ್, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ತಾಲೂಕು ಯೋಜನಾಧಿಕಾರಿ ಮಮತಾಶೆಟ್ಟಿ, ಜ್ಞಾನ ವಿಕಾಸ ಯೋಜನೆ ಸಮನ್ವಯಾಧಿಕಾರಿ ಕಾವ್ಯ, ಹರಳಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಸುರೇಶ್, ಗ್ರಾಪಂ ಸದಸ್ಯರಾದ ಸಿದ್ದೇಶ್, ಸವಿತಾ, ಮುಖ್ಯ ಶಿಕ್ಷಕ ಲೋಕೇಶ್, ಪುರಸಭಾ ಸದಸ್ಯ ಕೆ.ಆರ್.ನೀಲಕಂಠ, ಮಾಜಿ ಪುರಸಭಾ ಸದಸ್ಯ ದಿನೇಶ್, ಮೇಲ್ವಿಚಾರಕರಾದ ಅನ್ನಪೂರ್ಣ, ರೂಪ, ಪವಿನ್, ಲೋಕೇಶ್, ಪಿಡಿಓ ನವೀನ್, ಸಾಂಸ್ಕೃತಿಕ ಸಂಘಟಕ ವೇದಬ್ರಹ್ಮ ಶ್ರೀ ಗೋಪಾಲಕೃಷ್ಣ ಅವಧಾನಿಗಳು ಸೇರಿದಂತೆ 10 ಸಾವಿರಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಭಾರತೀನಗರ ಸರ್ಕಾರಿ ಕಾಲೇಜಿಗೆ ನ್ಯಾಕ್ ತಂಡ ಭೇಟಿ



ಭಾರತೀನಗರ, ಫೆ26– ಇಲ್ಲಿಗೆ ಸಮೀಪದ ಮಣಿಗೆರೆ ಗ್ರಾಮದಲ್ಲಿ ಭಾರತೀನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್ ಮಾನ್ಯತೆಗಾಗಿ ಪರಿಶೀಲನಾ ಸಮಿತಿ ಸದಸ್ಯರು ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಸಿ.ತಮ್ಮಣ್ಣ, ನ್ಯಾಕ್ ಸಮಿತಿ ಛೇರ್ಮನ್ ಹಾಗೂ ಐಸಿಎಫ್‌ಎಐ ವಿವಿ ಹಿಮಾಚಲ ಪ್ರದೇಶ ಉಪಕುಲಪತಿ ಡಾ.ಕೇಶವ್ ಶರ್ಮಾ, ಸದಸ್ಯರಾದ ನಿವೃತ್ತ ಪ್ರಾಧ್ಯಾಪಕ ಸೆಂಟ್ರಲ್ ಯೂನಿವರ್‌ಸಿಟಿ ಆಂಧ್ರಪ್ರದೇಶದ ರಾಮರೆಡ್ಡಿ, ಪ್ರಾಂಶುಪಾಲ ರಮಣ್‌ಲಾಲ್ ಮೋದಿ ಕಾಲೇಜಿಗೆ ಭೇಟಿ ನೀಡಿ ಕಾಲೇಜಿನ ಶೈಕ್ಷಣಿಕ ಮತ್ತು ಶೈಕ್ಷಣೇತರ ಚಟುವಟಿಗಳ ಬಗ್ಗೆ ಪರಿಶೀಲನೆ ನಡೆಸಿದರು. ನಂತರ ಭೋದಕರ ಸಭೆ ಭೋದಕೇತರರ ಸಭೆ, ಪೋಷಕರ ಸಭೆ, ವಿದ್ಯಾರ್ಥಿಗಳ ಸಭೆ ನಡೆಸಿ ಕಾಲೇಜಿನ ಶೈಕ್ಷಣಿಕ ಚಟುವಟಿಕಗಳ ಬಗ್ಗೆ ಮಾಹಿತಿ ಪಡೆದರು.

ಡಿ.ಸಿ.ತಮ್ಮಣ್ಣ ಮಾತನಾಡಿ, ನಾನು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಲು ನಮ್ಮ ತಾಯಿಯೇ ಪ್ರೇರಣೆ. ಹೆಣ್ಣುಮಗಳು ವಿದ್ಯಾವಂತೆಯಾದರೆ ಕುಟುಂಬವೇ ವಿದ್ಯಾವಂತರಾಗುತ್ತಾರೆ ಎಂದು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಲು ಮುಂದಾದೆ. ಹಾಗಾಗಿ ನನ್ನ ಅಧಿಕಾರವಧಿಯಲ್ಲಿ 12 ಪ್ರೌಢ ಶಾಲೆ, 6 ಪದವಿ ಪೂರ್ವ ಕಾಲೇಜು, 2 ಪದವಿ ಕಾಲೇಜು, 2 ಐಟಿಐ ಕಾಲೇಜು, 1 ಸ್ನಾತಕೋತ್ತರ ಕೇಂದ್ರ, 6 ಮೊರಾರ್ಜಿ ಶಾಲೆ ಸೇರಿದಂತೆ ಶಿಕ್ಷಣ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯ ಮಾಡಲಾಗಿದೆ ಎಂದರು.

ಇದೇ ವೇಳೆ ಕಾಲೇಜಿನ ಪ್ರಾಂಶುಪಾಲ ಆರ್.ರಮೇಶ್, ಸಂಯೋಜಕ ಕೆ.ಎಂ. ಶಿವಣ್ಣ ಪ್ರಾಧ್ಯಾಪಕ ರಘು, ವಿನಯ್ ಕುಮಾರ್, ಕೆ.ಆರ್.ಲೋಕೇಶ್, ಅಶೋಕ್, ಶ್ರೀನಿವಾಸ ಮೂರ್ತಿ, ಶೋಭಾ ಹಲವರಿದ್ದರು.

ಟನ್ ಕಬ್ಬಿಗೆ ಹೆಚ್ಚುವರಿ ದರ 150 ರೂ. ನೀಡದ ಕಾರ್ಖಾನೆಗಳ ಧೋರಣೆ ಖಂಡಿಸಿ

ನಾಳೆ ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ

ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್



ಮೈಸೂರು, ಫೆ.26(ಪಿಎಂ)– ಸರ್ಕಾರದ ಆದೇಶವಿದ್ದರೂ ಟನ್ ಕಬ್ಬಿಗೆ ಹೆಚ್ಚುವರಿ ದರ 150 ರೂ. ನೀಡದಿರುವ ಕಾರ್ಖಾನೆಗಳ ಧೋರಣೆ ಖಂಡಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಫೆ.28ರಂದು ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಒಕ್ಕೂಟ ಮತ್ತು ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಬ್ಬು ಬೆಳೆಗಾರರ ಸಂಘದ ಸತತ 39 ದಿನಗಳ ಹೋರಾಟದ ಪರಿಣಾಮ ಕಬ್ಬಿಗೆ 150 ರೂ. ಹೆಚ್ಚುವರಿ ನೀಡಲು ಸರ್ಕಾರ ಆದೇಶ ಮಾಡಿತು. ಆದರೆ ಕಾರ್ಖಾನೆಗಳು ಹೆಚ್ಚುವರಿ ಹಣ ಪಾವತಿಸುತ್ತಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ದೂರು ನೀಡಿದ್ದರೂ ಪ್ರಯೋಜನ ವಾಗಿಲ್ಲ. ಹೆಚ್ಚುವರಿ 150 ರೂ. ಪಾವತಿಗೆ ಕ್ರಮ ವಹಿಸುವಂತೆ ಹಾಗೂ ರೈತರ ವಿವಿಧ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಈ ಹೋರಾಟ ಹಮ್ಮಿ ಕೊಳ್ಳಲಾಗಿದೆ ಎಂದರು.

ನಂಜನಗೂಡಿನ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಮಹದೇಶ್ವರ ಸಕ್ಕರೆ ಕಾರ್ಖಾನೆಗಳಿಂದ ಒಟ್ಟಾರೆ 25 ಲಕ್ಷ ಟನ್ ಕಬ್ಬು ಅರೆಯಲಾಗಿದೆ. ಈ ಸಂಬಂಧ ರೈತರಿಗೆ ನೀಡಬೇಕಾದ ಹೆಚ್ಚುವರಿ 150 ರೂ. ಬಾಕಿ ಉಳಿಸಿಕೊಂಡಿದ್ದು, ಇದರ ಒಟ್ಟು ಮೊತ್ತ 37 ಕೋಟಿ ರೂ. ಆಗಿದೆ. ಈ ಎರಡೂ ಕಾರ್ಖಾನೆಗಳು ಒಂದೇ ಮಾಲೀಕತ್ವಕ್ಕೆ ಬರಲಿವೆ. ಹಾಗಾಗಿ ಎರಡೂ ಜಿಲ್ಲೆಗಳ ಕಬ್ಬು ಬೆಳೆಗಾರರು ಈ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಜಾರಿಗೆ ತಂದಿರುವ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಕೂಡಲೇ ರದ್ದುಗೊಳಿಸಬೇಕು. ಜಿಲ್ಲೆಯಲ್ಲಿ ಸಾವಿರಾರು ರೈತರು ಹತ್ತಾರು ವರ್ಷಗಳಿಂದಲೂ ಸಾಗುವಳಿ ಮಾಡುತ್ತಿರುವ ಜಮೀನುಗಳಿಗೆ ಸಾಗುವಳಿ ಪತ್ರ ನೀಡದೇ ನಿರ್ಲಕ್ಷ್ಯ ವಹಿಸಲಾಗುತ್ತಿದೆ. ಇಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳ ಬೇಕು. ಕಾಡು ಪ್ರಾಣಿಗಳ ಹಾವಳಿಯಿಂದ ನಾಶವಾಗುವ ಬೆಳೆಯ ಸಂಪೂರ್ಣ ನಷ್ಟ ಭರಿಸಬೇಕು. ಜೀವ ಹಾನಿಗೆ ಕನಿಷ್ಠ 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು. ಸಂಘದ ಪದಾಧಿಕಾರಿಗಳಾದ ಅತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಲಕ್ಷ್ಮಿಪುರ ವೆಂಕಟೇಶ್, ಕಾಟೂರು ಮಹದೇವಸ್ವಾಮಿ ಗೋಷ್ಠಿಯಲ್ಲಿದ್ದರು.

ಇಂದಿನಿಂದ ಕನ್ನಡ ಕಮ್ಮಟ

ಮೈಸೂರು, ಫೆ.26– ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ–ಆಡಳಿತ) ವತಿಯಿಂದ ಫೆ.27 ಮತ್ತು 28 ರಂದು 'ಕನ್ನಡ ಕಮ್ಮಟ–2023' ಆಯೋಜಿಸಲಾಗಿದೆ.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಕಾರ್ಯಕ್ರಮ ನಡೆಲಿದ್ದು, ಬೆಳಗ್ಗೆ 10 ಗಂಟೆಗೆ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ. ಚಿದಾನಂದಗೌಡ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಲಹೆಗಾರ ಬೇಳೂರು ಸುದರ್ಶನ, ಇಲಾಖೆ ಕಾರ್ಯದರ್ಶಿ ವಿ.ಪೊನ್ನುರಾಜ್ ಭಾಗವಹಿಸಿದ್ದಾರೆ.

ಜೆಡಿಎಸ್ ರಾಜ್ಯ ವಕ್ತಾರರಾಗಿ ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಮೈಸೂರು, ಫೆ.26–ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರನ್ನು ಜೆಡಿಎಸ್‌ನ ರಾಜ್ಯ ವಕ್ತಾರರನ್ನಾಗಿ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ನೇಮಕ ಮಾಡಿದ್ದಾರೆ. ಪಕ್ಷದ ಕಾರ್ಯಕ್ರಮಗಳು ಮತ್ತು ಪಕ್ಷ ಅಧಿಕಾರದಲ್ಲಿದ್ದಾಗ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಪ್ರಯತ್ನ ಮಾಡುತ್ತೀರಿ ಎಂಬ ಆಶಯದೊಂದಿಗೆ ರಾಜ್ಯ ವಕ್ತಾರರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಂಜೇಗೌಡರಿಗೆ ನೀಡಿರುವ ಆದೇಶ ಪತ್ರದಲ್ಲಿ ತಿಳಿಸಿರುವ ಅವರು, ಮಾಧ್ಯಮ ಚರ್ಚೆಯಲ್ಲಿ ಭಾಗವಹಿಸುವ ವೇಳೆ ಪಕ್ಷದ ತತ್ವ ಸಿದ್ಧಾಂತ, ಧ್ಯೇಯ ಧೋರಣೆ ಮತ್ತು ಪ್ರಚಲಿತ ವಿದ್ಯಮಾನಗಳ ಬಗ್ಗೆ ಅಧ್ಯಯನ ಮಾಡಿ ಅಗತ್ಯವಿರುವ ದಾಖಲಾತಿ ಮತ್ತು ದತ್ತಾಂಶಗಳೊಂದಿಗೆ ಭಾಗವಹಿಸುವಂತೆ ಸೂಚಿಸಿದ್ದಾರೆ.

ಮೋದಿ ಕಾವ್ಯಗಳಿಗೆ ದೇಶಭಕ್ತಿಯೇ ಮೂಲದ್ರವ್ಯ



ಮೈಸೂರು, ಫೆ.26(ಎಸ್‌ಬಿಡಿ)– ಪ್ರಧಾನಿ ನರೇಂದ್ರ ಮೋದಿ ಅವರ ಕಾವ್ಯಗಳಿಗೆ ರಾಷ್ಟ್ರಭಕ್ತಿಯೇ ಮೂಲದ್ರವ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಎ.ರಂಗಸ್ವಾಮಿ ಹೇಳಿದರು.

ಕನ್ನಡ ಸಾಹಿತ್ಯ ಕಲಾಕೂಟ, ಹೆಚ್.ವಿ.ರಾಜೀವ್ ಸ್ನೇಹ ಬಳಗ, ವೀರ ಸಾವರ್ಕರ್ ಯುವ ಬಳಗ ಹಾಗೂ ಇನೊವೇಟಿವ್ ಸಂಸ್ಥೆ ಸಹಯೋಗದಲ್ಲಿ ಮೈಸೂರಿನ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಪ್ರಧಾನಿ ನರೇಂದ್ರ ಮೋದಿ ರಚನೆಯ ಕೃತಿಯನ್ನು ವಿದ್ವಾಂಸ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಕನ್ನಡಕ್ಕೆ ಅನುವಾದಿಸಿರುವ 'ಹೊಸ ದಿಕ್ಕಿನ ಹಾಡು' ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ಪ್ರಧಾನಿ ಮೋದಿ ಅವರು ಕವಿ ಮನಸ್ಸಿನ ರಾಜಕಾರಣಿ ಎನ್ನುವುದು ಬಹುತೇಕರಿಗೆ ತಿಳಿದಿರಲಿಲ್ಲ. ಮೋದಿ ರಚಿಸಿರುವ ಕಾವ್ಯಕೃತಿ ಪ್ರಕಟವಾದ ಬಳಿಕ ಅವರ ಕಾವ್ಯಮನ ಅರ್ಥವಾಯಿತು. ರಾಷ್ಟ್ರಭಕ್ತಿ ಅವರ ಕಾವ್ಯಗಳಲ್ಲಿ ತುಂಬಿದೆ. ಆಧ್ಯಾತ್ಮ, ಪ್ರಕೃತಿ, ನೊಂದವರ ಕುರಿತು ಹಲವು ಕಾವ್ಯ ರಚಿಸಿದ್ದಾರೆ. ಆ ಕೃತಿಯನ್ನು ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಅತ್ಯಂತ ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ ಎಂದು ಪ್ರಶಂಸಿದರು.

ಕಾರ್ಯಕ್ರಮದಲ್ಲಿ ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ. ಪ್ರಧಾನ ಗುರುದತ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ವೀರ ಸಾವರ್ಕರ್ ಯುವ ಬಳಗದ ಅಧ್ಯಕ್ಷ ರಾಕೇಶ್ ಭಟ್, ಇನೊವೇಟಿವ್ ಅಧ್ಯಕ್ಷ ಜಿ.ಎಸ್. ಭಟ್, ಸಹಕಾರಿ ಧುರೀಣ ಜಗದೀಶ್ ಹೆಬ್ಬಾರ್, ಲೇಖಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ರಾಜ್ಯ ಮಟ್ಟದ ಬೌದ್ಧ ಮಹಾ ಸಮ್ಮೇಳನ

ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂವಿಧಾನದಲ್ಲಿ ಅವಕಾಶ ನೀಡಿದ್ದರೂ ಅದನ್ನು ಧಮನ ಮಾಡಲಾಗುತ್ತಿದೆ

ಡಾ. ಅಂಬೇಡ್ಕರ್ ಮೊಮ್ಮಗ ಡಾ. ಭೀಮರಾವ್ ಯಶವಂತ ರಾವ್ ಅಂಬೇಡ್ಕರ್ ವಿಷಾದ







ಮೈಸೂರು, ಫೆ.26(ಆರ್‌ಕೆ)–ಡಾ. ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಮತ್ತು ಧಾರ್ಮಿಕ ಆಚರಣೆ ಹಕ್ಕಿಗೆ ಅವಕಾಶ ನೀಡಿದ್ದರೂ ಅದನ್ನು ಧಮನ ಮಾಡಲಾಗುತ್ತಿದೆ ಎಂದು ಮಹಾ ಉಪಾಸಕರಾದ ಡಾ. ಅಂಬೇಡ್ಕರ್ ಅವರ ಮೊಮ್ಮಗ ಡಾ. ಭೀಮರಾವ್ ಯಶವಂತರಾವ್ ಅಂಬೇಡ್ಕರ್ ಅವರು ಇಂದಿಲ್ಲಿ ವಿಷಾದ ವ್ಯಕ್ತಪಡಿಸಿದರು.

ಭಾರತೀಯ ಬೌದ್ಧ ಮಹಾಸಭಾ ವತಿಯಿಂದ ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಬೌದ್ಧ ಮಹಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ವ್ಯಕ್ತಿಗೆ ತನಗೆ ಬೇಕಾದ ಧರ್ಮವನ್ನು ಸೇರುವ ಅಧಿಕಾರವನ್ನು ಸಂವಿಧಾನದತ್ತವಾಗಿ ನೀಡಲಾಗಿದೆ. ಆದರೆ ಈಗ ಧಾರ್ಮಿಕ ಸ್ವಾತಂತ್ರ್ಯ ಮತ್ತು ಧಾರ್ಮಿಕ ಆಚರಣೆ ಹಕ್ಕನ್ನು ಧಮನ ಮಾಡಲಾಗುತ್ತಿದ್ದು, ಅದು ಸಂವಿಧಾನ ಬಾಹಿರವಾಗಿರುವುದರಿಂದ ಅದಕ್ಕೆ ಅವಕಾಶ ನೀಡಬಾರದು ಎಂದರು.

ಭಾರತದ ಸಂವಿಧಾನವನ್ನು ಶ್ರೇಷ್ಠ ಎಂದು ಇಡೀ ವಿಶ್ವವೇ ಒಪ್ಪಿಕೊಂಡಿದೆ. ಡಾ. ಬಿ.ಆರ್.ಅಂಬೇಡ್ಕರ್ ಹುಟ್ಟು ಹಾಕಿದ 'ಬುದ್ಧ ಧರ್ಮ ಕ್ರಾಂತಿ' ಯನ್ನು ದೇಶದಾದ್ಯಂತ ಪ್ರಚರಿಸಿ ಜಾಗೃತಿ ಮೂಡಿಸಬೇಕು ಎಂದ ಅವರು, ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸಿದ ಬಳಿಕ ಬುದ್ಧ ಧರ್ಮ ಕ್ರಾಂತಿ ಮೊಳಗಿದೆ. ಅವರನ್ನು ಅನುಸರಿಸಿ ಬಹಳಷ್ಟು ದಲಿತರು, ಶೋಷಿತ ವರ್ಗ, ಶೂದ್ರರು ಈ ಧರ್ಮದ ದೀಕ್ಷೆ ಪಡೆದರು ಎಂದರು.

ಇತ್ತೀಚಿನ ದಿನಗಳಲ್ಲಿ ಈ ಕ್ರಾಂತಿಗೆ ಮತ್ತೆ ವೇಗದ ಸ್ಪರ್ಶ ದೊರೆತಿದೆ. ಉತ್ತರ ಪ್ರದೇಶದಲ್ಲಿ 10 ಸಾವಿರ ಹಿಂದುಳಿದ ವರ್ಗದವರು ಬೌದ್ಧ ಧರ್ಮ ಸ್ವೀಕರಿಸಿದ್ದಾರೆ. ಈ ದೇಶದಲ್ಲಿರುವ ಪ್ರತಿಯೊಬ್ಬರಿಗೂ ತಮಗೆ ಬೇಕಾದ ಧರ್ಮ ಸ್ವೀಕರಿಸಿ ಧಾರ್ಮಿಕ ಆಚರಣೆ ಮಾಡುವ ಹಕ್ಕನ್ನು ಸಂವಿಧಾನದಲ್ಲೇ ನೀಡಿರುವುದರಿಂದ ಅದನ್ನು ಧಮನ ಮಾಡಲು ಸಾಧ್ಯವಿಲ್ಲ ಎಂದು ಡಾ. ಭೀಮರಾವ್ ಯಶವಂತರಾವ್ ಅಂಬೇಡ್ಕರ್ ಇದೇ ಸಂದರ್ಭ ನುಡಿದರು.

ಸಮ್ಮೇಳನದ ನೇತೃತ್ವ ವಹಿಸಿದ್ದ ಮೈಸೂರಿನ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಅವರು ಮಾತನಾಡಿ, ಸತ್ಯ, ಸಮಾನತೆ, ಭ್ರಾತೃತ್ವ, ಜ್ಞಾನ, ಪ್ರಜ್ಞೆ, ವಿದ್ಯೆ ಹಾಗೂ ಮಾನವೀಯತೆಯನ್ನು ಪ್ರತಿಪಾದಿಸುವುದು ಬೌದ್ಧ ಧರ್ಮ. ಭಾರತ ಬುದ್ಧನ ನಾಡು. ನಮ್ಮ ಪೂರ್ವಜರು ಈ ಧರ್ಮವನ್ನು ಒಪ್ಪಿ ಸ್ವೀಕರಿಸಿದ್ದರಿಂದ ನಾವೂ ಬುದ್ಧರಾಗಬೇಕು ಎಂದರು.

ಭಾರತೀಯ ಬೌದ್ಧ ಸಭಾದ ಪ್ರವೀಣ್ ನಿಕಾಡೆ, ಎಸ್.ಕೆ.ಭಂಡಾರಿ, ಎಸ್.ಎಸ್. ಮಾಮರೆ, ಡಾ. ಜಯಪ್ರಕಾಶ್, ಮಲ್ಲಿಕಾರ್ಜುನ, ಶಿವರಾಜು, ವೈಶಾಲಿ ಮೋರೆ, ಡಾ. ರಾಜೇಂದ್ರ ಅರ್ಜುನರಾವ್ ಕೇಸರಿ, ಮಾಜಿ ಮೇಯರ್ ಪುರುಷೋತ್ತಮ್, ಗೋಪಾಲ್, ಡಿಎಸ್‌ಎಸ್, ಕರ್ನಾಟಕ ಬೌದ್ಧ ಸಭಾ, ಎಸ್‌ಸಿ, ಎಸ್‌ಟಿ ನೌಕರರ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ವಿವಿಧ ಜಿಲ್ಲೆಗಳ ಭಂತೇಜಿ ಭಿಕ್ಕುಗಳಾದ ಧಮ್ಮಾನಂದ, ಮನೋರಕ್ಷಿತ, ವೀರ್ಯಶೀಲ, ವರಜ್ಯೋತಿ, ಬೋಬಿ ರತ್ನ, ಬುದ್ಧಿ ಪ್ರಕಾಶ, ಭೋದಿದತ್ತ, ಸುಗತಪಾಲ, ಜ್ಯಾಲಲೋಕ, ಧಮ್ಮವೀರ, ಸಂಘವೇಲ, ಬುದ್ಧರ್ಮಿ, ಗೌತಮಿ ಮಾತಾಜಿ, ಮೈತ್ರಿ ಮತಾಜಿ, ಅನಿರುದ್ಧ ಭಂತೆ, ಮೈತ್ರೇಯ ಅವರು ಸಮ್ಮೇಳನದಲ್ಲಿ ಭಾಗವಹಿಸಿ ಬುದ್ಧವಂದನೆ, ಧಮ್ಮವಂದನೆ, ಸಂಘ ವಂದನೆ, ತಿಸರಣ–ಪಂಚಶೀಲ ಬೋಧನೆ ಮಾಡಿದರು.

ಪೂಜ್ಯ ಭಿಕ್ಕು ಮತ್ತು ಭಿಕ್ಕುಣಿ ಸಂಘದ ವತಿಯಿಂದ ಇದೇ ವೇಳೆ ಪ್ರತಿಜ್ಞಾವಿಧಿ ಬೋಧಿಸಿದ ಭಂತೇಜಿಗಳು, ಧ್ಯಾನ ಮಾಡಿಸಿದರು. ಮಧ್ಯಾಹ್ನ ಬೌದ್ಧ ಸಾಹಿತ್ಯ ಗೋಷ್ಠಿಗಳು, ಗೌತಮಿ ಪ್ರತಿಷ್ಠಾನದಿಂದ ದೇವನಾಂಪ್ರಿಯ ಅಶೋಕ ನಾಟಕ ಪ್ರದರ್ಶನಗೊಂಡಿತು. ಬುದ್ಧ ಧರ್ಮ, ಬೌದ್ಧಿಕ ಆಚರಣೆ ಕುರಿತಂತೆ ಸ್ಥಳದಲ್ಲಿ ಇತಿಹಾಸ ಸಾರುವ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು.

ಧಮ್ಮ ನಡಿಗೆ: ಪುರ ಭವನದ ಆವರಣದಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಡಾ. ಅಂಬೇಡ್ಕರ್ ಮೊಮ್ಮಗ ಡಾ. ಭೀಮರಾವ್ ಯಶವಂತ ರಾವ್ ಅಂಬೇಡ್ಕರ್ ಅವರು ಧಮ್ಮ ನಡಿಗೆ ಮೆರವಣಿಗೆಗೆ ಚಾಲನೆ ನೀಡಿದರು. ಹಾರ್ಡಿಂಜ್ ಸರ್ಕಲ್, ನಜರ್‌ಬಾದ್ ಸರ್ಕಲ್, ಬನ್ನೂರು ರಸ್ತೆ ಟೆರೇಷಿಯನ್ ಕಾಲೇಜು ಮಾರ್ಗವಾಗಿ ತೆರಳಿದ ಮೆರವಣಿಗೆಯು ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಮೈದಾನದ ಬಳಿಗೆ ತಲುಪಿತು.

ಬೌದ್ಧ ಸಮ್ಮೇಳನದ ನಿರ್ಣಯಗಳು


ಮೈಸೂರು, ಫೆ.26(ಆರ್‌ಕೆ)–ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಮೈದಾನದಲ್ಲಿ ಇಂದು ನಡೆದ ಬೌದ್ಧ ಮಹಾಸಮ್ಮೇಳನದಲ್ಲಿ ಹಲವು ಮಹತ್ವ ನಿರ್ಣಯಗಳನ್ನು ಕೈಗೊಂಡಿದ್ದು, ಅವುಗಳ ಅನುಷ್ಠಾನಕ್ಕೆ ಒತ್ತಾಯ ಮಾಡಲಾಗಿದೆ.

ಬುದ್ಧ ಪೂರ್ಣಿಮೆಯನ್ನು ಸರ್ಕಾರದ ವತಿಯಿಂದ ಆಚರಣೆ ಮಾಡುವುದು, ಬೌದ್ಧ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ, ಕರ್ನಾಟಕದಾದ್ಯಂತ ಬೌದ್ಧ ವಿಹಾರಗಳ ನಿರ್ಮಾಣ ಮತ್ತು ನಿರ್ವಹಣೆ, ಕರ್ನಾಟಕ ರಾಜ್ಯದ ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ 25 ಎಕರೆ, ತಾಲೂಕು ಕೇಂದ್ರಗಳಲ್ಲಿ 5 ಎಕರೆ, ಹಳ್ಳಿಗಳಲ್ಲಿ ಒಂದು ಎಕರೆ, ಸರಕಾರಿ ಜಮೀನು ಬುದ್ಧವಿಹಾರ, ಧ್ಯಾನ ಕೇಂದ್ರ, ಶಾಲಾ–ಕಾಲೇಜುಗಳಿಗೆ ಮಂಜೂರು ಮಾಡುವುದು, ಬೌದ್ಧರು ನಡೆಸುವ ಶಾಲಾ–ಕಾಲೇಜುಗಳು, ಅನಾಥಾಶ್ರಮಗಳು, ಆಸ್ಪತ್ರೆಗಳು, ವೃದ್ಧಾಶ್ರಮಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲು ಮನವಿ, ಬೌದ್ಧ ಸಾಹಿತ್ಯದ ತ್ರಿಪೀಠಕಗಳು ಮತ್ತು ಅದಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಾಶನ ಮಾಡಲು ಅನುದಾನವನ್ನು ಬಿಡುಗಡೆ, ಬೌದ್ಧ ಯಾತ್ರಾ ಸ್ಥಳಗಳಿಗೆ ಪ್ರವಾಸ ಮಾಡಲು ಅನುದಾನವನ್ನು ನೀಡಬೇಕು, ಬೌದ್ಧರಾದವರಿಗೆ ಧರ್ಮ ಪ್ರಮಾಣ ಪತ್ರವನ್ನು ನೀಡುವುದು, ಬೌದ್ಧ ವಿದ್ಯಾರ್ಥಿಗಳಿಗೆ ಹೊರ ದೇಶದಲ್ಲಿ ವಿದ್ಯಾಭ್ಯಾಸ ಮಾಡಲು ವಿಶೇಷ ಅನುದಾನ ಬಿಡುಗಡೆ ಮಾಡುವುದು, ಸಾಮ್ರಾಟ ಅಶೋಕರು ನಿರ್ಮಿಸಿದಂತಹ ಶಿಲಾಸನಗಳನ್ನು ರಕ್ಷಿಸಿ ಅಭಿವೃದ್ಧಿಗೊಳಿಸುವುದು.

ಮೈಸೂರು-ಚಾ.ನಗರ ಜಿಲ್ಲಾ ವಾಲ್ಮೀಕಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ

ಸವಾಲುಗಳ ನಡುವೆ ಪರಿವಾರ, ತಳವಾರ ಪಂಗಡದ ಸಮಸ್ಯೆಗೆ ಪರಿಹಾರ

ಸಂಸದ ಪ್ರತಾಪ್ ಸಿಂಹ



ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಭಾನುವಾರ ನಡೆದ ಮೈಸೂರು-ಚಾಮರಾಜನಗರ ಜಿಲ್ಲಾ ವಾಲ್ಮೀಕಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಮುದಾಯದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು.

ಮೈಸೂರು,ಫೆ.26(ಎಂಟಿವೈ)- ಹಲವು ಸವಾಲುಗಳನ್ನು ಎದುರಿಸಿ ಕೆಲವು ದಶಕಗಳಿಂದ ಪರಿವಾರ ಹಾಗೂ ತಳವಾರ ಪಂಗಡ ಎದುರಿಸುತ್ತಿದ್ದ ಸಮಸ್ಯೆಯನ್ನು ಬಗೆಹರಿಸಿರುವುದಾಗಿ ಸಂಸದ ಪ್ರತಾಪ ಸಿಂಹ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮೈಸೂರು-ಚಾಮರಾಜನಗರ ಜಿಲ್ಲಾ ವಾಲ್ಮೀಕಿ ನೌಕರರ ಕ್ಷೇಮಾಭಿವೃದ್ಧಿ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಂದಾಯ ಇಲಾಖೆಯ ಕೆಲವು ಅಧಿಕಾರಿಗಳ ಆಕ್ಷೇಪದಿಂದಾಗಿ ಕಳೆದ 3 ದಶಕಗಳಿಂದ ಪರಿವಾರ ಹಾಗೂ ತಳವಾರ ಸಮುದಾಯದ ಜನರು ಸರ್ಕಾರದ ಸೌಲಭ್ಯ, ಮೀಸಲಾತಿ ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಾಗದೆ ತೊಂದರೆ ಅನುಭವಿಸುತ್ತಿದ್ದರು. ಸತತ ಹೋರಾಟದ ಫಲವಾಗಿ ನಾಯಕ ಸಮುದಾಯಕ್ಕೆ (ಎಸ್‌ಟಿ) ಪರಿವಾರ, ತಳವಾರ ಪಂಗಡವನ್ನು ಸೇರಿಸುವ ನಿರ್ಣಯವನ್ನು ಕೇಂದ್ರ ಸರ್ಕಾರ ತೆಗೆದುಕೊಂಡಿತು. ಈ ವೇಳೆ ಸ್ಪೆಲ್ಲಿಂಗ್ ಮಿಸ್ಟೇಕ್‌ನಿಂದಾಗಿ ಮತ್ತೊಂದು ಸಮಸ್ಯೆ ಉದ್ಭವಿಸಿತು. ಬಳಿಕ ತಜ್ಞರು ಹಾಗೂ ಸಮುದಾಯದ ಮುಖಂಡರೊಂದಿಗೆ ಚರ್ಚಿಸಿ ಆ ಸಮಸ್ಯೆಯನ್ನು ಹೋಗಲಾಡಿಸಲಾಯಿತು ಎಂದರು.

ತಳವಾರ, ಪರಿವಾರ ಪಂಗಡದ ಸಮಸ್ಯೆ ಬಗೆಹರಿಸಲು ಸಾಲು ಸಾಲಾಗಿ ಫೈನಾನ್ಸ್, ಹೋಮ್, ಲಾ ಅಂಡ್ ಜಸ್ಟಿಸ್ ಮಿನಿಸ್ಟ್ರಿ ಸೇರಿದಂತೆ 7 ಸಚಿವಾಲಯದಿಂದ ಕ್ಲಿಯರೆನ್ಸ್ ಪಡೆದುಕೊಳ್ಳಲಾಗಿದೆ. ಇದಕ್ಕೆ ಮಾಜಿ ಸಿಎಂ ಸದಾನಂದಗೌಡ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸಹಕರಿಸಿದರು. ಈ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಲು ಕಾನೂನು ತಿದ್ದುಪಡಿ ಮಾಡಿ ಅಂಕಿತಕ್ಕಾಗಿ ರಾಷ್ಟ್ರಪತಿಗೆ ಕಳುಹಿಸಬೇಕಾಯಿತು. ಇದರಿಂದ ಈ ಸಮಸ್ಯೆ ಅಂತಿಮ ಹಂತಕ್ಕೆ ಬಂದಿದೆ. ಪ್ರಸ್ತುತ ಪಾಸಾಗಿರುವ ಬಿಲ್ ಅನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಸೌಲಭ್ಯ ಪಡೆಯಲು 3 ದಶಕದಿಂದ ಅನ್ವಯವಾಗುವಂತೆ ಜಾರಿಗೊಳಿಸುವ ಪ್ರಯತ್ನ ಮಾಡಲಾಗುತ್ತಿದೆ. ಬಿಲ್ ಪಾಸಾದ ದಿನದಿಂದ ಜಾರಿಗೊಳಿಸಿದರೆ, ಇದರ ಸೌಲಭ್ಯ ಮುಂದಿನ ಪೀಳಿಗೆಗೆ ದೊರೆಯುತ್ತದೆ. ಈಗಾಗಲೇ ನ್ಯಾಯಾಲಯದಲ್ಲಿ ಪ್ರಕರಣ ಎದುರಿಸುತ್ತಿರುವವರು ತೊಂದರೆಯಿಂದ ಪಾರಾಗಬೇಕಾದರೆ, ಮೂರು ದಶಕದಿಂದ ಅನ್ವಯವಾಗುವಂತೆ ಜಾರಿಗೊಳಿಸಬೇಕಾಗಿದೆ. ಅದಕ್ಕಾಗಿ ಕೆಲವು ನಿಯಮ ಅನುಸರಿಸುವ ಅಗತ್ಯವಿದೆ ಎಂದು ತಿಳಿಸಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ನಾಯಕ ಸಮುದಾಯ ತನ್ನದೇ ಆದ ಇತಿಹಾಸ ಹೊಂದಿದೆ. ಪರಿವಾರ ಹಾಗೂ ತಳವಾರ ನಾಯಕ ಸಮುದಾಯದ ಪಂಗಡವಾಗಿದ್ದು, ಕೆಲ ಕಾರಣಗಳಿಂದ ತೊಂದರೆ ಎದುರಿಸುವಂತಾಗಿತ್ತು. ಈ ಹಿಂದೆ ಹಲವು ಬಾರಿ ಆ ಸಮಸ್ಯೆ ಬಗೆ ಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೆ. ಆದರೂ ಕೆಲವು ಅಧಿಕಾರಿಗಳಿಂದಾಗಿ ಸಮಸ್ಯೆ ಜೀವಂತವಾಗಿಯೇ ಉಳಿದಿತ್ತು. ಇದರ ನಡುವೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಬಳಿ ಮೈಸೂರಿನ ನಾಯಕ ಸಮುದಾಯ ಮುಖಂಡರ ನಿಯೋಗ ಕರೆದುಕೊಂಡು ಹೋಗಿದ್ದೆ ಎಂದು ಸ್ಮರಿಸಿದರು.

ನಾಯಕ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಬೇಕೆಂಬ ಹೋರಾಟಕ್ಕೂ ನಮ್ಮ ಸಹಮತವಿತ್ತು. ಶ್ರೀ ಪ್ರಸನ್ನಾನಂದ ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಹೋರಾಟಕ್ಕೂ ಬೆಂಬಲ ನೀಡಿದ್ದೆ. ಸಂಘಟಿತ ಹೋರಾಟದ ಫಲವಾಗಿ ಇಂದು ಮೀಸಲಾತಿ ಪ್ರಮಾಣ ಹೆಚ್ಚಾಗಿದೆ ಎಂದರು.

ಜೆಎಲ್‌ಆರ್ ನಿಗಮದ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಮಾತನಾಡಿ, ಪರಿವಾರ, ತಳವಾರ ಸಮಸ್ಯೆ ಬಗೆಹರಿಸಲು ಸಂಸದ ಪ್ರತಾಪ ಸಿಂಹ ಅವರನ್ನು ಭೇಟಿ ಮಾಡಲು ಹಲವು ಬಾರಿ ದೆಹಲಿಗೆ ತೆರಳಿದ್ದೆವು. ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಮೇಯರ್ ಶಿವಕುಮಾರ್ ಅವರೊಂದಿಗೆ ಕೊರೆಯುವ ಚಳಿಯಲ್ಲೂ ದೆಹಲಿಯಲ್ಲಿ ಕಚೇರಿಗೆ ಅಲೆಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಸತತ ಹೋರಾಟದ ಫಲವಾಗಿ ಇಂದು ಜಯ ಸಿಕ್ಕಿದೆ. ಕೆಲವೊಂದು ನ್ಯೂನತೆ ಸರಿಸಡಿಸಲು ಸಂಸದರು ಪ್ರಯತ್ನಿಸುತ್ತಿದ್ದಾರೆ. ತಳವಾರ ಹಾಗೂ ಪರಿವಾರ ಸಮಸ್ಯೆ ಬಗೆಹರಿಸಲು ಕಾರಣರಾದ ಹಾಗೂ ಹೋರಾಟ ನಡೆಸಿದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮುಖಂಡರನ್ನು ಪಕ್ಷಾತೀತವಾಗಿ ಸನ್ಮಾನಿಸಲು ಉದ್ದೇಶಿಸಲಾಗಿದೆ. ಚುನಾವಣೆ ಮುಗಿದ ಬಳಿಕ ನಮ್ಮ ಹೋರಾಟಕ್ಕೆ ಶಕ್ತಿ ತುಂಬಿದ ಮುಖಂಡರನ್ನು ಸೇರಿಸಿ ಅಭಿನಂದಿಸಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಾಯಕ ಸಮುದಾಯ ನೌಕರರ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಯಿತು. ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಸನ್ಮಾನ ಮಾಡಲಾಯಿತು. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಪಾಲಿಕೆ ಸದಸ್ಯರಾದ ಎಂ.ಸತೀಶ್, ಶೋಭಾ ಮೋಹನ್, ಸಮುದಾಯದ ಮುಖಂಡರಾದ ತಲಕಾಡು ಮಂಜುನಾಥ್, ಅಣ್ಣಯ್ಯನಾಯಕ, ದ್ಯಾವಪ್ಪನಾಯಕ, ದೇವರಾಜ ಟಿ.ಕಾಟೂರು, ಕುಂಬಳ್ಳಿ ಸುಬ್ಬಣ್ಣ, ಕೆಂಪನಾಯಕ, ಪತ್ರಿಕೋದ್ಯಮ ವಿಭಾಗ ಮುಖ್ಯಸ್ಥೆ ಸ್ವಪ್ನಾ ನಾಯಕ್, ಜ್ಯೋತಿ ನಾಯಕ್, ಮೈಸೂರು-ಚಾಮರಾಜನಗರ ಜಿಲ್ಲಾ ವಾಲ್ಮೀಕಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವೈ.ಪಿ. ಜಗದೀಶ್ವರಮೂರ್ತಿ, ಉಪಾಧ್ಯಕ್ಷ ಡಾ.ಸೋಮಣ್ಣ, ಪ್ರಧಾನ ಕಾರ್ಯದರ್ಶಿ ಮಹದೇವನಾಯಕ, ಖಜಾಂಚಿ ಕೃಷ್ಣ, ಬಿಇಓ ರಾಜು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಬಿಜೆಪಿ ಪ್ರಗತಿ ರಥ ಯಾತ್ರೆಗೆ ಚಾಲನೆ



ಮೈಸೂರು, ಫೆ26(ಎಸ್‌ಬಿಡಿ)- ಬಿಜೆಪಿ ಯುವ ಮೋರ್ಚಾ ವತಿಯಿಂದ 'ಪ್ರಗತಿ ರಥಯಾತ್ರೆ' ಆಯೋಜಿಸಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರ ಸಂಚಾರಕ್ಕೆ ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಎಲ್.ನಾಗೇಂದ್ರ ಯಾದವಗಿರಿ ವೃತ್ತದಲ್ಲಿ ಭಾನುವಾರ ಚಾಲನೆ ನೀಡಿದರು.

ಈ ವೇಳೆ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹತ್ತು ಹಲವು ಜನಪರ ಯೋಜನೆ, ಕಾರ್ಯಕ್ರಮಗಳ ಪ್ರಚುರಪಡಿಸುವ ನಿಟ್ಟಿನಲ್ಲಿ 'ಪ್ರಗತಿ ರಥಯಾತ್ರೆ' ಹಮ್ಮಿಕೊಳ್ಳಲಾಗಿದೆ. ಶಕ್ತಿ ಕೇಂದ್ರದ ಪದಾಧಿಕಾರಿಗಳು, ವಿವಿಧ ಮೋರ್ಚಾ ಸಂಚಾಲಕರ ನೇತೃತ್ವದಲ್ಲಿ ಪ್ರತಿಯೊಂದು ವಾರ್ಡ್‌ನಲ್ಲಿ ಈ ರಥಯಾತ್ರೆ ಸಂಚರಿಸಲಿದ್ದು, ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಬಿಜೆಪಿ ಸರ್ಕಾರದ ಜನಪರ ಕೆಲಸಗಳ ಬಗ್ಗೆ ಮುಖಂಡರು ಮಾತನಾಡಲಿದ್ದಾರೆ ಎಂದು ತಿಳಿಸಿದರು.

ಪ್ರಗತಿ ರಥಯಾತ್ರೆಯ ಮೈಸೂರು ನಗರ ಜಿಲ್ಲೆ ವಿಭಾಗದ ಉಸ್ತುವಾರಿ ಎಂ.ಜೆ.ಕಿರಣ್ ಗೌಡ ಮಾತನಾಡಿ, ರಾಜ್ಯದ 224 ಕ್ಷೇತ್ರಗಳಲ್ಲಿ 135 ಪ್ರಗತಿ ರಥಯಾತ್ರೆ ವಾಹನಗಳು ಸಂಚರಿಸಲಿದ್ದು, ರಾಜ್ಯ ಮಟ್ಟದಲ್ಲಿ ನಿನ್ನೆಯೇ ಚಾಲನೆ ಸಿಕ್ಕಿದೆ. ಮೈಸೂರು ನಗರದಲ್ಲೂ 2 ವಾಹನಗಳ ಸಂಚಾರ ನಡೆಸಿ, ಸರ್ಕಾರದ ಸಾಧನೆಯನ್ನು ಜನರಿಗೆ ನೆನಪಿಸಲಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರರಾಜು, ನಗರ ಪಾಲಿಕೆ ಸದಸ್ಯರಾದ ರವೀಂದ್ರ, ರಂಗಸ್ವಾಮಿ, ಪ್ರಮೀಳಾ ಭರತ್, ಎಂ.ಯು.ಸುಬ್ಬಯ್ಯ, ಚಿಕ್ಕವೆಂಕಟು, ಕಾರ್ಯಕ್ರಮ ಸಂಚಾಲಕರಾದ ಸಚಿನ್ ಗೌಡ, ಪ್ರಜ್ವಲ್ ಶ್ರೀವಸ್ತ, ಅರ್ಜುನ್ ಕುಮಾರ್, ನಗರ ಸಂಚಾಲಕ ಸಂತೋಷ್ ಕುಮಾರ್, ತನುಜಾ ಮಹೇಶ್, ಅನೂಪ್, ಶಿವು, ಆದಿತ್ಯ, ಮಹೇಶ, ಕೀರ್ತಿ ಕುಮಾರ್, ಪುನೀತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಪಡುವಾರಹಳ್ಳಿಯಲ್ಲಿ ಜೋಡಿ ಮಾರಮ್ಮನ ಜಾತ್ರೆ ಸಂಭ್ರಮ



ಮೈಸೂರು, ಫೆ.26(ಎಸ್‌ಬಿಡಿ)- ಮೈಸೂರಿನ ಪಡುವಾರಹಳ್ಳಿ(ವಿನಾಯಕನಗರ)ಯಲ್ಲಿ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವ ಆರಂಭವಾಗಿದೆ.

ದೇವಾಲಯದಲ್ಲಿ ಶನಿವಾರ ತಡರಾತ್ರಿ ಪೂಜಾ ಕೈಂಕರ್ಯದೊಂದಿಗೆ ಮೂರು ದಿನಗಳ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರಕಿದ್ದು, ವಿದ್ಯುತ್ ದೀಪಾಲಂಕಾರದಿಂದ ಮಾರಿಗುಡಿ ಆವರಣ ಸೇರಿದಂತೆ ಇಡೀ ಬಡಾವಣೆ ಸಿಂಗಾರಗೊಂಡಿದೆ.

ಇಂದು ಬಾಳೆಗೊನೆ ಕಟ್ಟಿಸುವ ಆಚರಣೆ ನಡೆಯಿತು. ಸಂಕಲ್ಪ ಮಾಡಿಕೊಂಡಿದ್ದ ಭಕ್ತರು ತಮ್ಮ ಬೇಡಿಕೆ ಈಡೇರಿದ ಹಿನ್ನೆಲೆಯಲ್ಲಿ ನಂಜನಗೂಡು ರಸಬಾಳೆ, ಪಚ್ಚಬಾಳೆ, ಏಲಕ್ಕಿ ಬಾಳೆ ಗೊನೆಯನ್ನು ತಂದು ಅರ್ಚಕರ ಮೂಲಕ ಕಟ್ಟಿಸುವ ಮೂಲಕ ಹರಕೆ ತೀರಿಸಿದರು. ಹೀಗೆ ಕಟ್ಟಿದ ಗೊನೆಗಳನ್ನು ಮರುದಿನ ಸಂಜೆ ವಾಪಸ್ ನೀಡುವ ಸಂಪ್ರದಾಯವಿದೆ.

ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದ್ದ ರಂಗೋಲಿ ಬಿಡಿಸುವ ಸ್ಪರ್ಧೆಯಲ್ಲಿ ನೂರಾರು ಹೆಣ್ಣು ಮಕ್ಕಳು ಹಾಗೂ ಮಹಿಳೆಯರು ಭಾಗವಹಿಸಿ, ವರ್ಣರಂಜಿತ ಚಿತ್ತಾರಗಳನ್ನು ಬಿಡಿಸಿ ಪ್ರಶಂಸೆ ಪಡೆದರು. ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ ಮೈದಾನದಲ್ಲಿ 25 ಜೊತೆ ನಾಡಕುಸ್ತಿಯನ್ನು ಏರ್ಪಡಿಸಲಾಗಿತ್ತು. ಮೈಸೂರು ಮಾತ್ರವಲ್ಲದೆ ಬೇರೆ ಊರುಗಳಿಂದ ಬಂದಿರುವ ಪೈಲ್ವಾನರು ಬಿರುಬಿಸಿಲನ್ನೂ ಲೆಕ್ಕಿಸದೆ ಅಖಾಡದಲ್ಲಿ ಸೆಣಸಾಡಿದ್ದು ರಣರೋಚಕವಾಗಿತ್ತು. ಸುತ್ತಲೂ ನೆರೆದಿದ್ದ ಕುಸ್ತಿ ಪ್ರೇಮಿಗಳು ಶಿಳ್ಳೆ, ಕೇಕೆ, ಚಪ್ಪಾಳೆ ಮೂಲಕ ಹುರಿದುಂಬಿಸಿದರು.

ಸೋಮವಾರ ಮಧ್ಯಾಹ್ನ 3ರಿಂದ ಸಂಜೆ 7ರವರೆಗೆ ಸಂಕಲ್ಪ ಮಾಡಿಕೊಂಡಿರುವ ಸಾವಿರಾರು ಭಕ್ತರು ಬಾಯಿಗೆ ಬೀಗ ಹಾಕಿಸಿಕೊಂಡು ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಸಾಗಿ ದೇವಸ್ಥಾನ ತಲುಪಲಿದ್ದಾರೆ. ರಾತ್ರಿ 9ಕ್ಕೆ ಜೋಡಿ ಮಾರಮ್ಮ ಕೃಪಾಪೋಷಿತ ನಾಟಕ ಮಂಡಳಿಯಿಂದ 'ಶ್ರೀ ಕೃಷ್ಣಲೀಲೆ ಅಥವಾ ರುಕ್ಮಿಣಿ ಸ್ವಯಂವರ' ಪೌರಾಣಿಕ ನಾಟಕ ಪ್ರದರ್ಶನದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಚೇಂದಿರ ತಂಡ ಕೊಡವ ಕೌಟುಂಬಿಕ ಹಾಕಿ ಚಾಂಪಿಯನ್

ಕೊಂಗಂಡ ತಂಡ ರನ್ನರ್ಸ್ ಅಪ್, ಪೂಣಚ್ಚ ಹ್ಯಾಟ್ರಿಕ್ ಸಾಧನೆ



ಹಾಕಿ ಚಾಂಪಿಯನ್ ಪ್ರಶಸ್ತಿ ಪಡೆದುಕೊಂಡ ಚೇಂದಿರ ತಂಡ.



ರನ್ನರ್ಸ್ ಅಪ್ ಪ್ರಶಸ್ತಿ ಪಡೆದುಕೊಂಡ ಕೊಂಗಂಡ ತಂಡ

ಪೊನ್ನಂಪೇಟೆ, ಫೆ.26– ಕಳೆದ 5 ದಿನಗಳಿಂದ ವಿ. ಬಾಡಗದಲ್ಲಿ ನಡೆಯುತ್ತಿದ್ದ ವಿರಾಜಪೇಟೆ ತಾಲೂಕಿನ ಬೇರಳಿನಾಡು, ಕುತ್ತುನಾಡು ಮತ್ತು ಬೊಟ್ಟಿಯತ್ ನಾಡು ವ್ಯಾಪ್ತಿಯ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ ಬಲಿಷ್ಠ ಚೇಂದಿರ ತಂಡ ಚಾಂಪಿಯನ್ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿತು. ಇದರಿಂದ ಚಾಂಪಿಯನ್ ಪಟ್ಟಕ್ಕೇರುವ ಹಂಬಲದೊಂದಿಗೆ ಫೈನಲ್ ಪ್ರವೇಶಿಸಿದ್ದ ಕೊಂಗಂಡ ತಂಡ ಆಸೆ ಈಡೇರಿಸಿಕೊಳ್ಳಲು ಸಾಧ್ಯವಾಗದೆ ರನ್ನರ್ಸ್ ಅಪ್ ಪ್ರಶಸ್ತಿಗೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಬಿಟ್ಟಂಗಾಲ ಸಮೀಪದ ವಿ. ಬಾಡಗದ ಹೈ ಫ್ಲೈಯರ್ಸ್ ಸಂಸ್ಥೆಯ ವತಿಯಿಂದ ಸ್ಥಳೀಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಭಾನುವಾರ ನಡೆದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯ ಫೈನಲ್‌ನಲ್ಲಿ ಚೇಂದಿರ ತಂಡವು ಕೊಂಗಂಡ ತಂಡವನ್ನು 6–3 ಗೋಲುಗಳಿಂದ ಸೋಲಿಸಿ ವಿಜಯದ ಪತಾಕೆ ಹಾರಿಸಿತು. ಚೇಂದಿರ ತಂಡದ ಅತಿಥಿ ಆಟಗಾರ ಪೂಣಚ್ಚ ಹ್ಯಾಟ್ರಿಕ್ ಸಾಧನೆಯೊಂದಿಗೆ ಒಟ್ಟು 4 ಗೋಲು ಬಾರಿಸಿ ವಿಶೇಷವಾಗಿ ಗಮನ ಸೆಳೆದರು.

ಆರಂಭದಿಂದಲೇ ವಿನ್ನರ್ಸ್ ಪ್ರಶಸ್ತಿಗಳಿಸುವ ಹುಮ್ಮಸ್ಸಿನಿಂದ ಆಟ ಆರಂಭಿಸಿದ ಉಭಯ ತಂಡದ ಆಟಗಾರರು ಗೋಲುಗಳಿಸುವ ಉದ್ದೇಶದಿಂದ ಆಗಿಂದಾಗ್ಗೆ ಎದುರಾಳಿಗಳ 'ಡಿ' ಆವರಣದೊಳಗೆ ದಾಳಿ ನಡೆಸುತ್ತಿದ್ದವು. ಕೊನೆಗೆ ಚೇಂದಿರ ತಂಡ ಅತ್ಯುತ್ತಮ ಆಟವಾಡಿ ಗೆಲುವು ಸಾಧಿಸಿತು.

ಸೆಮಿ ಫೈನಲ್ಸ್‌ಗಳಲ್ಲಿ ಪರಾಭವಗೊಂಡ ನಾಮೆರ ಮತ್ತು ತೀತಿಮಾಡ ಕುಟುಂಬ ತಂಡಗಳ ನಡುವೆ ಭಾನುವಾರ ಬೆಳಿಗ್ಗೆ ನಡೆದ ಪಂದ್ಯದಲ್ಲಿ ತೀತಿಮಾಡ ತಂಡವು ನಾಮೆರ ತಂಡವನ್ನು 6–1 ಗೋಲುಗಳಿಂದ ಮಣಿಸಿ ಪಂದ್ಯಾವಳಿಯ ತೃತೀಯ ಸ್ಥಾನದ ಬಹುಮಾನವನ್ನು ಗೆದ್ದುಕೊಂಡಿತು.

ಪಂದ್ಯಾವಳಿಯ ವಿವಿಧ 7 ವಿಭಾಗಗಳ ವಿಶೇಷ ಪುರಸ್ಕಾರಗಳು ಘೋಷಣೆಯಾಗಿದ್ದು, 'ಅತ್ಯುತ್ತಮ ಶಿಸ್ತುಬದ್ಧ ತಂಡ'ದ ಬಹುಮಾನ ಕುಪ್ಪಂಡ ತಂಡದ ಪಾಲಾಗಿದೆ. 'ಉದಯೋನ್ಮುಖ ಆಟಗಾರ' ಪುರಸ್ಕಾರವನ್ನು ನಾಮೆರ ತಂಡದ ಅತಿಥಿ ಆಟಗಾರ ಚೆಂದಂಡ ಅಮೋಘ್ ಪಡೆದುಕೊಂಡರೆ, 'ಅತ್ಯುತ್ತಮ ಗೋಲ್ ಕೀಪರ್' ಪುರಸ್ಕಾರವನ್ನು ಕೊಂಗಂಡ ತಂಡದ ಕವನ್ ಗಳಿಸಿದರು. 'ಅತ್ಯುತ್ತಮ ಆಫ್ ಬ್ಯಾಕ್' ಬಹುಮಾನವನ್ನು ಕೊಂಗಂಡ ತಂಡದ ಅತಿಥಿ ಆಟಗಾರ ಮೇರಿಯಂಡ ರಾಯ್ ಅಯ್ಯಣ್ಣ, 'ಅತ್ಯುತ್ತಮ ಫಾರ್ವರ್ಡ್' ಪುರಸ್ಕಾರವನ್ನು ತೀತಿಮಾಡ ತಂಡದ ಅತಿಥಿ ಆಟಗಾರ ಮಂಡೇಚಂಡ ಮಂಜುನಾಥ್ ಪಡೆದರು. ಚೇಂದಿರ ತಂಡದ ಅತಿಥಿ ಆಟಗಾರ ಮುಕ್ಕಾಟಿರ ಅಯ್ಯಪ್ಪ ಪಂದ್ಯಾವಳಿಯಲ್ಲಿ 'ಅತಿ ಹೆಚ್ಚು ಗೋಲು ದಾಖಲಿಸಿದ' ಹೆಗ್ಗಳಿಕೆಗೆ ಪಾತ್ರರಾದರೆ, ಚೇಂದಿರ ತಂಡದ ಮತ್ತೋರ್ವ ಅತಿಥಿ ಆಟಗಾರ ಪರದಂಡ ಅಯ್ಯಪ್ಪ 'ಪಂದ್ಯಾವಳಿಯ ಅತ್ಯುತ್ತಮ ಆಟಗಾರ'ನಾಗಿ ವಿಶೇಷ ಪುರಸ್ಕಾರ ಪಡೆದರು.

ಪಂದ್ಯಾವಳಿ ನಿರ್ದೇಶಕರಾದ ಕುಪ್ಪಂಡ ದಿಲನ್ ಬೋಪಣ್ಣ ಅವರ ನೇತೃತ್ವದಲ್ಲಿ ತೀರ್ಪುಗಾರರಾದ ಚಂದಪ್ಪಂಡ ಆಕಾಶ್, ಕೋಡಿಮಣಿಯಂಡ ಗಣಪತಿ, ಚೈಯಂಡ ಅಪ್ಪಚ್ಚು, ಕರವಂಡ ಅಪ್ಪಣ್ಣ, ಚೋಯಮಾಡಂಡ ಚಂಗಪ್ಪ, ನೆಲ್ಲಮಕ್ಕಡ ಪವನ್, ಅಪ್ಪಚೆಟ್ಟೋಳಂಡ ಅಯ್ಯಪ್ಪ ಮೊದಲಾದವರು ತಾಂತ್ರಿಕ ಸಮಿತಿಯಲ್ಲಿ ಕಾರ್ಯನಿರ್ವಹಿಸಿದರು. ಹಿರಿಯ ವೀಕ್ಷಕ ವಿವರಣೆಗಾರರಾದ ಮಾಳೇಟಿರ ಶ್ರೀನಿವಾಸ್ ವೀಕ್ಷಕ ವಿವರಣೆ ನೀಡಿದರು.

ಪಂದ್ಯಾವಳಿಗೆ ತೆರೆ: ಕಳೆದ ಬುಧವಾರದಿಂದ ಆರಂಭಗೊಂಡ ವಿ.ಬಾಡಗ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗೆ ಭಾನುವಾರ ತೆರೆ ಬಿದ್ದಿತು. ವಿ. ಬಾಡಗ ಹೈಫ್ಲೈಯರ್ಸ್ ಸಂಸ್ಥೆಯ ಅಧ್ಯಕ್ಷರಾದ ಅಮ್ಮಣಿಚಂಡ ರಂಜಿ ಪೂಣಚ್ಚ ಅವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನದ ನಂತರ ಪಂದ್ಯಾವಳಿಯ ಸಮಾರೋಪ ಸಮಾರಂಭ ನಡೆಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಕಳೆದ 3 ವರ್ಷಗಳಿಂದ ಜಿಲ್ಲೆಯಲ್ಲಿ ಸಂಭವಿಸಿದ ಅತಿವೃಷ್ಟಿ ಮತ್ತು ಕಳೆದ 2 ವರ್ಷಗಳಿಂದ ಕೋವಿಡ್‌ನಿಂದಾಗಿ ಕೊಡಗಿನಲ್ಲಿ ಕ್ರೀಡಾ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡು ಕ್ರೀಡಾ ಅಭಿಮಾನಿಗಳಲ್ಲಿ ತೀವ್ರ ನಿರಾಸೆ ಮೂಡಿಸಿತ್ತು. ಇದೀಗ ಪರಿಸ್ಥಿತಿ ಚೇತರಿಕೆಗೊಂಡು ಜಿಲ್ಲೆಯಲ್ಲಿ ಕ್ರೀಡಾಕೂಟಗಳು ನಿರಂತರವಾಗಿ ಆಯೋಜಿಸಲ್ಪಡುತ್ತಿದೆ. ಇದೊಂದು ಉತ್ತಮ ಬೆಳವಣಿಗೆಯಾಗಿದೆ ಎಂದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿದ್ದ ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಅಜ್ಜಿಕುಟ್ಟೀರ ಎಸ್. ಪೊನ್ನಣ್ಣ ಕಾರ್ಯಕ್ರಮದಲ್ಲಿ ಮಾತನಾಡಿದರು. ಸಮಾರಂಭದಲ್ಲಿ ಕುಟ್ಟಂದಿಯ ಕಾಫಿ ಬೆಳೆಗಾರ ಕೊಲ್ಲೀರ ಬೋಪಣ್ಣ, ವಿ. ಬಾಡಗದ ಕಾಫಿ ಬೆಳೆಗಾರ ಕೊಂಗಂಡ ಕಾಶಿ ಕಾರ್ಯಪ್ಪ ವಿ. ಬಾಡಗದ ಮಹಿಳಾ ಪ್ರಮುಖರಾದ ಕಂಜಿತಂಡ ಕಮಲ ಬೆಳ್ಳಿಯಪ್ಪ, ಮಳವಂಡ ಬೋಜಮ್ಮ ಅಚ್ಚಪ್ಪ, ಕೊಂಗಂಡ ಲತಾ ಕಾರ್ಯಪ್ಪ, ವಿ.ಬಾಡಗ ಹೈಫ್ಲೈಯರ್ಸ್ ಸಂಸ್ಥೆಯ ಸಲಹಾ ಮಂಡಳಿ ಅಧ್ಯಕ್ಷ ಮಳವಂಡ ಗಿರೀಶ್ ಮುದ್ದಯ್ಯ, ದಾನಿಗಳಾದ ಕಂಜಿತಂಡ ದಿಲನ್, ಕಂಜಿತಂಡ ನವೀನ್ ಮೊದಲಾದವರು ಭಾಗವಹಿಸಲಿದ್ದರು. ಉಳುವಂಗಡ ಲೋಹಿತ್ ಭೀಮಯ್ಯ ಪ್ರಾರ್ಥಿಸಿದರು. ರಂಜಿ ಪೂಣಚ್ಚ ಸ್ವಾಗತಿಸಿದರು. ಮಾಳೇಟೀರ ಶ್ರೀನಿವಾಸ್ ಕಾರ್ಯಕ್ರಮ ನಿರ್ವಹಿಸಿದರೆ, ತೀತಿಮಾಡ ಸೋಮಣ್ಣ ವಂದಿಸಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಪೊವ್ವದಿ ಮಹಿಳಾ ಸಂಘದ ವತಿಯಿಂದ ಕೊಡವ ಕಲಾ ಪ್ರದರ್ಶನ ಕಾರ್ಯಕ್ರಮ ಜರುಗಿತು.

ಹೆಜ್ಜೇನು ದಾಳಿ: ಅಣ್ಣ ಸಾವು, ತಂಗಿ ಪಾರು

ಮಡಿಕೇರಿ ತಾಲೂಕಿನ ಹುಲಿತಾಳ ಗ್ರಾಮದಲ್ಲಿ ದುರಂತ

ಮಡಿಕೇರಿ, ಫೆ.26– ಹೆಜ್ಜೇನು ದಾಳಿಗೆ ಸಿಲುಕಿ ಅಣ್ಣ ಸಾವನ್ನಪ್ಪಿ, ತಂಗಿ ಪಾರಾಗಿರುವ ಘಟನೆ ಮಡಿಕೇರಿ ತಾಲೂಕಿನ ಹುಲಿತಾಳ ಗ್ರಾಮದಲ್ಲಿ ನಡೆದಿದೆ. ಹುಲಿತಾಳ ಗ್ರಾಮದ ಮಂಜುನಾಥ ಮಾಸ್ಟರ್ ಮತ್ತು ಭಾಗೀರಥಿ ದಂಪತಿ ಪುತ್ರ ಅಶ್ವಿನಿ ಕುಮಾರ್ (48) ಸಾವನ್ನಪ್ಪಿದ ವ್ಯಕ್ತಿ. ಇವರ ತಂಗಿ ಅರ್ಪಣ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಅಶ್ವಿನಿ ಕುಮಾರ್ ಅವರು ಸಹೋದರಿ ಅರ್ಪಣ ಅವರೊಂದಿಗೆ ಗದ್ದೆಗೆ ತೆರಳಿದ್ದ ಸಂದರ್ಭದಲ್ಲಿ ಅವರ ಮೇಲೆ ಹೆಜ್ಜೇನು ದಾಳಿ ನಡೆಸಿತು. ಈ ಸಂದರ್ಭ ಇವರಿಬ್ಬರು ಮನೆಯತ್ತ ಓಡಿ ದಾಳಿಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ನಡೆಸಿದರು. ಅಷ್ಟರಲ್ಲೆ ಸಾಕಷ್ಟು ಹೆಜ್ಜೇನುಗಳ ಕಡಿತಕ್ಕೆ ಒಳಗಾಗಿ ಅಸ್ವಸ್ಥರಾದ ಅಶ್ವಿನಿ ಕುಮಾರ್ ಮತ್ತು ಅರ್ಪಣ ಅವರನ್ನು ಮಡಿಕೇರಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರು, ಅಶ್ವಿನಿ ಕುಮಾರ್ ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದ್ದಾರೆ. ಇವರ ಸಹೋದರಿ ಅರ್ಪಣ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆಚ್.ಸಿ.ಮಂಜುನಾಥ್ ನಿಧನ

ವಿರಾಜಪೇಟೆ, ಫೆ.26– ಪೊನ್ನಂಪೇಟೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸೇವೆ



ಸಲ್ಲಿಸುತ್ತಿದ್ದ ವಿರಾಜಪೇಟೆ ನಿವಾಸಿ ಹೆಚ್.ಸಿ.ಮಂಜುನಾಥ್ (49) ಶನಿವಾರ ಸಂಜೆ ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಮೃತರು ಪತ್ನಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತ ಮಂಜುನಾಥ್ ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಅವರನ್ನು ಮೈಸೂರು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೃತರ ಅಂತ್ಯಕ್ರಿಯೆ ವಿರಾಜಪೇಟೆ ನಗರದ ಮೀನು ಪೇಟೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ಭಾನುವಾರ ನಡೆಯಿತು.

ಕೊಡಗು ಕಡೆಗಣಿಸಿ ಕೇಂದ್ರ, ರಾಜ್ಯ ಸರ್ಕಾರದಿಂದ ಅನ್ಯಾಯ

ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ)ನಿಂದ ಜನಾಂದೋಲನ ಕಾರ್ಯಕ್ರಮ



ವಿರಾಜಪೇಟೆ, ಫೆ.26– ಕೇಂದ್ರ ಮತ್ತು ರಾಜ್ಯ ಸರಕಾರ ಈ ಬಾರಿಯ ಬಜೆಟ್‌ನಲ್ಲಿ ಕೊಡಗನ್ನು ಕಡೆಗಣಿಸಿ ಕಾರ್ಮಿಕರಿಗೆ ಮತ್ತು ರೈತರಿಗೆ ಪ್ರತ್ಯೇಕ ಯೋಜನೆಗಳನ್ನು ಘೋಷಿಸದೆ ಅನ್ಯಾಯ ಮಾಡಿದೆ ಎಂದು ಆಪಾದಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಇಲ್ಲಿನ ಗಡಿಯಾರ ಕಂಬದ ಬಳಿ ಜನಾಂದೋಲನ ಕಾರ್ಯಕ್ರಮ ನಡೆಸಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ಐ.ಆರ್.ದುರ್ಗಾಪ್ರಸಾದ್ ಮಾತನಾಡಿ, ಕೋವಿಡ್–19 ನಂತರ ಆರ್ಥಿಕ ಬಿಕ್ಕಟ್ಟು ತಲೆದೋರಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರ ಕೊಡಗನ್ನು ಕಡೆಗಣಿಸಿದೆ. ಕೊಡಗು ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಕೃಷಿಕರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಆದಾಯ ಕಡಿಮೆ ಖರ್ಚು ಜಾಸ್ತಿಯಾಗುತ್ತಿದೆ. ಬಜೆಟ್‌ನಲ್ಲಿ ಕಳೆದ ಬಾರಿಗಿಂತ ಕಡಿಮೆ ಅನುದಾನ ನೀಡಲಾಗಿದೆ. ಕಾರ್ಮಿಕರಿಗೆ ಯಾವುದೇ ಯೋಜನೆಗಳು ಇಲ್ಲ. ಈಗಾಗಲೇ 18 ಸಾವಿರ ಜನರನ್ನು ಕಂಪನಿ ಉದ್ಯೋಗದಿಂದ ಕೈಬಿಡಲಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳಿಂದ ಹೋರಾಟದ ಅನಿವಾರ್ಯವಿದೆ ಎಂದರು. ಸಿಪಿಐ(ಎಂ) ಜಿಲ್ಲಾ ಸಮಿತಿಯ ಎ.ಸಿ.ಸಾಬು ಮಾತನಾಡಿ, ಬಜೆಟ್‌ನಲ್ಲಿ ಕೊಡಗಿನ ರಸ್ತೆ ಅಭಿವೃದ್ಧಿಗೆ ಮಾತ್ರ ಅನುದಾನ ನೀಡಲಾಗಿದ್ದು, ಇನ್ನು ಇತರೆ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಇಲ್ಲದಂತಾಗಿದೆ. ಜನಪ್ರತಿನಿಧಿಗಳಿಗೆ ರಸ್ತೆ ಕಾಮಗಾರಿಯಲ್ಲಿ ಮಾತ್ರ 40 ಪರ್ಸೆಂಟ್ ಕಮಿಷನ್ ಬರುತ್ತದೆ. ಇನ್ನು ಅಧಿಕಾರಿಗಳ ವರ್ಗಾವಣೆಯಿಂದ ಆದಾಯ ಬರುತ್ತದೆ ಎಂದು ಆಪಾದಿಸಿದರು.

ವಿರಾಜಪೇಟೆ ಸಿಪಿಐ(ಎಂ) ಕಾರ್ಯದರ್ಶಿ ಶಾಜಿ ರಮೇಶ್ ಮಾತನಾಡಿ, ಕೇಂದ್ರ ಸರಕಾರದ ಬೆಲೆ ಏರಿಕೆಯಿಂದ ಜನರು ತತ್ತರಿಸಿ ಹೋಗಿದ್ದಾರೆ. ರಾಜ್ಯ ಸರಕಾರ ಕಾರ್ಮಿಕರನ್ನು ಕಡೆಗಣಿಸುತ್ತಿದೆ. ಕೊಡಗಿನಲ್ಲಿ ಪ್ರಕೃತಿ ವಿಕೋಪದ ಸಂದರ್ಭ ಆಸ್ತಿ, ಮನೆ ಕಳೆದುಕೊಂಡವರಿಗೆ ಇನ್ನು ವಸತಿ ದೊರಕಿಲ್ಲ. ವಿರಾಜಪೇಟೆ ಪುರಸಭೆ ಅವರದ್ದೇ ಅಧಿಕಾರ ಇದ್ದರೂ ಯಾವುದೇ ಅಭಿವೃದ್ಧಿ ಕಂಡಿಲ್ಲ, ರಸ್ತೆಗಳೆಲ್ಲ ವಾಹನ ಸಂಚಾರಕ್ಕೆ ಯೋಗ್ಯವಿಲ್ಲ. ಬೆಟ್ಟ ಪ್ರದೇಶದ ಜನರಿಗೆ ವಸತಿ ನೀಡುವ ಯೋಜನೆಗೆ ಮೂರು ವರ್ಷ ಕಳೆದರು ನಿವೇಶನ ಕೊಡಲು ಸಾಧ್ಯವಾಗಿಲ್ಲ ಇವರು ಜನಪ್ರತಿನಿಧಿಗಳೆ ಎಂಬ ಪ್ರಶ್ನೆ ಕಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಚಾರ ಸಮಿತಿಯ ಹೆಚ್.ಪಿ. ರಮೇಶ್, ಸಿಐಟಿಯು ಜಿಲ್ಲಾ ಅಧ್ಯಕ್ಷ ಭರತ್, ಸಿಪಿಐ(ಎಂ) ಜಿಲ್ಲಾ ಸಮಿತಿಯ ಮಹದೇವ, ಎನ್.ಡಿ.ಕುಟ್ಟಪ್ಪ ಕೆ.ಎಸ್.ರತೀಶ್, ಖಾಲಿದ್, ಬಾಬುಟಿ, ಪದ್ಮಿನಿ ಮತ್ತಿತರರು ಹಾಜರಿದ್ದರು.

ಕೊಡವ ಭಾಷಿಕ ಜನಾಂಗ ಕುಟುಂಬಗಳ ನಡುವೆ ಉಮ್ಮತ್-ಬೊಳಕ್ ಸ್ಪರ್ಧೆ

ಮಡಿಕೇರಿ, ಫೆ.26– ಕೊಡವ ಭಾಷಿಕ ಜನಾಂಗದ ಕುಟುಂಬಗಳ ನಡುವೆ ಉಮ್ಮತ್–ಬೊಳಕ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಕಿಗ್ಗಟ್‌ನಾಡ್ ಹಿರಿಯ ನಾಗರಿಕ ವೇದಿಕೆ ಪ್ರಮುಖರು ತಿಳಿಸಿದ್ದಾರೆ.

ಈ ಕುರಿತು ಪೊನ್ನಂಪೇಟೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಿಗ್ಗಟ್‌ನಾಡ್ ಹಿರಿಯ ನಾಗರಿಕ ವೇದಿಕೆ ಪ್ರಮುಖರು, ಕಿಗ್ಗಟ್‌ನಾಡ್ ಹಿರಿಯ ನಾಗರಿಕ ವೇದಿಕೆ ಮತ್ತು ನಿನಾದ ವಿದ್ಯಾ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಏ.9ರ ಭಾನುವಾರದಂದು ನಿನಾದ ವಿದ್ಯಾ ಸಂಸ್ಥೆಯ ಆವರಣದಲ್ಲಿ 'ಉಮ್ಮತ್–ಬೊಳಕ್ ಸಾಂಸ್ಕೃತಿಕ ಸ್ಪರ್ಧೆ–2023' ನಡೆಯಲಿವೆ. ಭಾಗವಹಿಸುವ ತಂಡಗಳು ಮಾರ್ಚ್ 20ರೊಳಗೆ ತಮ್ಮ ಕುಟುಂಬದ ಮೊಹರಿನ ಪತ್ರದೊಂದಿಗೆ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಸ್ಪರ್ಧೆಯ ನಿಯಮಗಳು: ಉಮ್ಮತ್ತಾಟ್ ಸ್ಪರ್ಧೆಗೆ 5 ನಿಮಿಷ ಕಾಲಾವಕಾಶ ನಿಗದಿ ಮಾಡಲಾಗಿದೆ. ಈ ಸ್ಪರ್ಧೆಗೆ 8 ಮಂದಿ ಸ್ಪರ್ಧಿಗಳು ಮತ್ತು ಇಬ್ಬರು ಹಾಡುಗಾರರು ಪಾಲ್ಗೊಳ್ಳಬಹುದಾಗಿದ್ದು, ಯಾವುದೇ ವಯಸ್ಸಿನ ಮಿತಿ ಇರುವುದಿಲ್ಲ. ಬೊಳಕಾಟ್ ಸ್ಪರ್ಧೆಗೆ 10 ಮಂದಿಯ ತಂಡ ಪಾಲ್ಗೊಳ್ಳಬಹುದು. ದುಡಿ ಅಥವಾ ಸಿ.ಡಿ.ಯಲ್ಲಿ 5 ನಿಮಿಷಗಳ ಕಾಲಾವಕಾಶದಲ್ಲಿ ನರ್ತಿಸಬಹುದು ಎಂದು ಪ್ರಮುಖರು ಮಾಹಿತಿ ನೀಡಿದ್ದಾರೆ. ಉಮ್ಮತ್ತಾಟ್ ಮತ್ತು ಬೊಳಕಾಟ್ ಈ ಎರಡೂ ಸ್ಪರ್ಧೆಗೆ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳು ಇರಲಿವೆ. ಎಲ್ಲಾ ಸ್ಪರ್ಧೆಗಳಲ್ಲಿಯೂ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರಲಿದೆ ಎಂದು ಕಿಗ್ಗಟ್‌ನಾಡ್ ಹಿರಿಯ ನಾಗರಿಕರ ವೇದಿಕೆಯ ಪ್ರಮುಖರು ಸ್ಪಷ್ಟಪಡಿಸಿದ್ದಾರೆ.

ನೋಂದಾವಣಿ: ಎರಡೂ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಕುಟುಂಬ ತಂಡಗಳು ಅಧ್ಯಕ್ಷರು, ಕಿಗ್ಗಟ್‌ನಾಡ್ ಹಿರಿಯ ನಾಗರಿಕರ ವೇದಿಕೆ, ಮೂವಪ್ಪ ಕಾಂಪ್ಲೆಕ್ಸ್, ಪೊನ್ನಂಪೇಟೆ ಈ ವಿಳಾಸಕ್ಕೆ ಪತ್ರ ಕಳುಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಅಧ್ಯಕ್ಷರು–9448447158, ಕಾರ್ಯದರ್ಶಿ– 9481931127 ಹಾಗೂ ನಿನಾದ ವಿದ್ಯಾ ಸಂಸ್ಥೆ ನಿರ್ಮಲಾ ಬೋಪಣ್ಣ–9449476266 ಈ ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ಅವರುಗಳು ತಿಳಿಸಿದ್ದಾರೆ.

ಕೋಟ್ಯಾಂತರ ರೂ. ಮೌಲ್ಯದ ಅಂಬರ್ ಗ್ರೀಸ್ ವಶ

ಕೇರಳದ ಮೂವರು ಸೇರಿ ನಾಲ್ವರ ಬಂಧನ





ಕೊಳ್ಳೇಗಾಲ, ಫೆ.26– ಕೋಟ್ಯಾಂತರ ರೂ. ಬೆಲೆಬಾಳುವ ಅಂಬರ್ ಗ್ರೀಸ್(ತಿಮಿಂಗಿಲ ವಾಂತಿ) ಸಾಗಿಸುತ್ತಿದ್ದ ನಾಲ್ವರನ್ನು ಬಂಧಿಸುವಲ್ಲಿ ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೇರಳದ ನಾದಪುರ ಗ್ರಾಮದ ನಿವಾಸಿ, ಕಾರು ಚಾಲಕ ಶಂಸುದ್ದೀನ್ ಒತಿಯೋನ್ (48), ಕೇರಳದ ಚಂಗಸೇರಿ ಗ್ರಾಮದ ನಿವಾಸಿ ತೈಸೀಮಾ ವರ್ಷಸೆ ಅಲಿಯಾಸ್ ಸುಜಾ (55), ಕೇರಳದ ಕಲ್ಲುಪ್ಪಿಲ್ಲಕೆರೆ ಗ್ರಾಮದ ನಿವಾಸಿ ಸಜಿ ಸುಭಾಸ್ ಬಿನ್ ಸುಭಾಷ್ ಚಂದ್ರಬೋಸ್ (41) ಹಾಗೂ ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ವಿರೂಪಾಕ್ಷ (62) ಬಂಧಿತ ಆರೋಪಿಗಳು. ಇವರಿಂದ 4.950 ಕೆಜಿ ತೂಕದ ಕೋಟ್ಯಾಂತರ ರೂ. ಮೌಲ್ಯದ ಅಂಬರ್ ಗ್ರೀಸ್ ಹಾಗೂ ಕೃತ್ಯಕ್ಕೆ ಬಳಸಿದ್ದ ಸ್ವಿಫ್ಟ್ ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ವಿವರ: ಕೋಟ್ಯಾಂತರ ರೂ. ಮೌಲ್ಯದ ಅಂಬರ್ ಗ್ರೀಸ್ ಮಾರಾಟ ಮಾಡಲು ಆರೋಪಿಗಳು ಶನಿವಾರ ಸಂಜೆ ಕೇರಳದಿಂದ ಬೆಂಗಳೂರಿಗೆ ಸ್ವಿಫ್ಟ್ ಕಾರಿನಲ್ಲಿ ತೆರಳುತ್ತಿದ್ದರು. ಈ ವೇಳೆ ಆರೋಪಿಗಳು ಕೊಳ್ಳೇಗಾಲ ಬಸ್ ನಿಲ್ದಾಣದ ಬಳಿಯ ಹೋಟೆಲ್‌ವೊಂದರಲ್ಲಿ ತಿಂಡಿ ತಿನ್ನಲು ಕಾರು ನಿಲ್ಲಿಸಿದ್ದರು. ಈ ವೇಳೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಕಲಂ 2(32), 39(ಬಿ) (ಡಿ), 49,50 ಮತ್ತು 51ರ ರಿತ್ಯಾ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಎಸ್ಐ ವಿಜಯರಾಜ್, ಮುಖ್ಯ ಪೇದೆಗಳಾದ ರಾಮಚಂದ್ರ, ಸ್ವಾಮಿ, ತಖೀವುಲ್ಲಾ, ಶಂಕರ್, ಬಸವರಾಜು ಎಂ.ಜಿ. ಬಸವರಾಜು, ಪ್ರಭಾಕರ ಇನ್ನಿತರರಿದ್ದರು.

ತಿಮಿಂಗಲ ಸತ್ತ ಬಳಿಕ ಅದರ ಗುದದ್ವಾರದಿಂದ ಹೊರಹೊಮ್ಮುವ ಮೇಣದ ಮಾದರಿಯನ್ನು ಅಂಬರ್ ಗ್ರಿಸ್ ಅಥವಾ ತಿಮಿಂಗಲ ವಾಂತಿ ಎಂದು ಕರೆಯಲಾಗುತ್ತದೆ. ಈ ವಾಂತಿಗೆ ಕೆಜಿಯೊಂದಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೋಟ್ಯಾಂತರ ರೂ. ಬೆಲೆ ಇದೆ. ಅಂಬರ್ ಗ್ರೀಸ್ ಸಿಕ್ಕರೇ ಶೀಘ್ರ ಶ್ರೀಮಂತರಾಗಬಹುದು ಎಂಬ ದುರುದ್ದೇಶದಿಂದ ರಾಜ್ಯ, ಅಂತರರಾಜ್ಯ ಹಾಗೂ ದೇಶ ವಿದೇಶಗಳಲ್ಲಿ ಈ ದಂಧೆ ನಡೆಯುತ್ತಿದೆ.

ಇದಕ್ಕೆ ಕಡಿವಾಣ ಹಾಕಲು ನಾನಾ ಕ್ರಮ ಕೈಗೊಂಡರೂ ಸಹ ಅದು ಸಾಧ್ಯವಾಗಿಲ್ಲ. ಆಗಿಂದಾಗ್ಗೆ ಪ್ರಕರಣಗಳು ವರದಿಯಾಗುತ್ತಿವೆ. ಇದೀಗ ಚಾ.ನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ ಈ ದಂಧೆಕೋರರು ಸಿಕ್ಕಿಬಿದ್ದಿರುವುದು ವಿಶೇಷ. ಇಂತಹ ದಂಧೆಕೋರರ ಹೆಡೆಮುರಿ ಕಟ್ಟುವಲ್ಲಿ ಸಿಐಡಿ ಅರಣ್ಯ ಸಂಚಾರಿ ದಳ ಯಶಸ್ವಿ ಕಾರ್ಯಾಚರಣೆ ಮಾಡಿ ಸೈ ಅನಿಸಿಕೊಂಡಿದೆ.

ಪತ್ರಿಕೆ ಹಂಚುವವರು ಸಮಾಜದ ರೂವಾರಿಗಳು

ಪತ್ರಿಕೆ ಹಂಚುವವರಿಗೆ ಆರೋಗ್ಯ ತಪಾಸಣೆ, ಜರ್ಕಿನ್ ವಿತರಣೆ



ಚಾಮರಾಜನಗರ, ಫೆ.26– ಪತ್ರಿಕೆ ಹಂಚುವ ಹುಡುಗರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಚಾಮರಾಜನಗರ ಜೆಎಸ್‌ಎಸ್ ಆಸ್ಪತ್ರೆ ಅಧೀಕ್ಷಕ ಡಾ. ಗೋವಿಂದಶೆಟ್ಟಿ ಸಲಹೆ ನೀಡಿದರು.

ನಗರದ ರೋಟರಿ ಭವನದಲ್ಲಿ ಜಿಲ್ಲಾ ಪತ್ರಕರ್ತರ ಸಂಘ, ರೋಟರಿ ಸಂಸ್ಥೆ, ಜೆಎಸ್‌ಎಸ್ ಆಸ್ಪತ್ರೆ, ಕಾವೇರಿ ಡಯಾಗ್ನೋಸ್ಟಿಕ್ ಸೆಂಟರ್ ಸಹಯೋಗದಲ್ಲಿ ನಡೆದ ಪತ್ರಿಕೆ ಹಂಚುವ ಹುಡುಗರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಜರ್ಕಿನ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪತ್ರಿಕೆ ಹಂಚುವವರು ಸಮಾಜದ ರೂವಾರಿಗಳು. ಮಳೆ, ಚಳಿ ಎನ್ನದೇ ದಿನ ನಿತ್ಯ ಪತ್ರಿಕೆಗಳನ್ನು ಮನೆಗಳಿಗೆ ತಲುಪಿಸುವ ಹುಡುಗರು ತಮ್ಮ ಆರೋಗ್ಯದ ಕಡೆ ಗಮನಹರಿಸಬೇಕು. ಆರೋಗ್ಯವಂತರಾಗಿದ್ದರೆ ಪತ್ರಿಕೆ ಹಂಚಲು ತೊಂದರೆ ಆಗುವುದಿಲ್ಲ. ತಮ್ಮ ಕುಟುಂಬದ ಆರ್ಥಿಕ ತೊಂದರೆಯಿಂದಾಗಿ ಓದಿನ ಜೊತೆಗೆ ಪತ್ರಿಕೆ ಹಂಚುವ ಕಾಯಕ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಪತ್ರಿಕೆ ಹಂಚುವ ಹುಡುಗರು ನಿಸ್ವಾರ್ಥದಿಂದ ತಮ್ಮ ಕೆಲಸ ಮಾಡುತ್ತಾರೆ. ಹುಡುಗರು ತಮ್ಮ ಆರೋಗ್ಯ ನೋಡಿಕೊಳ್ಳುವ ಜೊತೆಗೆ ಸಂಸ್ಕಾರವಂತರಾಗಬೇಕು. ಅಲ್ಲದೇ ಉತ್ತಮ ಶಿಕ್ಷಣ ಪಡೆಯುವ ಮೂಲಕ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಎಂದು ತಿಳಿಸಿದರು.

ನಂತರ ರೋಟರಿ ಸಂಸ್ಥೆ ಅಧ್ಯಕ್ಷ ಕೆ.ಎಂ. ಮಹದೇವಸ್ವಾಮಿ ಮಾತನಾಡಿ, ಪತ್ರಿಕೆ ಹಂಚುವವರು ಗುರುಗಳಿಗೆ ಸಮಾನ. ಶಿಕ್ಷಕರು ಮಕ್ಕಳಿಗೆ ಅಕ್ಷರ ಕಲಿಸುತ್ತಾರೆ, ನೀವು ಮನೆಗಳಿಗೆ ಪತ್ರಿಕೆ ಹಂಚುವ ಮೂಲಕ ದೇಶ, ವಿದೇಶ, ರಾಜ್ಯ ಹಾಗೂ ಸ್ಥಳೀಯ ಸುದ್ದಿಗಳನ್ನು ಮನೆ ಬಾಗಿಲಿಗೆ ತಲುಪಿಸುತ್ತೀರಾ. ಯಾವುದೇ ಕೆಲಸವನ್ನು ಕೇವಲವಾಗಿ ಭಾವಿಸಬಾರದು. ಪತ್ರಿಕೆ ಹಂಚುವ ಹುಡುಗರು ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸದೇ ಉತ್ತಮ ಶಿಕ್ಷಣ ಪಡೆದು ಉನ್ನತ ಸ್ಥಾನಮಾನ ಪಡೆಯಬೇಕು ಎಂದು ಹೇಳಿದರು.

ಇದೇ ವೇಳೆ ಅತ್ಯುತ್ತಮ ನಿರೂಪಕಿ ಪ್ರಶಸ್ತಿಯನ್ನು ನಂಜನಗೂಡಿನ ಪಲ್ಲವಿ ಅವರಿಗೆ ನೀಡಿ ಸನ್ಮಾನಿಸಲಾಯಿತು. ಇದಕ್ಕೂ ಮೊದಲು 59ಕ್ಕೂ ಹೆಚ್ಚು ಪತ್ರಿಕೆ ಹಂಚುವ ಹುಡುಗರಿಗೆ ಆರೋಗ್ಯ ತಪಾಸಣೆ ಮಾಡಲಾಯಿತು. ಬಳಿಕ ಗಣ್ಯರು ಹುಡುಗರಿಗೆ ಜರ್ಕಿನ್‌ಗಳನ್ನು ವಿತರಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ನಾಗರಾಜು, ಸಮಾಜ ಸೇವಕರಾದ ಕೆಸ್ತೂರು ಬಸವಣ್ಣ, ಸಿದ್ದವೀರಪ್ಪ, ಕಾವೇರಿ ಡಯಾಗ್ನೋಸ್ಟಿಕ್ ಸೆಂಟರ್ ಮಾಲೀಕ ರಾಮು, ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷ ಜಿ. ಬಂಗಾರು ಸೇರಿದಂತೆ ಇತರರು ಹಾಜರಿದ್ದರು.

ರಾಘವೇಂದ್ರಸ್ವಾಮಿ ಮಠದಲ್ಲಿ ವಿಜೃಂಭಣೆಯಿಂದ ನಡೆದ ಗುರು ಭಕ್ತಿ ಉತ್ಸವ

ಚಾಮರಾಜನಗರ, ಫೆ.26– ನಗರದ ಶಂಕರಪುರದಲ್ಲಿರುವ ಶ್ರೀ ಗುರುರಾಘವೇಂದ್ರ ಸ್ವಾಮಿ ಮಠದಲ್ಲಿ



ಭಾನುವಾರ ಶ್ರೀ ರಾಘವೇಂದ್ರ ಸ್ವಾಮಿಗಳ 428ನೇ ಜನ್ಮದಿನದ ಪ್ರಯುಕ್ತ ಗುರು ಭಕ್ತಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆಯಿಂದಲೇ ರಾಯರ ಮಠದಲ್ಲಿ ಶ್ರೀ ರಾಘವೇಂದ್ರ ಸ್ತೋತ್ರ ಪೂರ್ವಕ ಕ್ಷೀರಾಭಿಷೇಕ, ವಿಶೇಷ ಪಂಚಾಮೃತ ಅಭಿಷೇಕ ಅಲಂಕಾರ, ಸಾಮೂಹಿಕ ಪಾದಪೂಜೆ, ಸಾಮೂಹಿಕ ಕನಕಾಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು. ಇಷ್ಟಾರ್ಥ ಸಿದ್ದಿಗೆ ಭಕ್ತಾದಿಗಳು ರಾಯರನ್ನು ಪ್ರಾರ್ಥಿಸಿ ಪುನೀತರಾದರು. ತದನಂತರ ಭಕ್ತಾದಿಗಳಿಗೆ ಮಂತ್ರಾಕ್ಷತೆ ಹಾಗೂ ಪ್ರಸಾದ ವಿತರಣೆ ಮಾಡಲಾಯಿತು. ಮಠದ ಪವನ್ ಆಚಾರ್ ಹಾಗೂ ಶ್ರೀಧರ್ ಆಚಾರ್ ಅವರು ಪೂಜಾಕಾರ್ಯಗಳನ್ನು ನೆರವೇರಿಸಿದರು.

ಎಂ.ಟೆಕ್‌ನಲ್ಲಿ ಚಿನ್ನದ ಪದಕ ಪಡೆದ ಯುವಕನಿಗೆ ಸನ್ಮಾನ



ಚಾಮರಾಜನಗರ, ಫೆ.26– ಎಂ.ಟೆಕ್ ವಿಭಾಗದ ಇಂಡಸ್ಟ್ರಿಯಲ್ ಆಟೋಮೇಷನ್ ಎಂಜಿನಿಯರಿಂಗ್‌ನಲ್ಲಿ ಚಿನ್ನದ ಪದಕ ಪಡೆದಿರುವ ತಾಲೂಕಿನ ಬಿಸಲವಾಡಿ ಗ್ರಾಮದ ಕೃಷ್ಣನಾಯಕ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಇದೇ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಶಾಂತಮಲ್ಲಪ್ಪ ಮಾತನಾಡಿ, ತಾಲೂಕಿನ ಗಡಿ ಬಿಸಲವಾಡಿ ಗ್ರಾಮದವರಾದ ಕೃಷ್ಣನಾಯಕ ಅವರು ಸತತ ಪರಿಶ್ರಮದಿಂದ ಎಂಟೆಕ್‌ನಲ್ಲಿ ಚಿನ್ನದ ಪದಕ ಪಡೆದು ಸಾಧನೆ ಮಾಡಿರುವುದು ಗ್ರಾಮ ಸೇರಿದಂತೆ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಇವರ ಸಾಧನೆ ಗ್ರಾಮದ ಇತರೇ ಯುವಕರಿಗೆ ಮಾದರಿಯಾಗಿದೆ ಎಂದರು.

ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಸಿದ್ದನಾಯಕ, ಉಪಾಧ್ಯಕ್ಷ ಶಿವಸ್ವಾಮಿ, ನಿರ್ದೇಶಕರಾದ ಮಂಜುನಾಥ್, ಶಿವಕುಮಾರ್, ಮಹದೇವಯ್ಯ, ಡೇರಿ ಅಧ್ಯಕ್ಷ ಶಿವಬಸಪ್ಪ, ಮುಖಂಡರಾದ ಬಿಸಲವಾಡಿ ಉಮೇಶ್, ಗಿರೀಶ್, ಅನಿಲ್, ಮಹೇಶ್, ಶರವಣ, ಪರಶಿವಪ್ಪ, ಪಾಪು, ಪ್ರಸನ್ನ, ಎಲ್.ಬಸವಣ್ಣ, ಚಿನ್ನದ ಪದಕ ವಿಜೇತ ಕೃಷ್ಣನಾಯಕ ಸಹೋದರ ಕುಮಾರ್ ಹಾಜರಿದ್ದರು.

ನಾಳೆ ಸಂತ ಕವಿ ಸರ್ವಜ್ಞ ಜಯಂತಿ

ಚಾಮರಾಜನಗರ, ಫೆ.26– ಜಿಲ್ಲಾಡಳಿತ ವತಿಯಿಂದ ಫೆ.28 ರಂದು ನಡೆಯುವ ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮಕ್ಕೆ ಜಿಲ್ಲಾದ್ಯಂತ ಕುಂಬಾರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಟಿ.ಎಸ್.ರಾಜೇಂದ್ರ ಮನವಿ ಮಾಡಿದರು. ಅಂದು ಬೆಳಗ್ಗೆ 9.30ಕ್ಕೆ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಆವರಣದಿಂದ ಸಂತ ಕವಿ ಸರ್ವಜ್ಞರ ಭಾವಚಿತ್ರ ಮೆರವಣಿಗೆ ಆರಂಭವಾಗಲಿದೆ. ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ 11ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ನಾಳೆ 7ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ

ಯಳಂದೂರು, ಫೆ.26– ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಫೆ.28ರಂದು 7ನೇ ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನ ನಡೆಯಲಿದೆ.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಅಂದು ಬೆಳಗ್ಗೆ 8 ಗಂಟೆಗೆ ಧ್ವಜಾರೋಹಣ, ನಂತರ ಸಮ್ಮೇಳನ ಅಧ್ಯಕ್ಷ ಡಾ.ಎಸ್.ನರೇಂದ್ರಕುಮಾರ್ ಅವರನ್ನು ಮಹಾಕವಿ ಷಡಕ್ಷರ ದೇವ ಗದ್ದುಗೆಯಿಂದ ವಿವಿಧ ಶಾಲಾ–ಕಾಲೇಜು ಹಾಗೂ ಸಂಘ ಸಂಸ್ಥೆಗಳು ಸೇರಿದಂತೆ ಕಲಾ ತಂಡಗಳೊಂದಿಗೆ ಪಟ್ಟಣ ವಿವಿಧ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ವೇದಿಕೆ ಕಾರ್ಯಕ್ರಮಕ್ಕೆ ಕರೆತರಲಾಗುವುದು. ನಂತರ ಉದ್ಘಾಟನಾ ಸಮಾರಂಭಕ್ಕೆ ಸಾಹಿತಿ ಡಾ.ಎಸ್.ತುಕಾರಂ ಚಾಲನೆ ನೀಡುವರು.

ಅಧ್ಯಕ್ಷತೆಯನ್ನು ಶಾಸಕ ಎನ್.ಮಹೇಶ್ ವಹಿಸುವರು. ವಿಚಾರಗೋಷ್ಠಿ, ಕವಿಗೋಷ್ಠಿ ನಂತರ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಸನ್ಮಾನ. ಸಂಜೆ 7 ಗಂಟೆಗೆ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ, ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಈ ಕಾರ್ಯಕ್ರಮಕ್ಕೆ ಸಾಹಿತ್ಯ ಪರಿಷತ್ ಸರ್ವ ಸದಸ್ಯರು, ವಿವಿಧ ಪ್ರಗತಿಪರ ಸಂಘಟನೆಗಳು ಸೇರಿದಂತೆ ತಾಲೂಕಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಯರಿಯೂರು ನಾಗೇಂದ್ರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೂಡ್ಸ್ ಆಟೋ ಮಗುಚಿ ಯುವತಿ ಸಾವು

14 ಮಂದಿಗೆ ಗಾಯ, ತೀವ್ರವಾಗಿ ಗಾಯಗೊಂಡ ಯುವಕ ಮೈಸೂರು ಆಸ್ಪತ್ರೆಗೆ ದಾಖಲು

ಕೊಳ್ಳೇಗಾಲ, ಫೆ.26– ಟಾಟಾ ಮ್ಯಾಜಿಕ್ ಗೂಡ್ಸ್ ಆಟೋ ಮಗುಚಿ ಬಿದ್ದ ಪರಿಣಾಮ ಮದುವೆಗೆ ತೆರಳುತ್ತಿದ್ದ ಓರ್ವ ಯುವತಿ ಸಾವನ್ನಪ್ಪಿ, 14 ಮಂದಿ ಸಣ್ಣ ಪುಟ್ಟ ಗಾಯಗಳಿಂದ ಪಾರಾಗಿರುವ ಘಟನೆ ತಾಲೂಕಿನ ಚಿಕ್ಕಲ್ಲೂರು ಸಮೀಪದ ಕುಪ್ಪುಸ್ವಾಮಿ ದೊಡ್ಡಿಯಲ್ಲಿ ಸಂಭವಿಸಿದೆ.



ತಾಲೂಕಿನ ಇರುದಳ್ ದೊಡ್ಡಿ ಗ್ರಾಮದ ಸಂಜನಾ (16) ಸಾವನ್ನಪ್ಪಿದ ಯುವತಿ. ಅದೇ ಗ್ರಾಮದ ಅಭಿ (25) ತೀವ್ರವಾಗಿ ಗಾಯಗೊಂಡಿದ್ದು, ತುರ್ತು ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ರವಾನಿಸಲಾಗಿದೆ. ಉಳಿದಂತೆ ನಿತಿನ್, ವೀರಭದ್ರ, ಮಂಜುಳಾ, ಮಮತ, ಬಸವರಾಜು, ಪ್ರಭಾಸ್, ಭೂಮಿಕಾ, ನಾಗಮಣಿ, ಐಶ್ವರ್ಯ, ಮಹೇಂದ್ರ ಕವಿತಾ ಹಾಗೂ ಉದಯಕುಮಾರ್ ಗಾಯಗೊಂಡು ಹೆಚ್ಚಿನ ಚಿಕಿತ್ಸೆಗಾಗಿ ಕೊಳ್ಳೇಗಾಲ ಆಸ್ಪತ್ರೆಗೆ ದಾಖಲಾಗಿದ್ದಾರೆ. ಚಾಲಕನ ನಿಯಂತ್ರಣ ತಪ್ಪಿ ಈ ಅವಘಡ ಸಂಭವಿಸಿದ್ದು, ಮೃತ ಯುವತಿ ಪೋಷಕರ ಆಕ್ರಂದನ ಮುಗಿಲು ಮುಟ್ಟುವಂತಿತ್ತು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಪಘಾತವಾದ ವಾಹನವನ್ನು ಜಪ್ತಿ ಮಾಡಲಾಗಿದೆ

ಬಸವಣ್ಣ ನಿಧನ



ಚಾಮರಾಜನಗರ, ಫೆ.26– ತಾಲೂಕಿನ ಕೂಡ್ಲೂರು ಗ್ರಾಮದ ನಿವಾಸಿ, ಕೂಡ್ಲೂರು ಗ್ರಾಮ ಪಂಚಾಯತಿ ಮಾಜಿ ಉಪಾಧ್ಯಕ್ಷರಾದ ಹೋಟೆಲ್ ಬಸವಣ್ಣ(64) ಭಾನುವಾರ ಸಂಜೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು– ಬಳಗ ಅಗಲಿದ್ದಾರೆ. ಮೃತರು ಮಾಜಿ ಸಚಿವ ದಿವಂಗತ ಎಂ. ಮಹದೇವು ಅವರ ಷಡಕರು. ಅಂತ್ಯಕ್ರಿಯೆ ನಾಳೆ(ಸೋಮವಾರ) ಮಧ್ಯಾಹ್ನ ಕೂಡ್ಲೂರು ಗ್ರಾಮದಲ್ಲಿ ನಡೆಯಲಿದೆ.

ಮೈಸೂರಿನ ಯಾದವಗಿರಿಯಲ್ಲಿ ಆರ್.ಕೆ.ನಾರಾಯಣ್ ಅವರ

ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆ ಅನಾವರಣ

● ಸಿದ್ಧಾರ್ಥ ಗ್ರೂಪ್ಸ್‌ನಿಂದ ಆರ್.ಕೆ.ನಾರಾಯಣ್ ನಿವಾಸದ ಬಳಿಯ ಸರ್ಕಲ್‌ನಲ್ಲಿ ಪ್ರತಿಮೆ ನಿರ್ಮಾಣ ● ಯಾದವಗಿರಿ ನಿವಾಸಿಗಳ ಒಕ್ಕೂಟದಿಂದ ಕಾರ್ಯಕ್ರಮ ಆಯೋಜನೆ ● ಆರ್.ಕೆ.ನಾರಾಯಣ್‌ರೊಂದಿಗಿನ ಒಡನಾಟ ಮೆಲುಕು ಹಾಕಿದ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ



ಮೈಸೂರಿನ ಯಾದವಗಿರಿಯ ಜಾಯ್ ಫ್ಯಾಕ್ಟರಿ ವೃತ್ತದಲ್ಲಿ ನಿರ್ಮಾಣವಾಗಿರುವ ಆರ್.ಕೆ.ನಾರಾಯಣ್ ಅವರ ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆ

ಮೈಸೂರು, ಫೆ.26(ಜಿಎ)–ಮೈಸೂರಿನ ಯಾದವಗಿರಿಯ ಜಾಯ್ ಫ್ಯಾಕ್ಟರಿ ಸರ್ಕಲ್‌ನಲ್ಲಿ ಸಿದ್ಧಾರ್ಥ ಗ್ರೂಪ್ಸ್ ವತಿಯಿಂದ ನಿರ್ಮಿಸಿರುವ ಆರ್.ಕೆ. ನಾರಾಯಣ್ ಅವರ ಕೃತಿ ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆಯನ್ನು ಭಾನುವಾರ ಸಂಜೆ ಲೋಕಾರ್ಪಣೆಗೊಳಿಸಲಾಯಿತು.

ಯಾದವಗಿರಿ ನಿವಾಸಿಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರ ಧಾರಾವಾಹಿಯಲ್ಲಿ ನಟಿಸಿದ ಮಾಸ್ಟರ್ ಮಂಜುನಾಥ್, 'ಮೈಸೂರು ಮಿತ್ರ' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ, ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ ಸಿದ್ಧಾರ್ಥ ಗ್ರೂಪ್ಸ್‌ನ ಛೇರ್ಮನ್ ಪಿ.ವಿ.ಗಿರಿ, ಪಾಲಿಕೆ ಸದಸ್ಯ ಬಿ.ವಿ.ರವೀಂದ್ರ ಹಾಗೂ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಅವರುಗಳು ಪ್ರತಿಮೆಯನ್ನು ಅನಾವರಣ ಮಾಡಿದರು.

ನಂತರ ಮಾತನಾಡಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರು, ಇಂದು ತುಮಗೆಲ್ಲ ಸುಯೋಗದ ದಿನ ಎಂದು ಭಾವಿಸುತ್ತೇನೆ. ಏಕೆಂದರೆ ನಾನು ಮೈಸೂರಿಗೆ ಬಂದು 50 ವರ್ಷಗಳಾಗಿದ್ದು, ಅನೇಕ ಸಭೆ ಸಮಾರಂಭಗಳಲ್ಲಿ ಭಾಗ ವಹಿಸಿದ್ದೇನೆ. ಆದರೆ ಈ ರೀತಿಯ ಕಾರ್ಯಕ್ರಮಗಳಲ್ಲಿ ಸ್ಥಳೀಯ ಜನರು ಪಾಲ್ಗೊಂಡಿದ್ದನ್ನು ನಾನು ನೋಡಿರುವುದು ಬಹಳ ವಿರಳವಾಗಿರುತ್ತದೆ. ಬಡಾವಣೆಯಲ್ಲಿ ಅನೇಕ ವರ್ಷಗಳ ಕಾಲ ವಾಸವಿದ್ದ ಅಂತರರಾಷ್ಟ್ರೀಯ ಮಟ್ಟದ ಇಂಗ್ಲಿಷ್ ಬರಹಗಾರರಾದ ಆರ್.ಕೆ.ನಾರಾಯಣ್ ಅವರಿಗೆ ನೀವು ನೀಡಿರುವ ದೊಡ್ಡ ಗೌರವ ಇದು ಎಂದು ಭಾವಿಸಿದ್ದೇನೆ ಎಂದರು.

ಪಿ.ವಿ.ಗಿರಿ ಅವರು ಮೈಸೂರಿನಲ್ಲಿಯೇ ವಿಶಿಷ್ಟ ರೀತಿಯ ಉದ್ಯಮಿಯಾಗಿದ್ದು, ಮೂಲತಃ ಹೋಟೆಲ್ ಉದ್ಯಮಿ ಆಗಿರುವ ಅವರು ಸಿದ್ಧಾರ್ಥ ಹೋಟೆಲ್ ಮೂಲಕ ತಮ್ಮ ಮೈಸೂರು ಜೀವನವನ್ನು ಪ್ರಾರಂಭಿಸಿದರು. ನಾನು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳನ್ನು ಅದೇ ಸಮಯದಲ್ಲಿ ಆರಂಭಿಸಿದ್ದೆ. ಆಗಿನಿಂದ ನಮ್ಮಿಬ್ಬರ ನಡುವೆ ಉತ್ತಮ ಬಾಂಧವ್ಯ ಬೆಳೆಯಿತು. ಯಾರಿಗೂ ಗೊತ್ತಿಲ್ಲದೆ ಬಹಳ ಸೂಕ್ಷ್ಮವಾಗಿ ಸಹಾಯ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವ ಅವರು ಕೊಡುಗೈ ದಾನಿಯಾಗಿದ್ದು, ಅವರ ಸೇವಾ ಕಾರ್ಯಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಪರಿಚಯವಾಗಿದೆ. ಬಡ ವಿದ್ಯಾರ್ಥಿ, ಬಡ ರೋಗಿಗೆ ಆರೋಗ್ಯದ ಬಗ್ಗೆ ಅನುಕೂಲ ಮಾಡಿಕೊಡುವುದು ಹಾಗೇ ವೃದ್ಧಾಶ್ರಮಗಳಿಗೂ ಸತತವಾಗಿ ಸಹಾಯ ಮಾಡುತ್ತಾ, ಅನೇಕರಿಗೆ ನೆರವಾಗಿದ್ದಾರೆ ಎಂದು ಪಿ.ವಿ.ಗಿರಿ ಅವರ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು.

ಪೋಸ್ಟ್ ಕಾರ್ಡ್ : ನಂತರ ಆರ್.ಕೆ. ನಾರಾಯಣ್ ಬಗ್ಗೆ ಮಾತನಾಡಿದ ಗಣಪತಿಯವರು 'ಸ್ಟಾರ್ ಆಫ್ ಮೈಸೂರ್'ನಲ್ಲಿ ಆರ್.ಕೆ. ನಾರಾಯಣ್ ಅವರ ಆತ್ಮಕಥೆ 'ಮೈ ಡೇ' ಪುಸ್ತಕದ ಕುರಿತು ನಾನು ಬರೆದ 'ಅಬ್ರಕಡಬ್ರಾ' ಕಾಲಂನಲ್ಲಿ ಪುಸ್ತಕದಲ್ಲಿನ ಒಂದು ಕೋಟ್ ಬಳಸಿ ಕೊಂಡಿದ್ದೆ. ಈ ವೇಳೆ ಅವರು ಪೋಸ್ಟ್ ಕಾರ್ಡ್‌ನಲ್ಲಿ **"ಪ್ರೀತಿಯ ಗಣಪತಿ ಅವರೇ, ನನ್ನ ಮೈ ಡೇ ಪುಸ್ತಕದಿಂದ ನೀವು ಒಂದು ಕೊಟೇಷನ್ ಅನ್ನು ನನ್ನ ಅನುಮತಿ ಇಲ್ಲದೆ ಬಳಸಿಕೊಂಡಿದ್ದೀರಾ, ದಯವಿಟ್ಟು ಅದನ್ನು ಮಾಡಬೇಡಿ"** ಎಂದು ಬರೆದು ಕಳುಹಿಸಿದ್ದರು. ನಾನು ಅವರಿಗೆ ಧನ್ಯವಾದ ತಿಳಿಸಬೇಕು. ಅವರು ರಾಜಧನ ಕೇಳಲಿಲ್ಲ ಎಂದು ಅವರ ಪತ್ರವನ್ನು ನೆನೆದರು.

ನಂತರ ಶಾಸಕ ಎಲ್.ನಾಗೇಂದ್ರ ಸಿದ್ಧಾರ್ಥ ಗ್ರೂಪ್ಸ್‌ನ ಛೇರ್ಮನ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಿಲ್ಪಿ ರವಿರಾಜ್, ಮಾರ್ಗದರ್ಶಕ ಗುರುರಾಜ್ ಎಸ್.ನಾಯಕ, ಸಹಾಯಕರಾದ ಬಸವರಾಜ್, ಆನಂದ, ನಾಗರಾಜು ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಪಾಲಿಕೆ ಸದಸ್ಯ ಬಿ.ವಿ. ರವೀಂದ್ರ ಎಸ್.ಕೆ.ದಿನೇಶ್ ಉಪಸ್ಥಿತರಿದ್ದರು.



ಆರ್.ಕೆ.ನಾರಾಯಣ ಅವರ ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆಯನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು. ಈ ವೇಳೆ ಸಿದ್ಧಾರ್ಥ ಗ್ರೂಪ್ಸ್‌ನ ಛೇರ್ಮನ್ ಪಿ.ವಿ.ಗಿರಿ, 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಹಾಗೂ ಇನ್ನಿತರರಿದ್ದರು.



ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆ ಮುಂದೆ ಗಣ್ಯರು



ಸಮಾರಂಭದಲ್ಲಿ ನೆರೆದಿರುವ ಯಾದವಗಿರಿ ಬಡಾವಣೆಯ ನಿವಾಸಿಗಳು



ಮೈಸೂರು ನೆಲದ ಕಲೆಯೇ ವಿಶೇಷವಾಗಿದೆ. ನಾನು ಬಹಳ ವರ್ಷಗಳಿಂದ ಕಲಾ ಪರಿಕರಗಳ ಸಂಗ್ರಾಹಕನಾಗಿದ್ದೇನೆ. ಕರ್ನಾಟಕದಲ್ಲಿ ಸಾಕಷ್ಟು ಜನರು ಕಲಾವಿದರಿದ್ದಾರೆ. ಜನರು ಕಲೆಯ ಮಹತ್ವ ಏನೆಂಬುದನ್ನು ಅರ್ಥ ಮಾಡಿಕೊಂಡರಷ್ಟೇ ಕಲಾವಿದರಿಗೆ ಪ್ರೋತ್ಸಾಹ ದೊರೆಯುವುದು.

– ಪಿ.ವಿ.ಗಿರಿ, ಸಿದ್ಧಾರ್ಥ ಗ್ರೂಪ್ ಛೇರ್ಮನ್



ಪಾತ್ರಗಳನ್ನು ಪ್ರತಿಮೆಯಾಗಿ ಕಾಣುವುದು ಬಹಳ ಅಪರೂಪವಾಗಿರುತ್ತದೆ. ಅದರಲ್ಲೂ ಇದರ ರೂವಾರಿಯಾದ ಆರ್.ಕೆ.ನಾರಾಯಣ್ ಅವರ ಮನೆಯ ಬಳಿ ಪ್ರತಿಮೆ ನಿರ್ಮಾಣ ಆಗಿರುವುದು ಸಂತಸದ ವಿಚಾರವಾಗಿದೆ. ಮಾಲ್ಗುಡಿ ಮತ್ತು ಸ್ವಾಮಿ ಅವರ ಪರಿಕಲ್ಪನೆಯಲ್ಲಿ ಮೂಡಿದ್ದು, ನನ್ನಲ್ಲಿ ಸ್ವಾಮಿಯನ್ನು ನೋಡಿದ ಶಂಕರ್‌ನಾಗ್ ಅವರು ಆ ಪಾತ್ರ ನೀಡಿದ್ದರು. ಅದರಲ್ಲಿಯೂ ಹಿಂದಿ, ಇಂಗ್ಲಿಷ್ ಬಾರದ ಯಾವುದೇ ಸಿನಿಮಾ ಹಿನ್ನೆಲೆ ಇಲ್ಲದ ನನಗೆ ಅವಕಾಶ ನೀಡುವ ಮೂಲಕ ವಿಶೇಷ ಅನುಭವ ನೀಡಿದ್ದಾರೆ. 36 ವರ್ಷ ಕಳೆದರೂ ಶಂಕರ್ ನಾಗ್ ಅವರು ಆರ್.ಕೆ.ನಾರಾಯಣ್ ಅವರ ಪರಿಕಲ್ಪನೆಯನ್ನು ದೃಶ್ಯದ ಮೂಲಕ ಹೊರ ತಂದು ನೀಡಿದ ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರು ಇಂದಿಗೂ ಎಲ್ಲರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದು, ಹೂವಿನ ಜೊತೆ ನಾರು ಸ್ವರ್ಗ ಸೇರಿತು ಎಂಬ ಮಾತಿನಂತೆ ನಾವು ಈ ಅದ್ಭುತ ವ್ಯಕ್ತಿಗಳಿಂದ ಜನರಿಗೆ ಪರಿಚಿತರಾಗಿದ್ದೇವೆ.

–ಮಾಸ್ಟರ್ ಮಂಜುನಾಥ್, ನಟ

ಕ್ರಾಂತಿಗಳಿಗೆ ಸಾಹಿತ್ಯ, ಬರವಣಿಗೆಗಳು ಸ್ಫೂರ್ತಿ



ಸಾಹಿತ್ಯ ಮತ್ತು ಬರವಣಿಗೆಯ ಮೂಲಕ ಕ್ರಾಂತಿಗಳು ನಡೆದಿದ್ದು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಾಲಗಂಗಾಧರ್ ತಿಲಕ್, ಅಂಬೇಡ್ಕರ್, ಗಾಂಧೀಜಿ ಮತ್ತು ನೆಹರು ಅವರಿಗೂ ಬರವಣಿಗೆಗಳು ಹೋರಾಟಕ್ಕೆ ಸ್ಫೂರ್ತಿ ನೀಡಿತ್ತು. ಆರ್.ಕೆ.ನಾರಾಯಣ್ ಅವರ ಸ್ವಾಮಿ ಮತ್ತು ಸ್ನೇಹಿತರು, ದಿ ಇಂಗ್ಲಿಷ್ ಟೀಚರ್ ಸೇರಿದಂತೆ ಅನೇಕ ಕೃತಿಗಳು ನೆನಪಿಗೆ ಬರುತ್ತವೆ. ಅವರು ಕಾಲವಾದ ನಂತರವು ಅವರನ್ನು ನಾವು ನೆನಪಿಸಿಕೊಳ್ಳುತ್ತಿದ್ದೇವೆ ಎಂದರೆ ಅದು ಸಾವಿನಾಚೆಗೂ ಅವರು ತಮ್ಮ ಕೃತಿಗಳ ಮೂಲಕ ಬದುಕಿದ್ದಾರೆ ಎಂದರ್ಥ. ಇತ್ತೀಚಿನ ದಿನಗಳಲ್ಲಿ ದುಡ್ಡು ಮಾಡುವ ಧಾವಂತ ಹೇಗಿದೆ ಎಂದರೆ ಅದನ್ನು ನಾವೇ ತಿನ್ನಲು ಸಾಧ್ಯವಿಲ್ಲ. ಆದರೆ, ಸಾವಿನ ನಂತರವು ನಾವು ಉಳಿಯುವುದು ನಾವು ಮಾಡಿದ ಕೆಲಸದ ಮೂಲಕ ಮಾತ್ರ. ಹಾಗೇ ಆರ್.ಕೆ.ನಾರಾಯಣ್ ಅವರು ತಮ್ಮ ಕೃತಿ ಮೂಲಕ ಬದುಕಿದ್ದಾರೆ. ಅವರನ್ನು ನಾನು ಭೇಟಿ ಮಾಡಿಲ್ಲ. ಆದರೆ, ಎಸ್.ಎಲ್.ಭೈರಪ್ಪ ಅವರನ್ನು ಅನೇಕ ಬಾರಿ ಭೇಟಿ ಮಾಡಿದ್ದೇನೆ. ಪ್ರತಿ ಭೇಟಿಯಿಂದ ಅವರ ಅನುಭವದ ಲಾಭವನ್ನು ಪಡೆದುಕೊಳ್ಳುತ್ತೇನೆ. ಅವರಿಗೆ ತಿಳಿದಿರುವುದನ್ನು ಕೃತಿ ಮೂಲಕ ಈ ನಾಡಿಗೆ ಏನಾದರೂ ಬಿಟ್ಟು ಹೋಗಬೇಕು ಎಂಬುದು ಮಾತ್ರ ಅವರ ಆಸೆಯಾಗಿದೆ. ಜ್ಞಾನಪೀಠ, ಸರಸ್ವತಿ ಸಮ್ಮಾನ್ ಪ್ರಶಸ್ತಿಗಳು ಯಾವುದು ಉಳಿಯುವುದಿಲ್ಲ. ನಾವು ಏನು ಸಾಹಿತ್ಯ ರಚನೆ ಮಾಡಿರುತ್ತೇವೆ ಅದು ಮಾತ್ರ ಉಳಿಯುವುದು. ಅದು ಮಾತ್ರ ಮುಂದಿನ ಪೀಳಿಗೆಗೆ ತಲುಪುದು ಎಂದು ಪದೇ ಪದೆ ಹೇಳುತ್ತಿರುತ್ತಾರೆ. ಹಾಗೇ ಆರ್.ಕೆ. ನಾರಾಯಣ್ ಅವರ ಸಾಹಿತ್ಯ ನೂರಾರು ವರ್ಷ ಮುಂದಿನ ತಲೆಮಾರಿಗೆ ತಲುಪುತ್ತದೆ. – ಪ್ರತಾಪ್ ಸಿಂಹ, ಸಂಸದ

ಮಾಲ್ಗುಡಿ ಡೇಸ್ ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆ ನಿರ್ಮಾಣ ಹೆಮ್ಮೆ ವಿಚಾರ



ನಟ ಮಾಸ್ಟರ್ ಮಂಜುನಾಥ್ ಮೆಚ್ಚುಗೆ

ಮೈಸೂರು, ಫೆ.26(ಜಿಎ)–ಅದ್ಭುತ ಕೃತಿಕಾರ ಆರ್.ಕೆ. ನಾರಾಯಣ್ ಅವರ ಪರಿಕಲ್ಪನೆಯ ಮಾಲ್ಗುಡಿ ಡೇಸ್ ಕೃತಿಯು ಶಂಕರ್‌ನಾಗ್ ಅವರ ನಿರ್ದೇಶನದಲ್ಲಿ ಮೂಡಿ ಬಂದ ಧಾರಾವಾಹಿಯಲ್ಲಿ ನಾನು ನಟಿಸಿದ ಪಾತ್ರದ ಈ ರೀತಿ ಪ್ರತಿಮೆ ನಿರ್ಮಾಣವಾಗಿರುವುದು ಒಂದು ಹೆಮ್ಮೆ, ಪುಣ್ಯದ ಜೊತೆಗೆ ಅತ್ಯಂತ ಸಂತೋಷವಾಗುತ್ತದೆ ಎಂದು ನಟ ಮಾಸ್ಟರ್ ಮಂಜುನಾಥ್ ತಿಳಿಸಿದರು.

ಮೈಸೂರಿನ ಯಾದವಗಿರಿಯ ಜಾಯ್ ಫ್ಯಾಕ್ಟರಿ ಸರ್ಕಲ್‌ನಲ್ಲಿ ಸಿದ್ಧಾರ್ಥ ಗ್ರೂಪ್ಸ್ ವತಿಯಿಂದ ನಿರ್ಮಿಸಿರುವ ಆರ್.ಕೆ.ನಾರಾಯಣ್ ಅವರ ಕೃತಿ ಮಾಲ್ಗುಡಿ ಡೇಸ್‌ನ ಸ್ವಾಮಿ ಮತ್ತು ಸ್ನೇಹಿತರ ಪ್ರತಿಮೆಯನ್ನು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು ಮಾಲ್ಗುಡಿ ಡೇಸ್ ಧಾರಾವಾಹಿಯಲ್ಲಿ ನಟಿಸಿದ ಅನುಭವವನ್ನು 'ಮೈಸೂರು ಮಿತ್ರ' ಬಳಿ ಹಂಚಿಕೊಂಡರು.

ಮಿತ್ರ : ನಿಮಗೆ ಮೈಸೂರಿನ ನಂಟಿದಿಯಾ?

ಮಂಜುನಾಥ್ : ಮೈಸೂರಿಗೆ ಅನೇಕ ಬಾರಿ ಭೇಟಿ ನೀಡಿದ್ದೇನೆ. ಸುಮಾರು 80ರ ದಶಕದ ಸಂದರ್ಭದಲ್ಲಿ ಮೈಸೂರಿನಲ್ಲಿಯೇ ಅನೇಕ ಚಿತ್ರಗಳ ಚಿತ್ರೀಕರಣ ನಡೆಯುತ್ತಿತ್ತು. ಸಿದ್ಧಾರ್ಥ ಹೋಟೆಲ್ ನನಗೆ ಮೈಸೂರಿನ ಮನೆಯಾಗಿತ್ತು ಪ್ರತಿ ಬಾರಿ ಬಂದಾಗ ಅಲ್ಲಿಯೇ ಉಳಿದುಕೊಳ್ಳುತ್ತಿದ್ದೆ. ಇಲ್ಲಿ ನನಗೆ ಅನೇಕ ಸ್ನೇಹಿತರಿದ್ದು, ಆಗಾಗ ಬರುತ್ತಿರುತ್ತೇನೆ. ಆದರೆ, ಇತ್ತೀಚಿನ ದಿನಗಳಲ್ಲಿ ಟ್ರಾಫಿಕ್ ಜಾಮ್ ಹೆಚ್ಚಾದ ನಂತರ ಬರುವುದು ಕಡಿಮೆ ಆಯಿತು.

ಮಿತ್ರ : ಪ್ರತಿಮೆ ನಿರ್ಮಾಣ ಬಗ್ಗೆ ನಿಮ್ಮ ಅನಿಸಿಕೆ

ಮಂಜುನಾಥ್ : 36 ವರ್ಷ ಆದರೂ ಅವರ ನೆನಪಿನಲ್ಲಿ ಈ ರೀತಿ ಪ್ರತಿಮೆ ನಿರ್ಮಾಣವಾಗುವುದು ಎಂದರೆ, ಒಂದು ಹೆಮ್ಮೆ ವಿಚಾರವಾಗಿದ್ದು, ಅದರಲ್ಲಿಯೂ ಆರ್.ಕೆ.ನಾರಾಯಣ್ ಅವರ ನಿವಾಸದ ಬಳಿಯೇ ಈ ರೀತಿ ನಿರ್ಮಾಣವಾಗಿರುವುದು ಮತ್ತೊಂದು ಸಂತಸದ ಸಂಗತಿಯಾಗಿದೆ.

ಮಿತ್ರ : ರಾಜ್ಯದ ಬೇರೆ ಎಲ್ಲಾದರೂ ಈ ರೀತಿ ಇದೆಯಾ?

ಮಂಜುನಾಥ್ : ಎಲ್ಲಿಯೂ ಈ ರೀತಿ ಪ್ರತಿಮೆ ನಿರ್ಮಾಣವಾಗಿಲ್ಲ. ಆದರೆ, ಇಲ್ಲಿ ಪ್ರತಿಮೆ ನಿರ್ಮಾಣವಾಗುತ್ತದೆ ಎಂಬ ಸುದ್ದಿ ಬಂದ ನಂತರ ರೈಲ್ವೇ ಅವರು ಅರಸಾಳಿನಲ್ಲಿ ಮಾಲ್ಗುಡಿ ಮ್ಯೂಸಿಯಂ ನಿರ್ಮಾಣ ಮಾಡಿದ್ದಾರೆ. ಅದು ಮರದಲ್ಲಿ ನಿರ್ಮಾಣವಾಗಿದೆ. ರಾಜ್ಯದಲ್ಲಿ ಇದೇ ರೀತಿ ವಿವಿಧ ಕ್ಷೇತ್ರದ ಸಾಧಕರಿದ್ದಾರೆ. ಅವರ ಪ್ರತಿಮೆಗಳನ್ನು ನಿರ್ಮಿಸಿದರೆ, ಯುವ ಪೀಳಿಗೆಗೆ ಸ್ಫೂರ್ತಿಯಾಗಲಿದೆ.

ಮಿತ್ರ : ಮಾಲ್ಗುಡಿ ಡೇಸ್ ಬಗ್ಗೆ ನಿಮ್ಮ ನೆನಪು

ಮಂಜುನಾಥ್ : ಆ ಕಾಲದಲ್ಲಿ ದೂರದರ್ಶನ ಅದು ಇದನ್ನು ಮಾಡಲು ಕನ್ನಡಿಗರಿಂದ ಸಾಧ್ಯನಾ ಎಂಬ ಅನುಮಾನಗಳು ಮೂಡಿತ್ತು. ಆದರೆ, ಶಂಕರ್‌ನಾಗ್ ಅವರು ಇಂಗ್ಲಿಷ್, ಹಿಂದಿ ಬಾರದವರಿಂದ ಅತ್ಯುತ್ತಮವಾಗಿ ನಿರ್ದೇಶನ ಮಾಡುವ ಮೂಲಕ ಎಲ್ಲರ ಮನ ಗೆದ್ದರು. ಹಾಗೇ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳಿಸಿತು.

ಮಿತ್ರ : ಸ್ವಾಮಿ ಮತ್ತು ಸ್ನೇಹಿತರ ಸಂಪರ್ಕ ಇದೆಯಾ?

ಮಂಜುನಾಥ್ : ನಮ್ಮ ಸ್ನೇಹ ಹಾಗೇ ಇದೆ ಆಗಾಗ ಭೇಟಿಯಾಗುತ್ತೇವೆ ಎಲ್ಲರೂ ಬೇರೆ ಕ್ಷೇತ್ರದಲ್ಲಿದ್ದಾರೆ. ಕೊರೊನಾ ನಂತರ ಭೇಟಿಗಳು ಕಡಿಮೆ ಆಗಿದೆ. ಫೋನ್‌ಗಳಲ್ಲಿ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ.

ಮಿತ್ರ : ಮತ್ತೆ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತೀರಾ?

ಮಂಜುನಾಥ್ : ವಿದ್ಯಾಭ್ಯಾಸ ಮುಗಿಸಿಕೊಂಡು ಮತ್ತೆ ಚಿತ್ರರಂಗಕ್ಕೆ ವಾಪಸ್ ಆಗಬೇಕು ಎಂದು ನಿರ್ಧಾರ ಮಾಡಿದ್ದೆ. ಆದರೆ, ವಿದ್ಯಾಭ್ಯಾಸದ ನಂತರ ಗಮನ ಪೂರ್ತಿ ಕೆಲಸ ಕಡೆ ಹೆಚ್ಚಾಗಿ ಚಿತ್ರರಂಗದಿಂದ ದೂರಾದೆ. ಈಗ ನಟನೆ ಮೇಲೆ ಆಸಕ್ತಿ ಇಲ್ಲ. ಆದರೆ, ಶಂಕರ್‌ನಾಗ್ ಅವರ ಸ್ಫೂರ್ತಿಯಿಂದ ನಿರ್ದೇಶನದ ಮೇಲೆ ಆಸಕ್ತಿ ಇದ್ದು, ಮುಂದಿನ ದಿನಗಳಲ್ಲಿ ಮತ್ತೆ ನಿರ್ದೇಶನದ ಮೂಲಕ ಚಿತ್ರರಂಗಕ್ಕೆ ಮರಳುತ್ತೇನೆ.

ಶ್ರೀ ರಾಮಕೃಷ್ಣ ಪರಮಹಂಸರ ಜಯಂತಿ, ಜಾತ್ರಾ ಮಹೋತ್ಸವಕ್ಕೆ ತೆರೆ


ವೈಭವದ ಮೆರವಣಿಗೆ, ಜನರನ್ನು ಆಕರ್ಷಿಸಿದ ಜಾನಪದ ಕಲಾತಂಡಗಳು

ಮೈಸೂರು, ಫೆ.26(ಎಸ್‌ಪಿಎನ್)–ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಶಾರದಾದೇವಿ ಹಾಗೂ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದ ಭಾವಚಿತ್ರಗಳ ಮೆರವಣಿಗೆಯೊಂದಿಗೆ ಶ್ರೀ ರಾಮಕೃಷ್ಣ ಪರಮಹಂಸರ 188ನೇ ಜಯಂತಿ ಹಾಗೂ ಆರು ದಿನಗಳ ಜಾತ್ರಾ ಮಹೋತ್ಸವ ಭಾನುವಾರ ತೆರೆಬಿದ್ದಿತು.

ಮೈಸೂರು ಶ್ರೀ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ, ಶ್ರೀ ರಾಮಕೃಷ್ಣ ಸೇವಾ ಸಂಘ ಮತ್ತು ವಿವೇಕ ಬಳಗ, ಶ್ರೀ ರಾಮಕೃಷ್ಣ ಸೇವಾ ಬಳಗ, ಶ್ರೀ ರಾಮಕೃಷ್ಣಾಶ್ರಮ ಹಾಗೂ ರಾಮಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ಸಹಯೋಗದೊಂದಿಗೆ ಆಯೋಜಿಸಿದ್ದ ಆರು ದಿನಗಳ ಜಾತ್ರಾ ಮಹೋತ್ಸವದ ಕೊನೆಯ ದಿನವಾದ ಭಾನುವಾರ ಈ ಮೂರು ಭಾವಚಿತ್ರವಿದ್ದ ರಥಗಳಿಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿ, ಶುಭ ಹಾರೈಸಿದರು.

ಶಾರದಾದೇವಿನಗರದಿಂದ ಶ್ರೀ ಶಾರದಾದೇವಿ ಭಾವಚಿತ್ರ, ವಿವೇಕಾನಂದ ನಗರ ವೃತ್ತದಿಂದ ಸ್ವಾಮಿ ವಿವೇಕಾನಂದ ಭಾವಚಿತ್ರವಿದ್ದ ರಥ ಮೆರವಣಿಗೆಯ ಮೂಲಕ ವಿಶ್ವಮಾನವ ಜೋಡಿ ರಸ್ತೆಯ ಗದಾಧರ ವೃತ್ತ ತಲುಪಿ, ಅಲ್ಲಿಂದ ಶ್ರೀರಾಮಕೃಷ್ಣ ಪರಮಹಂಸ ರಥ ಸೇರಿದಂತೆ ಮೂವರು ಮಹಾತ್ಮರ ಭಾವಚಿತ್ರವಿದ್ದ ರಥಗಳು ಒಟ್ಟಿಗೆ ರಾಮಕೃಷ್ಣನಗರದ ರಾಮಕೃಷ್ಣ ಪರಮಹಂಸರ ವೃತ್ತ ತಲುಪಿತು. ಈ ಮೆರವಣಿಗೆಗೆ ಜಾನಪದ ತಂಡಗಳು ಭಾಗವಹಿಸಿ ಮೆರಗು ತಂದವು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಶ್ರೀ ರಾಮಕೃಷ್ಣ ಪರಮಹಂಸರ ಜಯಂತಿಯನ್ನು ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ನೇತೃತ್ವದಲ್ಲಿ ಚೆನ್ನಾಗಿ ಮೂಡಿಬಂದಿದೆ. ಈ ಭಾಗದ ಜನರಿಗೆ ಶ್ರೀ ರಾಮಕೃಷ್ಣ ಪರಮಹಂಸರು ಹಾಗೂ ಸ್ವಾಮಿ ವಿವೇಕಾನಂದರ ಆದರ್ಶಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಗುಣಗಾನ ಮಾಡಿದರು.



ಶ್ರೀ ರಾಮಕೃಷ್ಣ ಪರಮಹಂಸರ ಮಾನವೀಯ ಮೌಲ್ಯಗಳು ಇಂದಿನ ಪೀಳಿಗೆಗೆ ಆದರ್ಶವಾಗಲಿ. ಸುಂದರ ಮೈಸೂರು ನಗರವನ್ನು ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅಭಿವೃದ್ಧಿ ಕಾರ್ಯಗಳನ್ನು ಇಂದಿಗೂ ಜನ ನೆನೆಯುತ್ತಾರೆ. ಏಕೆಂದರೆ, ಅವರು ನಿರ್ಮಿಸುವಲ್ಲಿ ಮೈಸೂರು ನಗರ ಇಂದು ದೊಡ್ಡದಾಗಿ ಬೆಳೆದಿದೆ. ಡಿ.ಮಾದೇಗೌಡರು ಸಿಐಟಿಬಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಈ ರಾಮಕೃಷ್ಣ ನಗರ, ಶಾರದಾದೇವಿ ನಗರ, ವಿವೇಕಾನಂದ ನಗರ, ನಿವೇದಿತಾ ನಗರ ಸುಂದರ ಬಡಾವಣೆ ನಿರ್ಮಿಸಲಿ ಕಾರಣಕರ್ತರಾಗಿದ್ದಾರೆ. ಅವರ ನಂತರ ಬಂದವರು ಇದರ ಕಡೆ ಗಮನ ನೀಡದೆ ಇದ್ದುದರಿಂದ ಮೈಸೂರು ಹೊರವಲಯದ ಬಡಾವಣೆಗಳು ಮೂಲಸೌಕರ್ಯದಿಂದ ವಂಚಿತವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಿರ್ಣಯ ಬೆಂಬಲಿಸಿದ ಜಿಟಿಡಿ: ಇದಕ್ಕೂ ಮುನ್ನ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರು ಮಂಡಿಸಿದ ಶ್ರೀ ರಾಮಕೃಷ್ಣ ಪರಮಹಂಸರ ಪ್ರತಿಮೆ ಇರುವ ಸ್ಥಳದ ಆಸು–ಪಾಸಿನ ಹತ್ತಾರು ಎಕರೆ ಜಾಗವನ್ನು ಕಾಯ್ದಿರಿಸಿ. ಈ ಜಾಗದಲ್ಲಿ ಆಧ್ಯಾತ್ಮಿಕ ಶ್ರದ್ಧಾಕೇಂದ್ರ ಮತ್ತು ಪ್ರವಾಸೋದ್ಯಮ ಸ್ಥಳವನ್ನಾಗಿ ಪರಿವರ್ತಿಸುವಂತೆ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರಿಗೆ ಮನವಿ ಸಲ್ಲಿಸಿದ್ದರು. ನಂತರ ಸಭೆಯ ಮೂಲಕ ಮಂಡಿಸಿದ್ದ ಪ್ರಸ್ತಾವನೆಗೆ ಶಾಸಕ ಜಿ.ಟಿ.ದೇವೇಗೌಡರು, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಬೆಂಬಲ ಸೂಚಿಸಿದರು.

ವಿವೇಕ ಸ್ಮಾರಕ ಬೇಗ ಲೋಕಾರ್ಪಣೆಯಾಗಲಿ: ನಂತರ ದತ್ತಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಮಾತನಾಡಿ, ಮೈಸೂರಿನಲ್ಲಿ ಅನೇಕ ಶ್ರದ್ಧಾ ಕೇಂದ್ರಗಳು, ಆಧ್ಯಾತ್ಮಿಕ ಕೇಂದ್ರಗಳು ಸ್ಥಾಪಿತವಾಗಿ, ಮೈಸೂರಿನ ಕೀರ್ತಿಯನ್ನು ವಿಶ್ವಮಟ್ಟದಲ್ಲಿ ಹೆಚ್ಚಿಸಿವೆ. ಇದರ ಜೊತೆಗೆ ಮೈಸೂರಿನಲ್ಲಿ ಸ್ಥಾಪಿತವಾಗಿರುತ್ತಿರುವ ಸ್ವಾಮಿ ವಿವೇಕಾನಂದರ ಹೆಸರಿನ ಸ್ಮಾರಕ ಅದಷ್ಟು ಬೇಗ ಲೋಕಾರ್ಪಣೆಗೊಂಡು ಮೈಸೂರಿನ ಕೀರ್ತಿ ಆಧ್ಯಾತ್ಮ ಕ್ಷೇತ್ರದಲ್ಲಿ ಇಮ್ಮಡಿಗೊಳ್ಳಲಿ ಎಂದು ಆಶಿಸಿದರು.

ಶ್ರೀ ರಾಮಕೃಷ್ಣ ಪರಮಹಂಸರು, ಕಾಳಿಯ ಉಪಾಸಕರು, ಯಾರಾದರೂ ಅವರನ್ನು ದೇವರನ್ನು ನೋಡಿದ್ದೀರಾ? ದೇವರನ್ನು ತೋರಿಸಿರುವಿರಾ? ಎಂದು ಕೇಳಿದರೆ, ಹೌದು ಎನ್ನುತ್ತಿದ್ದರು. ಏಕೆಂದರೆ, ಶುದ್ಧ ಮನಸ್ಸಿನಿಂದ ಕಾಳಿಮಾತೆಯನ್ನು ಪೂಜಿಸಿ ಒಲಿಸಿಕೊಂಡಿದ್ದ ಪುಣ್ಯಪುರುಷರು. ಸ್ವಾಮಿ ವಿವೇಕಾನಂದ ಸೇರಿದಂತೆ ಅನೇಕ ಶಿಷ್ಯಕೋಟಿಗೆ ಸನ್ಯಾಸ ದೀಕ್ಷೆಕೊಟ್ಟು, ನಮ್ಮ ಪರಂಪರೆಯನ್ನು ದೇಶ–ವಿದೇಶಗಳಲ್ಲಿ ಪ್ರಚಾರಕ್ಕೆ ನಾಂದಿ ಹಾಡಿದರು. ಒಟ್ಟಿನಲ್ಲಿ ಇಂದಿನ ಪೀಳಿಗೆಗೆ ರಾಮಕೃಷ್ಣ ಪರಮಹಂಸರ ತತ್ವಾದರ್ಶಗಳನ್ನು ಪಾಲಿಸಲಿ ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಮೈಸೂರು ಶ್ರೀರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಮೈಸೂರು ಆದಿಚುಂಚನಗಿರಿ ಶಾಖ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ವೀರೇಶಾನಂದ ಸರಸ್ವತಿ, ಮೈಸೂರು ದತ್ತಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅಮೃತಾನಂದ ಮಯಿ ಮಠದ ಆತ್ಮ ನಿರತಾಮೃತ ಚೈತನ್ಯ, ಅರೇಬಿಕ್ ಉಪನ್ಯಾಸಕ ಮೌಲಾನಾ ಮುಫ್ತಿ ಸೈಯದ್ ತಾಜುದ್ದೀನ್, ನಗರ ಪಾಲಿಕೆ ಸದಸ್ಯೆ ನಿರ್ಮಲ ಹರೀಶ್, ಸುಯೋಗ ಆಸ್ಪತ್ರೆಯ ಅಧ್ಯಕ್ಷರು, ಹೃದ್ರೋಗ ತಜ್ಞರೂ ಆದ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯದರ್ಶಿ ದೊರೈರಾಜ್, ಸಂಚಾಲಕರಾದ ಬಸವಣ್ಣ, ಬಸವಲಿಂಗಪ್ಪ, ಬಸವರಾಜ್, ಗೋಪಿನಾಥ್ ಉಪಸ್ಥಿತರಿದ್ದರು.



ಇತ್ತೀಚೆಗೆ ಕಾಂಗ್ರೆಸ್ ಸೇರಿದ ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರನ್ನು ವರುಣ ಕ್ಷೇತ್ರದ ಮುಖಂಡರಾದ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ನಂಜಪ್ಪ, ಗ್ರಾಮ ಪಂಚಾಯ್ತಿ ಅಧ್ಯಕ್ಷ ಅಭಿ, ಪರಶಿವಮೂರ್ತಿ, ಲಕ್ಷ್ಮಣ್, ಗುರುಮಲ್ಲು ಅಭಿನಂದಿಸಿದರು.

ಮೂರನೇ ಪುಟದಿಂದ

ಶಿವಮೊಗ್ಗ ಏರ್‌ಪೋರ್ಟ್ ಲೋಕಾರ್ಪಣೆ

ಅವರ ವಿಶೇಷ ವಿಮಾನವು ವಿಮಾನ ನಿಲ್ದಾಣಕ್ಕೆ ಮೊದಲು ಇಳಿಯಲಿದೆ ಎಂದು ಯಡಿಯೂರಪ್ಪ ಅವರ ಪುತ್ರ, ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಹೇಳಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಭಾರತೀಯ ವಾಯು ಸೇನೆಯ ವಿಮಾನ ಪ್ರಯೋಗಿಕವಾಗಿ ಲ್ಯಾಂಡಿಂಗ್ ಆಗಿರುವ ವಿಡಿಯೋ ಕ್ಲಿಪ್‌ನೊಂದಿಗೆ ತಮ್ಮ ಟ್ವಿಟರ್ ನಲ್ಲಿ ಹಂಚುಕೊಂಡು ಮಾಹಿತಿ ನೀಡಿರುವ ಶಿವಮೊಗ್ಗ ಸಂಸದರು, ಮೊದಲ ಪ್ರಾಯೋಗಿಕ ವಿಮಾನವು ಶಿವಮೊಗ್ಗಕ್ಕೆ ಬಂದಿಳಿದಿದೆ. ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಜೀ ಅವರು ಫೆ.27ರಂದು ಈ ಹೊಸದಾಗಿ ನಿರ್ಮಿಸಲಾದ ವಿಮಾನ ನಿಲ್ದಾಣದಲ್ಲಿ ಇಳಿಯುವ ಮೂಲಕ ಶಿವಮೊಗ್ಗ ವಿಮಾನ ನಿಲ್ದಾಣವನ್ನು ಉದ್ಘಾಟಿಸಲಿದ್ದಾರೆ. ಬನ್ನಿ, ನಾವೆಲ್ಲರೂ ಈ ಐತಿಹಾಸಿಕ ಕ್ಷಣದಲ್ಲಿ ಭಾಗಿಗಳಾಗೋಣ ಎಂದಿದ್ದಾರೆ. ಕೇಂದ್ರದ ನಾಗರಿಕ ವಿಮಾನಯಾನ ಸಚಿವರಾದ ಜ್ಯೋತಿರಾದಿತ್ಯ ಸಿಂಧಿಯಾ ಅವರು ಕೂಡ ಕನ್ನಡಲ್ಲೇ ಟ್ವೀಟ್ ಮಾಡಿ, ಕರ್ನಾಟಕದ ಜನರೇ, ನಿಮ್ಮ ಭೂಮಿಗೆ 148ನೇ ವಿಮಾನ ನಿಲ್ದಾಣ ದೊರೆಯುತ್ತಿದ್ದು, ಬನ್ನಿ ನಮ್ಮೊಂದಿಗೆ ಕೈಜೋಡಿಸಿ ಎಂದಿದ್ದಾರೆ. ಸಚಿವ ಟ್ವೀಟ್‌ಗೆ ಸಂಸದ ಬಿ.ವೈ.ರಾಘವೇಂದ್ರ ಅವರು ಧನ್ಯವಾದ ಸಲ್ಲಿಸಿದ್ದಾರೆ.

ಕೇಂದ್ರದ ನಾಗರಿಕ ವಿಮಾನಯಾನ ಸಚಿವರಾದ ಶ್ರೀ ಜ್ಯೋತಿರಾದಿತ್ಯ ಮಾಧವ ರಾವ್ ಸಿಂಧಿಯಾ ಅವರು ಶಿವಮೊಗ್ಗಕ್ಕೆ ವಿಮಾನ ನಿಲ್ದಾಣ ದೊರೆತಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ರಾಜ್ಯದ ಜನತೆಯು ಪರವಾಗಿ ಅವರಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದಿದ್ದಾರೆ.

ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ಸ್ಥಾಪನೆ ಮಲೆನಾಡಿನ ಜನರ ಬಹುದಿನಗಳ ಕನಸಾಗಿತ್ತು. ಇದೀಗ ಆ ಕನಸು ನನಸಾಗುತ್ತಿದ್ದು, ಶಿವಮೊಗ್ಗದ ಕುವೆಂಪು ವಿಮಾನ ನಿಲ್ದಾಣಕ್ಕೆ ಮೊದಲ ವಿಮಾನ ಆಗಮಿಸಿದೆ. ಭಾರತೀಯ ವಾಯು ಸೇನೆಯ ವಿಮಾನ ಪ್ರಯೋಗಿಕ ಪರೀಕ್ಷೆಯ ಭಾಗವಾಗಿ ಏರ್‌ಪೋರ್ಟ್‌ಗೆ ಬಂದಿಳಿದಿದೆ. ವಿಮಾನ ಲ್ಯಾಂಡಿಂಗ್ ಆಗುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಫೆಬ್ರವರಿ 27ರಂದು ಪ್ರಧಾನಿ ನರೇಂದ್ರ ಮೋದಿ ಅವರು ಶಿವಮೊಗ್ಗ ವಿಮಾನ ನಿಲ್ದಾಣವನ್ನು ಲೋಕಾರ್ಪಣೆ ಮಾಡಲಿದ್ದಾರೆ. 600 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಏರ್‌ಪೋರ್ಟ್ ನಿರ್ಮಾಣ ಮಾಡಲಾಗಿದೆ.

ಪ್ರಧಾನಿ ಮೋದಿ ಮೆಚ್ಚುಗೆ

ಮೆಚ್ಚುಗೆ ವ್ಯಕ್ತಪಡಿಸಿರುವುದು ಅತ್ಯಂತ ಸಂತಸವನ್ನುಂಟು ಮಾಡಿದೆ ಎಂದರು. ದೇಶ ಭಕ್ತಿ ಸ್ಪರ್ಧೆಯಲ್ಲಿ ಆಂಧ್ರಪ್ರದೇಶದ ವಿಜಯ ದುರ್ಗ ಪ್ರಥಮ ಸ್ಥಾನ ಪಡೆದರೆ, ಉಸ್ತಾದ್ ಬಿಸ್ಮಿಲ್ಲಾ ಖಾನ್ ಪುರಸ್ಕಾರವನ್ನು ಪ್ರತಿಭಾವಂತ ಕಲಾವಿದರಿಗೆ ಘೋಷಿಸಲಾ ಯಿತು. ನಮ್ಮ ದೇಶದಲ್ಲಿ ಕಣ್ಮರೆಯಾಗಿ, ಜನರ ಮನಸ್ಸು ಮತ್ತು ಹೃದಯದಿಂದ ದೂರ ಸರಿದಿರುವ ಇಂತಹ ಅನೇಕ ಶ್ರೇಷ್ಠ ಸಂಪ್ರದಾಯಗಳನ್ನು ಈಗ ಸಾರ್ವಜನಿಕ ಸಹಭಾಗಿತ್ವದ ಶಕ್ತಿಯಿಂದ ಪುನರುಜ್ಜೀವಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಮೋದಿ ಹೇಳಿದರು.

ಮನೀಶ್ ಸಿಸೋಡಿಯಾ ಬಂಧನ

2022ರಂದು ರದ್ದುಗೊಳಿಸಿತ್ತು. ಹೊಸ ನೀತಿಯನ್ನು ರದ್ದುಗೊಳಿಸಿದ ನಂತರ, ದೆಹಲಿ ಸರ್ಕಾರವು ನವೆಂಬರ್ 17, 2020ರ ಮೊದಲು ಜಾರಿಗೆ ತಂದ ಹಳೆಯ ಅಬಕಾರಿ ಆಡಳಿತವನ್ನು ಮರಳಿ ತರಲು ನಿರ್ಧರಿಸಿತ್ತು. ಅಬಕಾರಿ ನೀತಿ ಜಾರಿಯಾದ ತಕ್ಷಣ ಇಡಿ ಮತ್ತು ಸಿಬಿಐ ಉಪ ಮುಖ್ಯಮಂತ್ರಿ ಮನೆ ಸೇರಿದಂತೆ ದೇಶದ ವಿವಿಧೆಡೆ ಹಲವು ಬಾರಿ ಶೋಧ ನಡೆಸಿದ್ದವು. 2022ರ ಜುಲೈ 22ರಂದು, ಎಲ್‌ಜಿ ವಿಕೆ ಸಕ್ಸೇನಾ ಅವರು ಹೊಸ ಅಬಕಾರಿ ನೀತಿಯ ಅನುಷ್ಠಾನದಲ್ಲಿ ಆಪಾದಿತ ನಿಯಮ ಉಲ್ಲಂಘನೆ ಮತ್ತು ಕಾರ್ಯವಿಧಾನದ ಲೋಪಗಳ ಕುರಿತು ಸಿಬಿಐ ತನಿಖೆಗೆ ಶಿಫಾರಸು ಮಾಡಿದ್ದರು. ಮದ್ಯದ ಪರವಾನಗಿದಾರರಿಗೆ ಅನಗತ್ಯ ಪ್ರಯೋಜನಗಳನ್ನು ನೀಡಲಾಗಿದೆ ಎಂದು ದೆಹಲಿಯ ಮುಖ್ಯ ಕಾರ್ಯದರ್ಶಿಯ ವರದಿ ಹೇಳಿತ್ತು. ಆಪಾದಿತ ಅಕ್ರಮಗಳಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳ ಪಾತ್ರದ ಬಗ್ಗೆ ತನಿಖೆ ನಡೆಸುವಂತೆ ಎಲ್‌ಜಿ ದೆಹಲಿಯ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದರು. ಚಿಲ್ಲರೆ ಮದ್ಯದ ಪರವಾನಗಿಗಾಗಿ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ 'ಕಾರ್ಟೆಲೈಸೇಶನ್' ಬಗ್ಗೆ ದೂರು ನೀಡಲಾಗಿದೆ.

ಈ ವರ್ಷವೂ ಕೃಪಾಂಕ

ಕಂಡಿರದ ಕಾರಣ 2023ರಲ್ಲಿಯೂ ಕೃಪಾಂಕ ನೀಡಲು ನಿರ್ಧರಿಸಲಾಗಿದೆ. 2019ರ ವರೆಗೆ ಶೇಕಡ 5 ರಷ್ಟು ಕೃಪಾಂಕಗಳನ್ನು ನೀಡಲಾಗುತ್ತಿತ್ತು ಎಂದು ಮಂಡಳಿ ಮಾಹಿತಿ ನೀಡಿದೆ. ಕೊರೊನಾ ಕಾರಣದಿಂದ 2020 ರಲ್ಲಿ ಪರೀಕ್ಷೆ ನಡೆಸರಲಿಲ್ಲ. 2021ರಲ್ಲಿ ಎಲ್ಲರನ್ನೂ ಪಾಸ್ ಮಾಡಲಾಗಿತ್ತು. 2022ರಲ್ಲಿ ಶೇಕಡ 10ರಷ್ಟು ಕೃಪಾಂಕ ನೀಡಲಾಗಿತ್ತು. ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಈ ವರ್ಷವೂ ಕೃಪಾಂಕ ಸಿಗಲಿದೆ. ಒಟ್ಟಾರೆ ಕನಿಷ್ಠ ಅಂಕ ಗಳಿಸುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಶೇ.10ರಷ್ಟು ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಶೇ.5ರಷ್ಟು ಕೃಪಾಂಕ ನೀಡಲು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯನಿರ್ಣಯ ಮಂಡಳಿ ನಿರ್ಣಯಿಸಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ 6 ವಿಷಯಗಳ ಪೈಕಿ ಮೂರು ವಿಷಯಗಳಲ್ಲಿ ಉತ್ತೀರ್ಣರಾಗಿದ್ದರೆ, ಉಳಿದ ಮೂರು ವಿಷಯಗಳಿಗೆ ಕನಿಷ್ಠ 1 ರಿಂದ ಗರಿಷ್ಠ 26 ಅಂಕಗಳವರೆಗೆ ಕೃಪಾಂಕ ದೊರೆಯಲಿದೆ. ಆದರೆ, 625 ಅಂಕಗಳಿಗೆ ಕನಿಷ್ಠ 219 ಅಂಕ ಪಡೆಯಲು ಬೇಕಾಗುವ ಅಂಕಗಳನ್ನು ನೀಡಲಿದೆ. 100 ಅಂಕಗಳ ಪರೀಕ್ಷೆಯಲ್ಲಿ 20 ಅಂಕಗಳಿಗೆ ಮೌಖಿಕ ಮತ್ತು 80 ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ. 80 ಅಂಕಗಳಿಗೆ ಕನಿಷ್ಠ 28 ಅಂಕಗಳನ್ನು ಪಡೆದಿರಬೇಕು. ಆದರೆ, ಕೆಲವು ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಕೆಲವು ವಿಷಯಗಳಲ್ಲಿ ಕಡಿಮೆ ಅಂಕಗಳನ್ನು ಪಡೆದಿರುತ್ತಾರೆ. ಇತಂಹ ವಿದ್ಯಾರ್ಥಿಗಳಿಗೆ ಕೃಪಾಂಕ ನೆರವಾಗಲಿದೆ. ಉತ್ತೀರ್ಣರಾಗಲು ಕನಿಷ್ಠ ಅರ್ಹತಾ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಯನ್ನು ಅನುತ್ತೀರ್ಣ ಮಾಡಬಾರದು ಎಂಬ ಉದ್ದೇಶದಿಂದ ಈ ವಿದ್ಯಾರ್ಥಿಸ್ನೇಹಿಯಾಗಿ ನಿಯಮ ರೂಪಿಸಲಾಗಿದೆ. ಅದೇ ರೀತಿ ದ್ವಿತೀಯ ಪಿಯುಸಿಯಲ್ಲಿ 600 ಅಂಕಗಳಿಗೆ ಕನಿಷ್ಠ 210 ಅಂಕಗಳನ್ನು ಪಡೆದಿರುವ ವಿದ್ಯಾರ್ಥಿ ಎರಡು ವಿಷಯಗಳಲ್ಲಿ ಶೇಕಡ 5 ರಷ್ಟು ಅಂದರೆ ತಲಾ 5 ಅಂಕ ಸೇರಿ ಗರಿಷ್ಠ 10 ಅಂಕಗಳನ್ನು ಪಡೆಯಬಹುದಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯನಿರ್ಣಯ ಮಂಡಲಿ ತಿಳಿಸಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

EXCELLENT TRAINING FOR DOGS ALL BREEDS
- Obedience • Nature
- Home Manners
- Guarding (Security)
- Show Training & also Boarding Dogs.

Vinod, Dog Trainer Mob: 9148512354

ಡ್ರೈವರ್ ಬೇಕಾಗಿದ್ದಾರೆ
ಟಾಟಾ ಏಸ್‌ಗೆ ಡ್ರೈವರ್ ಬೇಕಾಗಿದ್ದಾರೆ. ವೇತನ ರೂ. 15,000/– ರಿಂದ 20,000/–
Mob: 9741827359

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas 9379699229

Global Fortune Creators REQUIRED
Required smart energetic experienced male & females for the following posts: * Product Trainer * Accountant * Back Office Manager * Digital Marketing * Graphic Designer * Sales Executives. Required qualifications Degree and above. Good communication skills. Fluency in Kannada, English, Hindi and preferably in Tamil and Telugu. Interested candidates kindly contact at below mentioned WhatsApp number.
Ph: +91 9880921166

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಯಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297

4–ಸ್ಟಾರ್ ರೆಸಾರ್ಟ್
ಫ್ರಂಟ್ ಆಫೀಸ್, ರೂಮ್ ಬಾಯ್, ಅಡುಗೆ ಮನೆ ಕೆಲಸ, ಫುಡ್ ಸರ್ವೀಸ್ ಕೆಲಸ ನಿರ್ವಹಿಸಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
9606035310, 08236295533

Sudarshan Saur SOLAR WATER HEATER
ATTRACTIVE OFFER ಸೇಲ್ಸ್&ಸರ್ವಿಸ್ 10 ವರ್ಷಗಳ ಗ್ಯಾರಂಟಿ Bajaj Finserv Available
SUNZONE SOLAR SYSTEM Vishwamanava Double Road, Kuvempunagar, Mysuru
9845175443

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

SLD Excellent Public School KHB Colony, Yelachanahalli, Yelwala
WANTED
* PRINCIPAL (M.A. / M.Ed.)
* ASSISTANT HEAD MISTRESS (M.A., M.Sc., B.Ed.)
(Experience and English fluency must)
WALK-IN INTERVIEW
Monday to Saturday from 11.30 am to 4 pm. For more information contact:
9538787037, +916361586017

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ಓಂ ಶ್ರೀ ಪ್ರತ್ಯಂಗಿರ ದೇವಿ ಜ್ಯೋತಿಷ್ಯ ಮಂದಿರ
ದೈವಜ್ಞ ಪಂಡಿತ್ ಶ್ರೀ ಚಂದ್ರಪ್ಪ ಗುರೂಜಿ
ನಿಮ್ಮ ಸಮಸ್ಯೆಗಳಾದ:– ವಿದ್ಯೆ, ಉದ್ಯೋಗ, ಮದುವೆ ಯೋಗ, ಸಂತಾನ ಭಾಗ್ಯ, ವ್ಯಾಪಾರದಲ್ಲಿ ತೊಂದರೆ, ಹಣಕಾಸಿನ ಸಮಸ್ಯೆ, ಪ್ರೀತಿ ಪ್ರೇಮ ವಿಚಾರ, ವಾಮಚಾರ ದೋಷ, ಶತ್ರುನಾಶ, ಭೂಮಿ ವಿಚಾರ, ಇನ್ನೂ ಯಾವುದೇ ಸಮಸ್ಯೆ ಇದ್ದರೂ ಇವರನ್ನೊಮ್ಮೆ ಸಂಪರ್ಕಿಸಿ. ವಿಳಾಸ: ಕ್ಯಾತನಹಳ್ಳಿ ರಸ್ತೆ, ಅಹಲ್ಯಾದೇವಿ ದೇವಸ್ಥಾನದ ಪಕ್ಕ ಆರತಿ ಉಕ್ಕಡ
9686648422

ಬೇಕಾಗಿದ್ದಾರೆ
ಶ್ರೀ ರಾಯಲ್ ವಾರಿಯರ್ ಬೇಕರಿ ಕೌಂಟರ್‌ಗೆ ಸೇಲ್ಸ್‌ಮ್ಯಾನ್‌ಗಳು ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ಊಟ, ವಸತಿ ಉಚಿತವಾಗಿ ದೊರಕುತ್ತದೆ ಈಗಲೇ ಸಂಪರ್ಕಿಸಿ:
9019876412
8431458760

ಸೈಟುಗಳು ಮಾರಾಟಕ್ಕಿವೆ
APPROVED DTCP
ವರುಣ ಹತ್ತಿರ 30X40 ಅಳತೆಯ ನಿವೇಶನಗಳು ಮಾರಾಟಕ್ಕಿವೆ. 80% ಬ್ಯಾಂಕ್ ಲೋನ್ ದೊರೆಯುತ್ತದೆ. Rs. 18 Lakh Onwards
Contact: 9945111044

SLD Excellent Public School KHB Colony, Yelachanahalli, Yelwala
ಬೇಕಾಗಿದ್ದಾರೆ
* ಶಾಲೆಯನ್ನು ನೋಡಿಕೊಳ್ಳಲು ಸೆಕ್ಯೂರಿಟಿ ಹಾಗೂ ಆಯಾ ಕೆಲಸಕ್ಕೆ ಗಂಡ–ಹೆಂಡತಿ ಬೇಕಾಗಿದ್ದಾರೆ. (ವಸತಿ ಸೌಲಭ್ಯ ವಿರುತ್ತದೆ). ಸಂಬಳ: 16,000/–. * ಸ್ಕೂಲ್ ಬಸ್ ಓಡಿಸಲು ಡ್ರೈವರ್ ಬೇಕಾಗಿದ್ದಾರೆ. (Heavy DL, experience must) (ವಸತಿ ಸೌಲಭ್ಯವಿರುತ್ತದೆ). ಸಂಬಳ: 12,000/–.
+916361586017, +919538787037
ಸಂದರ್ಶನ ಸಮಯ: 11.30 ರಿಂದ 3.30 ರವರೆಗೆ. (ಸೋಮವಾರದಿಂದ ಶನಿವಾರ)

BOOKING START
ಕೇಶವಮೂರ್ತಿ ಲೇಔಟ್
ಶ್ರೀನಗರ ರೈಲ್ವೆ ಗೇಟ್ ಹಿಂಭಾಗದ ದಡದಹಳ್ಳಿ ರಸ್ತೆ ವಿಮಾನ ನಗರ (ಸರ್ಕಾರಿ ನೌಕರರ ಗೃಹ ನಿರ್ಮಾಣ) ಹತ್ತಿರ, ಗೂರೂರು, ಕಸಬಾ ಹೋಬಳಿ, ಮೈಸೂರು ತಾಲ್ಲೂಕು.
just 3.5 KM jp nagar ringroad
30x40, 30x50
MUDA APPROVED
SK DEVELOPER & PROPERTIES
Office: Teachers layout opp. JP nagar Rirgroad, Mysore.
8453531221

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಪ್ರಮಾಣ ಪತ್ರ
ಕರ್ನಾಟಕ ರಾಜ್ಯ, ಮೈಸೂರು ನಗರ–570 015, ಬನ್ನಿಮಂಟಪ 2ನೇ ಹಂತ, ಹುಡ್ಕೋ, ಮೊದಲನೇ ಮಹಡಿ, ಮನೆ ನಂ. 7 ರಲ್ಲಿ ವಾಸವಾಗಿರುವ ಶ್ರೀ ಸೈಯದ್ ಸಲೀಂ ಅಹ್ಮದ್ ರವರ ಮಗ ಸಾದಿಕ್ ಎಸ್ (Sadiq S) ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಸರಿಯಾದ ಹೆಸರು ಸಾದಿಕ್ ಎಸ್ (Sadiq S) ಎಂಬುದಾಗಿರುತ್ತದೆ. ನನ್ನ ಪಾಸ್‌ಪೋರ್ಟ್ ನಂ. N8507813 ಆಗಿದ್ದು, ಈ ಪಾಸ್‌ಪೋರ್ಟ್‌ನಲ್ಲಿ ನನ್ನ ಹೆಸರು ಸಾದಿಕ್ (Sadiq) ಎಂದು ನಮೂದಾಗಿರುತ್ತದೆ. ನಾನು ಇನ್ನು ಮುಂದೆ ನನ್ನ ಎಲ್ಲಾ ದಾಖಲಾತಿಯಲ್ಲಿ ಮತ್ತು ವ್ಯವಹಾರಗಳಲ್ಲಿ ನನ್ನ ಹೆಸರು ಸಾದಿಕ್ ಎಸ್ (Sadic S) ಎಂದು ನೋಟರಿ ಸಿ.ಆರ್. ಸೀತಾರಾಮ್‌ರವರ ಮುಂದೆ ದಿನಾಂಕ 25–02–2023ರಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಸಾದಿಕ್ ಎಸ್

WANTED
Immediately Join for
Telecallers - Male: 8 Posts
Female: 10 Posts
Receptionist : 2 Posts
Tamil, Telugu, Hindi Language
Salary-15k
Meghana H R
Mob: 7829803426

FOR SALE
1) 30x40, 13 lakhs sites in Defence Apartment Near Kote Road
2) 28 Guntas Land in Varkodu
3) Bannur Road Commercial 50x80
4) 17x60, 3 BHK Kamakshi Hospital Near Saraswathipuram.
4) 30x40 Duplex House Srirampura
5) 40x60 N/E Corner Aravind Nagar
9035990359, 9538690359

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್ ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾದೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾದೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರಿಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ನಿಮ್ಮ ಹೊಲಿಗೆ ಯಂತ್ರ ಕೆಟ್ಟಿದೆಯೇ?
ನಮ್ಮಲ್ಲಿ ಎಲ್ಲಾ ತರಹದ ಹೊಲಿಗೆ ಯಂತ್ರಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. Home Service also available ಇಂದೇ ಸಂಪರ್ಕಿಸಿ:
ಗಾನವಿ ಇಂಟರ್ ನ್ಯಾಷನಲ್. #22/2, ಚಂದ್ರಗುಪ್ತ ರಸ್ತೆ, ಸಬರ್ಬ್ ಬಸ್ ಸ್ಟಾಂಡ್ ಹತ್ತಿರ, ಮೈಸೂರು
6360737581 / 9620486665
0821-2591111

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

100% ಕೆಲಸ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma Any Degree Pass / Fail ಆದವರಿಗೆ packing, Helper, Checking, front office, Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ESI+PF+OT ಯೊಂದಿಗೆ, ಸಂಬಳ: 14,000 – 38000 ಷರತ್ತು ಅನ್ವಯ. ಸಂಪರ್ಕಿಸಿ.
9980346131 / 9008603466

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೋರಿಯರ್ ಸೌಲಭ್ಯವಿದೆ)
87490 98879

WANTED
Office Admin, Telecallers, Data Entry Operators, Accountant, BE(Civil), Good Salary + Incentives.
Call: Vrunda (HR)
9035560544

ಮನೆ ಮಾರಾಟಕ್ಕಿದೆ
ಮೈಸೂರು ಸಿಟಿ, ಟಿನರಸೀಪುರ ಮುಖ್ಯ ರಸ್ತೆ ಕೆಎಸ್‌ಆರ್‌ಟಿಸಿ ಬಡಾವಣೆ ನಾಡನಹಳ್ಳಿ ಸೈಟ್ ನಂ.42 ರಲ್ಲಿ 30x40, ಅಡುಗೆ ಮನೆ, ದೇವರ ಮನೆ, 2BHK ರೂಂ ಸೋಲಾರ್ ಮತ್ತು ಗೀಜರ್ ಸೌಲಭ್ಯದಿಂದ ಉತ್ತಮ ಗುಣಮಟ್ಟದಿಂದ ನಿರ್ಮಿಸಿರುವ ಮೂಡದಿಂದ ಅನುಮೋದನೆ ಹೊಂದಿರುತ್ತದೆ. ಹಾಗೂ ಬ್ಯಾಂಕು ಸಾಲ ಸೌಲಭ್ಯವಿದೆ. ಕ್ಲಿಯರ್ ದಾಖಲಾತಿಯಿರುತ್ತದೆ ಮತ್ತು ತಕ್ಷಣ ನೊಂದಣಿ ಮಾಡಿಕೊಡಲಾಗುತ್ತದೆ. ಆಸಕ್ತರು ಈ ಪೋನ್ ನಂಬರಿಗೆ ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳುವುದು.
8971379542 / 9480421332

ಸಪ್ತಪದಿ ಮ್ಯಾರೇಜ್ ಬ್ಯೂರೋ (ರಿ)
BE / MBA / M.Tech / MD / MS / Phd ಮುಂತಾದ India /USA / UK / Australia / Germany ಯ ವಧು – ವರರ ಮಾಹಿತಿಗಾಗಿ ಸಂಪರ್ಕಿಸಿ:
8088776211 / 9880147473
ಜಯನಗರ, ಮೈಸೂರು.
Web : http:// www.sapthapadhimatrimony.com

ರೈಲಿನಲ್ಲಿ ಕಾಶಿ ಯಾತ್ರೆ
10/4/2023 & 10/5/2023. ರಿಂದ ರೈಲಿನಲ್ಲಿ 13 ದಿನಗಳ ಪ್ರವಾಸ, ಸ್ಥಳಗಳು : ದೆಹಲಿ, ಆಗ್ರಾ, ಮಥುರಾ, ಬೃಂದಾವನ, ಕಾಶಿ, ಸಾರನಾಥ್, ಅಯೋಧ್ಯಾ, ಅಲಹಾಬಾದ್, ಸೀತಾಮಡಿ, ಗಯಾ, ಬುದ್ಧ ಗಯಾ, ಇತ್ಯಾದಿ.ಊಟ, ಕೊಠಡಿ, ರೈಲು ಟಿಕೆಟ್, ಬಸ್. ಎಲ್ಲಾ ಸೇರಿರುತ್ತದೆ. ಒಂದು ಸೀಟ್ ಗೆ 17000/– ಕರ್ನಾಟಕ ಸರ್ಕಾರದಿಂದ ಕಾಶಿ ಯಾತ್ರೆಗೆ 5000 ರೂ ಅನುದಾನ ದೊರೆಯುತ್ತದೆ. ಸಂಪರ್ಕಿಸಿ. ಮಾರ್ವೆಲ್ ಟೂರ್ಸ್ ಮತ್ತು ಟ್ರಾವೆಲ್ಸ್, ನಜರ್ ಬಾದ್, ಮೈಸೂರು.
9342118682 / 9449128682

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು, ಬೆಳವಾಡಿ, ಇಲವಾಲ ಏರಿಯಾದಲ್ಲಿ 50 ವರ್ಷದೊಳಗಿನ ಓದಲು, ಬರೆಯಲು ತಿಳಿದಿರುವ ತಕ್ಷಣ ಸೇರ ಬಯಸುವ ಅಭ್ಯರ್ಥಿಗಳು ಬೇಕಾಗಿದ್ದಾರೆ.
1) ಸೆಕ್ಯೂರಿಟಿ ಗಾರ್ಡ್ಸ್ (12 hrs, Salary: 11,000/-)
2) ಹೌಸ್ ಕೀಪಿಂಗ್ (Duty 9 hrs, Salary: 10,000/-)
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9739199355

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು ಹಾಗೂ ಚಾಮರಾಜನಗರದಲ್ಲಿ ಕಾರ್ಯ ನಿರ್ವಹಿಸಲು 35 ವರ್ಷ ಒಳಗಿನ ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. 8 Hours ಮತ್ತು 26 days, ESI, PF ಸೌಲಭ್ಯವಿರುತ್ತದೆ. ಸಂಬಳ: 17,000 - 19,000, ವಿದ್ಯಾರ್ಹತೆ: SSLC Pass, PUC. ಸಂಪರ್ಕಿಸಿ:
9110469657

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳು ಪ್ರದೇಶದ ಕಂಪನಿಗಳಿಗೆ ಸೆಕ್ಯೂರಿಟಿ ಗಾರ್ಡ್‌ಗಳು ಡ್ರೈವರುಗಳು, ಹೆಲ್ಪರುಗಳು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು ಬೇಕಾಗಿದ್ದಾರೆ. ಸಂಪರ್ಕಿಸಿ:
7795285485
8105249880

ಮಿನರಲ್ ವಾಟರ್ ಪ್ಲಾಂಟ್ ಬಾಡಿಗೆಗೆ
#3412, ಹೇಮಾವತಿ ಕಛೇರಿ ಹಿಂಭಾಗ ಸರ್ಕಾರಿ ಐಟಿಐ ಕಾಲೇಜ್ ಪಕ್ಕ, ಶಾಂತಿನಗರ, ಪಾಂಡವಪುರ – 571434, 4400 ಚದರ ಅಡಿ. (40x110) ಆಯಾಮ 1 ಕ್ಯಾಬಿನ್, 2 ಲ್ಯಾಬ್, 1 R.O ಘಟಕ (ಪ್ರತಿ 2000 ಲೀಟರ್ ಗಂಟೆಗೆ) ಎಲ್ಲಾ ಸೌಲಭ್ಯಗಳೊಂದಿಗೆ ಸಂಪರ್ಕಿಸಿ:
9538545678 / 9448166798

WANTED
We are hiring as a AGENCY PARTNER for a Reputed company. We are offering Fixed Salary 10,000 upto 30,000/- PF, ESI + Incentives (Sales Related Experience) for more details kindly Contact:
9538396133 / 7208872090

HOUSE FOR SALE
35x50, 3BHK East Facing as per Vasthu, Independent House, J P Nagar, Mysuru. (Brokers Excuse)
9964835110

ಹೊಸ ಮನೆ ಮಾರಾಟಕ್ಕಿದೆ
40x70 ಮೂಡಾ ಅಪ್ರೂವ್, 30 ಚದುರ ಮನೆ, 4BHK ಹಾಗೂ 60x75 ರೆವಿನ್ಯೂ ನಿವೇಶನ ಮಾರಾಟಕ್ಕಿದೆ. Near ಜೆ.ಪಿ.ನಗರ ರಿಂಗ್ ರಸ್ತೆ.
9342288281

ಮನೆ ಊಟ, ಶುಚಿ ರುಚಿ
ಒಬ್ಬರಿಗೆ 30 ದಿನಕ್ಕೆ 3 ಟೈಂ ಊಟ, ತಿಂಡಿ ಸೇರಿ, 2,500/– ರೂ ಮಾತ್ರ ಸಸ್ಯಹಾರಿ ಊಟಕ್ಕೆ ಪ್ರತಿ ಮಧ್ಯಾಹ್ನ ಚಪಾತಿ or ರಾಗಿಮುದ್ದೆ ಇರುತ್ತದೆ. ಹಾಗೂ ಬಾಳೆಹಣ್ಣು, ಮಜ್ಜಿಗೆ ಇರುತ್ತದೆ. ಪ್ರತಿ ಭಾನುವಾರ ಸಿಹಿ ಊಟ ಇರುತ್ತದೆ.
9632599094

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ತೆಲಗು, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 8000/–
8150005111

WANTED
For reputed Restaurant in Mysuru. Receptionist, Cashier, Captains, Waiters, Cleaners, Ladies for Washing. Call:
8747811110

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ.
ಒಂದು ಚದರಕ್ಕೆ 1,80,000/–
ಷರತ್ತು ಅನ್ವಯ
ಸ್ವಾಮಿ ಎಂ., ಸಿವಿಲ್ ಕಂಟ್ರಾಕ್ಟರ್
9945442361 / 9380885787

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 45, ಸಂಬಳ: 14,500/–, ESI, PF ಒಳಗೊಂಡು Weekoff ಹಾಗೂ 3 Shift ಗಳು ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದುಕೊಳ್ಳತಕ್ಕದ್ದು, ಯಾವುದೇ ರೀತಿ Fee ಪಡೆಯುವುದಿಲ್ಲ. ಸ್ಥಳ: CIPET ಕಾಲೇಜು ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು.
9986874584

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary + OT, 17,800/- to 68,000/-
9035022290
9035022214

ರಾಗಿ ಮುದ್ದೆ ಮೆಷನ್ ಮಾರಾಟಕ್ಕಿದೆ
CFTRI ನಿಂದ ಖರೀದಿಸಲಾಗಿದ್ದು, ರಾಗಿ ಮುದ್ದೆ ಮಾಡುವ ಮೆಷನ್ ಮಾರಾಟಕ್ಕಿದೆ. ರೂ. 6 ಲಕ್ಷದ್ದು 50% ರೂ.3 ಲಕ್ಷಗಳು ಮಾತ್ರ
9342288281

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹೆಂಗಸರು / ಪುರುಷರು ಬೇಕಾಗಿದ್ದಾರೆ. ಸಂಬಳ: ರೂ.12,000/–
9886430901

ಮೈಸೂರು ಮ್ಯಾರೇಜ್ ಬ್ಯೂರೋ
ಕೂರ್ಗಿ ಸುಂದರ ಶ್ರೀಮಂತ ಬಿಜನೆಸ್ ಒಬ್ಬಳೇ ವಿಧವೆಗೆ ಸುಂದರ ಶ್ರೀಮಂತ ಕೋಟ್ಯಾಧೀಶ್ವರ ವರ ವಿಧುರ, ವಿಚ್ಛೇದಿತರು ಲೈಫ್ ಪಾರ್ಟನರ್ ಬೇಕು. ಜಾತಿ ಅಭ್ಯಂತರ ಇಲ್ಲ ನೇರ ಸಂಪರ್ಕಿಸಿ.
ಡಾ. ಗುರೂಜಿ
9448229184 / 7899625268

SRI SAI DRIVING SCHOOL DATTAGALLI
WANTED
Female office Assistant.
Contact: Puneeth
9964653362
Driving Classes available in New Tata Zest Car

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ವೇತನ :– 9000/– ರಿಂದ 10,000/–. ಸ್ಥಳಗಳು: ಬೋಗಾದಿ, ಬನ್ನಿಮಂಟಪ, ಶ್ರೀರಾಂಪುರ.
ಹೆಡ್ ಗಾರ್ಡ್ಸ್
ವೇತನ: 11,000/– ರಿಂದ 12,000/–. ಸ್ಥಳಗಳು: ಹೆಬ್ಬಾಳ, ಹೂಟಗಳ್ಳಿ, ಆಲನಹಳ್ಳಿ. ಸಂಪರ್ಕಿಸಿ:
6361740914

KIND ATTENTION LAYOUT DEVELOPERS
Your Layout Project for Exclusive marketing of ready or ongoing project. Call:
8904955469

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಮತ್ತು ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಮಹಿಳೆಯರು / ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 8000 ರಿಂದ 10 ಸಾವಿರದವರೆಗೆ, (ಅನುಭವದ ಆಧಾರದ ಮೇಲೆ). ಸಮಯ ಬೆಳಿಗ್ಗೆ 9.30 ಯಿಂದ ರಾತ್ರಿ 9.00 ರವರೆಗೆ. ಸ್ಥಳ: ಹೆಬ್ಬಾಳ್, ಅಗ್ರಹಾರ ಹಾಗೂ ನಜರ್‌ಬಾದ್, ಮೈಸೂರು. ಸ್ಥಳೀಯರಿಗೆ ಆದ್ಯತೆ. ಸಂಪರ್ಕಿಸಿ:
9986322444 / 9986311444

ಬೇಕಾಗಿದ್ದಾರೆ
ವೃದ್ಧರನ್ನು ಆರೈಕೆ ಮಾಡಲು ಸೇವಾ ಮನೋಭಾವವಿರುವ ಯುವಕ, ಯುವತಿಯರು & ಮಹಿಳೆಯರು ಬೇಕಾಗಿದ್ದಾರೆ. (ಹೊಸಬರಿಗೆ ತರಬೇತಿ ನೀಡಲಾಗುತ್ತದೆ). ಸಂಬಳ: 16,000 ದಿಂದ ಪ್ರಾರಂಭ. ಸಂಪರ್ಕಿಸಿ:
9916905188

CONVERTED LAND FOR SALE
9 Acres of converted land situated at Bannur Road Near Lake. Suitable for Layout, Villa Projects Geuine Buyers. Call:
8904855469

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದು ಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ದಿಂದ 18,000 (ESI, PF ಸೌಲ್ಯ ಇರುತ್ತದೆ)
9845011609 / 9845010281

ಬಾಡಿಗೆಗಿದೆ
1) 2 ರೂಂವುಳ್ಳ ಮನೆ ಬಾಡಿಗೆಗಿದೆ.
2) 3 ರೂಂವುಳ್ಳ ಹೊಸಮನೆ ಎಸ್.ಬಿ.ಎಂ ಲೇಔಟ್ ಬೋಗಾದಿ ಪಕ್ಕ ಇದೆ.
ನಂ.18/ಬಿ, 6ನೇ ಮುಖ್ಯ ರಸ್ತೆ, 8ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–9.
9483051207

ಸುವರ್ಣಯಾತ್ರ
ಕಾಶಿ ಪ್ರವಾಸ 2, ಜ್ಯೋತಿರ್ಲಿಂಗ ಪ್ರವಾಸ ಸೇರಿ 7 ದಿನಗಳು 25/03/2023. ಪುರಿ ಜಗನ್ನಾಥ ಪ್ರವಾಸ, ಶಕ್ತಿ ಪೀಠ, ಇತರೆ 4 ದಿನಗಳು 25/03/2023 ಗುಜರಾತ್ ಪ್ರವಾಸ ಸೋಮನಾಥ್. ನಾಗೇಶ್ವರ ಇತರೆ 8 ದಿನಗಳು 06/04/2023
9019462508 / 9008381022

MYTHRI TRAVELS
24/03/23, 3 ಜ್ಯೋತಿರ್ಲಿಂಗ ಸಹಿತ ಶಿರಡಿ ಯಾತ್ರೆ 4 ದಿನಗಳು ಶನಿಸಿಂಗಪುರ, ಎಲ್ಲೋರ, ಗೃಷ್ಣೇಶ್ವರ ಜ್ಯೋತಿರ್ಲಿಂಗ, ಶಿರಡಿ, ನಾಸಿಕ್, ತ್ರಯಂಬಕೇಶ್ವರ ಜ್ಯೋತಿರ್ಲಿಂಗ, ಭೀಮಾಶಂಕರ ಜ್ಯೋತಿರ್ಲಿಂಗ
9482421499 / 8660756131

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಟೈಲರಿಂಗ್ ವೃತ್ತಿ ಯಾವುದೇ ಜಾತಿ, ಧರ್ಮಕ್ಕೆ ಸೇರಿದ್ದಲ್ಲ

ಕೌಶಲ ಗೊತ್ತಿರುವ ಎಲ್ಲರೂ ಮಾಡಬಹುದು: ಶಾಸಕ ಎಂ.ಅಶ್ವಿನ್ ಕುಮಾರ್



ತಿ.ನರಸೀಪುರ, ಫೆ.26– ಟೈಲರಿಂಗ್ ವೃತ್ತಿಯನ್ನು ಇಂತಹವರೇ ಮಾಡಬೇಕೆನ್ನುವ ನಿರ್ಬಂಧವಿಲ್ಲ. ವೃತ್ತಿ ಯಾವುದೇ ಜಾತಿ, ಧರ್ಮಕ್ಕೆ ಸೇರಿದ್ದಲ್ಲ. ಕೌಶಲ ಗೊತ್ತಿರುವ ಎಲ್ಲರೂ ಮಾಡಬಹುದು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಭವನದಲ್ಲಿ ತಿ.ನರಸೀಪುರ ತಾಲೂಕು ಟೈಲರ್‌ಗಳ ಸಂಘದಿಂದ ಭಾನುವಾರ ನಡೆದ ಟೈಲರ್‌ಗಳ ಸಮಾವೇಶದಲ್ಲಿ ಸಂಘದ ಸದಸ್ಯರಿಗೆ ಗುರುತಿನ ಚೀಟಿ ವಿತರಿಸಿ ಅವರು ಮಾತನಾಡಿದರು.

ಟೈಲರ್‌ಗಳು ನಿಮ್ಮ ಕುಲ ಕಸುಬನ್ನು ಕೀಳರಿಮೆಯಿಂದ ಕಾಣಬೇಡಿ. ಆಯ್ಕೆ ಮಾಡಿಕೊಂಡಿರುವ ವೃತ್ತಿ ಬಗ್ಗೆ ಸಂತಸಪಡಿ. ಸರ್ಕಾರ ಕಾರ್ಮಿಕರ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದೆ. ಆದರೆ, ಅದನ್ನು ಸರಿಯಾಗಿ ನಿಮಗೆ ಮುಟ್ಟಿಸುವ ಕೆಲಸವಾಗುತ್ತಿಲ್ಲ. ಸರ್ಕಾರದ ಸೌಲಭ್ಯಗಳನ್ನು ಈ ಸಂಘಟನೆ ಮೂಲಕ ಪಡೆದು ನಿಮ್ಮ ಬದುಕಿನ ತಾಪತ್ರಯಗಳಿಂದ ಹೊರಬನ್ನಿ ಎಂದರು.

ಟೈಲರ್ ಸಂಘದವರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಟೈಲರ್‌ಗಳ ಶ್ರೇಯೋಭಿವೃದ್ಧಿಗೆ ಸರ್ಕಾರ ಸೇರಿದಂತೆ ಎನ್‌ಜಿಓಗಳು ಪ್ರೋತ್ಸಾಹ ನೀಡಬೇಕಿದೆ. ಸಂಘದ ಅಭಿವೃದ್ಧಿಗೆ ಸದಾ ಸಿದ್ಧ. ಮುಂದಿನ ದಿನಗಳಲ್ಲಿ ನಿಮ್ಮೊಂದಿಗೆ ಚರ್ಚಿಸಿ ಸಮುದಾಯ ಭವನಕ್ಕೆ ನಿವೇಶನ ನೀಡುವ ಕುರಿತಂತೆ ಪರಿಶೀಲಿಸುತ್ತೇನೆ. ಸರ್ಕಾರದಿಂದ ಸಂಘಕ್ಕೆ ದೊರಕಬಹುದಾದ ಸೌಲಭ್ಯಗಳನ್ನು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ಸಂಘದ ರಾಜ್ಯಾಧ್ಯಕ್ಷ ನಾರಾಯಣ್ ಮಾತನಾಡಿ, ಟೈಲರ್‌ಗಳ ವೃತ್ತಿ ಕಷ್ಟಕರವಾಗಿದ್ದು, ಯಾವುದೇ ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿಲ್ಲ. ನಾವು ಹೆಚ್ಚಾಗಿ ನಿಂತು ಕಾಯಕ ಮಾಡುವುದರಿಂದ ಹೆಚ್ಚಿನ ಆರೋಗ್ಯ ಸಮಸ್ಯೆ ಉಂಟಾಗುತ್ತವೆ. ಹಾಗಾಗಿ ನಮಗೆ ಆರೋಗ್ಯ ವಿಮೆ ಸೌಲಭ್ಯ ದೊರಕಿಸಿಕೊಡಬೇಕಿದೆ. ಇತ್ತೀಚಿನ ದಿನಗಳಲ್ಲಿ ವೃತ್ತಿಗೆ ಬರುವವರ ಸಂಖ್ಯೆ ಕಡಿಮೆಯಾಗುತ್ತಿದೆ ರೆಡಿಮೇಡ್ ಬಟ್ಟೆಗಳ ಉದ್ಯಮ ತಲೆ ಎತ್ತಿರುವುದರಿಂದ ಸಮಸ್ಯೆ ಎದುರಾಗಿದೆ. ಹಾಗಾಗಿ ರೆಡಿಮೇಡ್ ಬಟ್ಟೆಗೆ ಸೆಸ್ ಹಾಕಿ ಅದರಲ್ಲಿ ಬಡ ಟೈಲರ್‌ಗಳಿಗೆ ಭದ್ರತೆ ಒದಗಿಸಲು ಸರ್ಕಾರ ಮುಂದಾಗಬೇಕು ಎಂದರು. ಮೆಕ್ಯಾನಿಕ್‌ಗಳು, ಆಟೋದವರು, ನೇಕಾರರು, ರೈತರಿಗೆ ನೀಡಿರುವಂತೆ ನಮಗೂ ಆರೋಗ್ಯ ವಿಮೆ ದೊರಕಿಸಿಕೊಡಲು ಸರ್ಕಾರ ಮುಂದಾಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಟೈಲರ್‌ಗಳನ್ನು ಸನ್ಮಾನಿಸಲಾಯಿತು. ಸಂಘದ ಸದಸ್ಯರಿಗೆ ಗುರುತಿನ ಚೀಟಿ ವಿತರಿಸಲಾಯಿತು. ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

> ತಿ.ನರಸೀಪುರ ತಾಲೂಕಿನ ಟೈಲರ್‌ಗಳು ಒಗ್ಗಟ್ಟಾದರೆ ಸರ್ಕಾರದ ಸೌಲಭ್ಯಗಳನ್ನು ನೇರವಾಗಿ ಪಡೆಯಬಹುದು. ಇಲ್ಲದಿದ್ದರೆ ನಮ್ಮ ಟೈಲರ್ ಸಮೂಹ ಹಿಂದೆ ಬೀಳುತ್ತದೆ. ನಾವು ಸಂಘಟಿತರಾಗಲು ಇಷ್ಟು ವರ್ಷ ಬೇಕಾಯಿತು. ಸರ್ಕಾರದಿಂದ ನಮಗೆ ಸೌಲಭ್ಯ ದೊರೆಯುವರೆಗೂ ಹೋರಾಟ ಮಾಡೋಣ.
> –ಬಿ.ಮಹದೇವಸ್ವಾಮಿ, ತಾಲೂಕು ಟೈಲರ್ ಅಧ್ಯಕ್ಷ.

ಪುರಸಭಾಧ್ಯಕ್ಷ ಟಿ.ಎ.ನಂಜುಂಡಸ್ವಾಮಿ, ಉಪಾಧ್ಯಕ್ಷೆ ನಾಗರತ್ನ, ಶಸ್ತ್ರಚಿಕಿತ್ಸಾ ತಜ್ಞ ಡಾ.ರೇವಣ್ಣ, ಸಂಘದ ಗೌರವಾಧ್ಯಕ್ಷ ಮಾಧುರಾಜು, ಉಪಾಧ್ಯಕ್ಷರಾದ ಎಂ.ಎಲ್.ಮಹದೇವು, ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ರಾಜಬುದ್ಧಿ, ಖಜಾಂಚಿ ನಾಗರಾಜು, ಸಂಘದ ನಿರ್ದೇಶಕರಾದ ಹರೀಶ್, ಮಹೇಶ್, ನಾಗರಾಜು, ನಸೀರ್, ಶಿವಶಂಕರ್, ರಂಗಸ್ವಾಮಿ, ಬಸವರಾಜು, ವಸಂತ, ಸೋಮು, ಸತೀಶ್, ಹೆಮ್ಮಿಗೆ ವೆಂಕಟೇಶ್, ನಾಗರಾಜು, ಸುರೇಶ್, ಗುರುರಾಜ್, ಶ್ರೀರಾಂಪುರ ಮಾಧು, ಸುರೇಶ್, ಉಪನ್ಯಾಸಕ ಕುಮಾರಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ನಂ.ಗೂಡಲ್ಲಿ ರಾಘವೇಂದ್ರಸ್ವಾಮಿಗಳ ವರ್ಧಂತಿ



ನಂಜನಗೂಡು, ಫೆ.26– ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ಶ್ರೀರಾಘವೇಂದ್ರ ಸ್ವಾಮಿಗಳ ಪ್ರತೀತ ಸನ್ನಿಧಾನದಲ್ಲಿ ರಾಘವೇಂದ್ರ ಸ್ವಾಮಿಗಳ ವರ್ಧಂತಿ ಮಹೋತ್ಸವ ಅಂಗವಾಗಿ ಭಾನುವಾರ ವಿಶೇಷ ಧಾರ್ಮಿಕ ಪೂಜಾ ಕೈಂಕರ್ಯ ನೆರವೇರಿತು.

ಶ್ರೀಗುರುಗಳ ಅಷ್ಟಾಕ್ಷರ ಮಂತ್ರದೊಂದಿಗೆ ಮೃತ್ಯುಂಜಯ ಶಾಂತಿ ಹೋಮ ನಡೆಯಿತು. ನಂತರ ರಾಯರ ವಿಗ್ರಹಕ್ಕೆ ಪುಷ್ಪಾಲಂಕಾರ ಮಾಡಿ ಮಹಾಮಂಗಳಾರತಿ ಮಾಡಲಾಯಿತು. ಮಧ್ಯಾಹ್ನ ಪಂಚ ಬೃಂದಾವನದಲ್ಲಿ ಮಹಾ ದಾಸೋಹ ನಡೆಯಿತು.

ಸಂಜೆ ಅಲಂಕೃತ ರಥದಲ್ಲಿ ರಾಯರ ಉತ್ಸವ ಮೂರ್ತಿಯನ್ನು ಕೂರಿಸಿ ಮಂಗಳವಾದ್ಯದೊಂದಿಗೆ ಮಠದ ಒಳಾವರಣದಲ್ಲಿ ರಥೋತ್ಸವ ಜರುಗಿತು. ವಿದ್ವಾನ್ ಭಾನುಸಿಂಹ ಅವರಿಂದ ದಾಸರ ವಾಣಿ ಸಂಗೀತ ಕಾರ್ಯಕ್ರಮ ನಡೆಯಿತು.

ಪ್ರತೀಕ ಸನ್ನಿಧಾನದಲ್ಲಿ ಕಳೆದ 6 ದಿನಗಳಿಂದ ಶ್ರೀಗುರು ವೈಭವೋತ್ಸವ ಅಂಗವಾಗಿ ಧಾರ್ಮಿಕ ಪೂಜಾ ಕಾರ್ಯಗಳು ಸಾಂಗವಾಗಿ ನೆರವೇರಿದ್ದು, ಪ್ರತಿದಿನ ಲೋಕ ಕಲ್ಯಾಣಕ್ಕಾಗಿ ಮನ್ಯುಸೂಕ್ತ ಪುರಶ್ಚರಣ ಮಧು ಅಭಿಷೇಕ ಹೋಮ, ಅಷ್ಟಾಕ್ಷರ ಮಂತ್ರ ಹೋಮದೊಂದಿಗೆ ಶ್ರೀಸೂಕ್ತ ಹೋಮ, ನವಗ್ರಹ ಸಹಿತ ಪವಮಾನ ಹೋಮ, ಶ್ರೀಸೂಕ್ತ ಸಹಿತ ಸುದರ್ಶನ ಹೋಮ, ವಾಯುಸ್ತುತಿ ಪುರಶ್ಚರಣ ಹೋಮ ನಡೆಸಲಾಗಿದೆ ಎಂದು ಮಠದ ವ್ಯವಸ್ಥಾಪಕ ಸುಧಾಕರ್ ತಿಳಿಸಿದರು.

ಆರೋಗ್ಯ, ನೆಮ್ಮದಿಗಾಗಿ ಜೀವನ ಕ್ರಮ ಉತ್ತಮವಾಗಿರಲಿ

ಶ್ರೀಗುರುಮಲ್ಲೇಶ್ವರ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷೆ ನಂದಿನಿ

ಮಲ್ಲುಂಡಿ, ಫೆ.26– ಬದಲಾದ ಜೀವನ ಶೈಲಿಯಿಂದಾಗಿ ಆರೋಗ್ಯ ಹಾಗೂ ನೆಮ್ಮದಿಗಾಗಿ ಪರಿತಪಿಸುವಂತಾಗಿದ್ದು, ನಮ್ಮ ಪೂರ್ವಿಕರು ಹಾಕಿಕೊಟ್ಟ ಜೀವನ ಕ್ರಮವನ್ನು ನಾವು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ ಎಂದು ಶ್ರೀಗುರುಮಲ್ಲೇಶ್ವರ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷೆ ನಂದಿನಿ ತಿಳಿಸಿದರು.

ತಾಲೂಕಿನ ಮಲ್ಲುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಶ್ರೀಗುರುಮಲ್ಲೇಶ್ವರ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದಿಂದ ಭಾನುವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಉತ್ತಮ ಆರೋಗ್ಯ, ನೆಮ್ಮದಿ ಜೀವನ ಕಂಡುಕೊಳ್ಳಲು ಆಹಾರ, ಜೀವನ ಕ್ರಮ ಹಾಗೂ ವ್ಯವಹಾರಿಕ ಬದುಕಿನ ಬಗ್ಗೆ ಸಾಕಷ್ಟು



ಅಧ್ಯಯನ ನಡೆಸಿ ನಮ್ಮ ಪೂರ್ವಿಕರು ಉತ್ತಮ ಮಾರ್ಗ ಹಾಕಿಕೊಟ್ಟು ಹೋಗಿದ್ದಾರೆ. ಅದನ್ನು ನಾವು ಪರಿಪಾಲಿಸುವಲ್ಲಿ ಎಡವಿದ್ದು ಪಾಶ್ಚಿಮಾತ್ಯ ಸಂಸ್ಕೃತಿಯತ್ತ ಮುಖ ಮಾಡಿದ ಪರಿಣಾಮ ನಮ್ಮ ಜೀವನ ಕ್ರಮ ಸಂಪೂರ್ಣ ಬದಲಾಗಿದೆ. ಕಿರಿಯ ವಯಸ್ಸಿನಲ್ಲೇ ಅನೇಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಿರುವ ವಿಷಮ ಪರಿಸ್ಥಿತಿ ಕಾಣುತ್ತಿದ್ದೇವೆ. ಯಾಂತ್ರಿಕ ಬದುಕಿನಲ್ಲಿ ನೆಮ್ಮದಿಗಾಗಿ ಪರಿತಪಿಸುತ್ತಿದ್ದೇವೆ. ಹೀಗಾಗಿ ನಮ್ಮ ಸನಾತನ ಸಂಸ್ಕೃತಿ, ಆಹಾರ ಕ್ರಮ, ನಿಯಮಿತ ವ್ಯಾಯಾಮ, ಯೋಗವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ನೆಮ್ಮದಿ ಹಾಗೂ ಆರೋಗ್ಯದಾಯಕ ಜೀವನ ಕಂಡುಕೊಳ್ಳಲು ನಾವೆಲ್ಲರೂ ಮುಂದಾಗಬೇಕಿದೆ ಎಂದರು.

ಶಿಬಿರದಲ್ಲಿ ಮೈಸೂರಿನ ಬೃಂದಾವ ಆಸ್ಪತ್ರೆ ಡಾ.ಮನು, ಡಾ.ಕೀರ್ತನಾ ತಂಡದ ವೈದ್ಯಕೀಯ ಸಿಬ್ಬಂದಿ ಗ್ರಾಮೀಣ ಜನರ ರಕ್ತದೊತ್ತಡ, ಡಯಾಬಿಟಿಸ್, ಇಸಿಜಿ ಸೇರಿದಂತೆ ಸಾಮಾನ್ಯ ರೋಗ ಲಕ್ಷಣಗಳ ತಪಾಸಣೆ ನಡೆಸಿ ಅಗತ್ಯ ವೈದ್ಯಕೀಯ ಸಲಹೆ, ಮಾರ್ಗದರ್ಶನ ನೀಡಲಾಯಿತು. ಸ್ಥಳದಲ್ಲೇ ಔಷಧಿ ವಿತರಿಸಲಾಯಿತು. ಮಲ್ಲುಂಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ 150ಕ್ಕೂ ಹೆಚ್ಚು ಜನರು ಇದರ ಸದುಪಯೋಗ ಪಡೆದರು.

ಶ್ರೀಗುರುಮಲ್ಲೇಶ್ವರ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷೆ ಉಷಾ, ಕಾರ್ಯದರ್ಶಿ ನೇತ್ರಾವತಿ, ನಿರ್ದೇಶಕರಾದ ಕೋಮಲ, ಭ್ರಮರಾಂಬಿಕಾ, ಚೈತ್ರಾ, ಶ್ರೀಧರಿ, ಮಲ್ಲಮಣಿ, ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಶಿವಕುಮಾರ್, ಮಾದಪ್ಪ, ಪುಟ್ಟಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್ ಉಪಸ್ಥಿತರಿದ್ದರು.

ವೇತನ ಭತ್ಯೆ ಪರಿಷ್ಕರಣೆ, ಹಳೇ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸಿ

ಮಾ.1ರಿಂದ ಸರ್ಕಾರಿ ನೌಕರರ ಅನಿರ್ದಿಷ್ಟಾವಧಿ ಪ್ರತಿಭಟನೆ



ಹೆಚ್.ಡಿ.ಕೋಟೆ, ಫೆ.26– ಸರ್ಕಾರಿ ನೌಕರರ ವೇತನ ಭತ್ಯೆ ಪರಿಷ್ಕರಣೆ ಮತ್ತು ಹಳೇ ಪಿಂಚಣಿ ಯೋಜನೆ ಜಾರಿಗೆ ಒತ್ತಾಯಿಸಿ ಮಾ.1ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ರಾಜ್ಯ ನೌಕರರ ಸಂಘದ ತಾಲೂಕು ಅಧ್ಯಕ್ಷ ಎ.ಎಸ್. ಮಹದೇವು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸರ್ಕಾರಿ ನೌಕರರ ವೇತನ ಭತ್ಯೆಗಳ ಪರಿಷ್ಕರಣೆ ಸಂಬಂಧ ಯಾವುದೇ ಪ್ರಸ್ತಾಪ ಮಾಡದಿರುವುದು ನಿರಾಸೆ ಮೂಡಿಸಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಹಿನ್ನೆಲೆಯಲ್ಲಿ ನೌಕರರು ಕುಟುಂಬ ನಿರ್ವಹಣೆಯಲ್ಲಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ನೌಕರರ ವೇತನ ಪರಿಷ್ಕರಣೆ ಮಾಡಿ ಆರ್ಥಿಕ ವ್ಯತ್ಯಾಸಗಳನ್ನು ಸರಿಪಡಿಸುವುದು ಸರ್ಕಾರದ ಜವಾಬ್ದಾರಿ ಎಂದರು. 6ನೇ ವೇತನ ಆಯೋಗದಂತೆ 7ನೇ ವೇತನ ಆಯೋಗದ ಮಧ್ಯಂತರ ವರದಿ ಪಡೆದು, ಚುನಾವಣೆ ನೀತಿ ಸಂಹಿತೆ ಜಾರಿಗೆ ಬರುವ ಮುಂಚೆ ಶೇ.40 ಸೌಲಭ್ಯವನ್ನು 2022ರ ಜು.1 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಬೇಕು ಎಂದರು.

ರಾಜ್ಯ ಎನ್‌ಪಿಎಸ್ ನೌಕರರನ್ನು ಓಪಿಎಸ್ ವ್ಯಾಪ್ತಿಗೆ ತರುವುದು ಸರ್ಕಾರದ ಜವಾಬ್ದಾರಿ. ಪಂಜಾಬ್, ರಾಜಸ್ಥಾನ, ಚತ್ತೀಸ್‌ಗಢ, ಜಾರ್ಖಂಡ್, ಹಿಮಾಚಲ ಪ್ರದೇಶಗಳಲ್ಲಿ ಹಳೇ ಪಿಂಚಣಿ ಯೋಜನೆ ಜಾರಿಗೆ ತಂದಿದ್ದು, ಅದೇ ಮಾದರಿ ರಾಜ್ಯದಲ್ಲೂ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಬಸವರಾಜು, ರಾಜ್ಯ ಪರಿಷತ್ ಸದಸ್ಯ ಮಹದೇವು, ಕಾರ್ಯದರ್ಶಿ ಎಸ್.ಬಿ. ಸೋಮಸುಂದರ, ಸೋಮಶೇಖರ್, ಸುರೇಶ್, ಬಿ.ಎಸ್. ಮಂಜುನಾಥ್ ಇದ್ದರು.

ಕಾಯರ್ ಕಾರ್ಖಾನೆಗೆ ಬೆಂಕಿ: ಅಪಾರ ನಷ್ಟ



ಹುಣಸೂರು, ಫೆ.26– ತೆಂಗಿನ ನಾರಿನಿಂದ ಪದಾರ್ಥಗಳನ್ನು ತಯಾರಿಸುವ ಕಾರ್ಖಾನೆಗೆ ಬೆಂಕಿಬಿದ್ದ ಪರಿಣಾಮ ಒಂದು ಕೋಟಿಗೂ ಅಧಿಕ ಪ್ರಮಾಣದ ಕಚ್ಚಾ ಹಾಗೂ ಸಿದ್ಧಪಡಿಸಿದ ಪದಾರ್ಥಗಳು ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ತೆಂಕನಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಹುಸೇನ್‌ಪುರ ಗ್ರಾಪಂ ಸದಸ್ಯ ಶ್ರೀನಿವಾಸ್ ಎಂಬುವರಿಗೆ ಸೇರಿದ ಶ್ರೀಸಿದ್ದೇಶ್ವರ ಕಾಯರ್ ಫ್ಯಾಕ್ಟರಿ ಹಾಗೂ ಶ್ರೀಮುರಳಿ ಕೋಕೋ ಪೀಟ್ ಫ್ಯಾಕ್ಟರಿಯಲ್ಲಿ ಘಟನೆ ನಡೆದಿದೆ. ಫ್ಯಾಕ್ಟರಿ ಬಳಿ ಹಾದು ಹೋಗಿರುವ ವಿದ್ಯುತ್ ತಂತಿಗಳಿಂದ ಹಾರಿದ ಕಿಡಿಯಿಂದ ಬೆಂಕಿ ಕಾಣಿಸಿಕೊಂಡಿದೆ ಎನ್ನಲಾಗಿದೆ. ಬೆಂಕಿ ಕಾಣಿಸಿಕೊಂಡ ಕೆಲವೇ ನಿಮಿಷಗಳಲ್ಲಿ ಇಡೀ ಫ್ಯಾಕ್ಟರಿಗೆ ಬೆಂಕಿ ಕೆನ್ನಾಲಿಗೆ ಹರಡಿದೆ. 2 ಎಕರೆ ಪ್ರದೇಶ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ ಬೃಹತ್ ಕಾರ್ಖಾನೆ ಸಂಪೂರ್ಣ ನಾಶವಾಗಿದೆ. ಕಾರ್ಖಾನೆಯಲ್ಲಿ 10 ಮಂದಿ ಕೆಲಸ ಮಾಡುತ್ತಿದ್ದು ಇಂದು ರಜೆ ಇದ್ದ ಕಾರಣ ಭಾರೀ ಅನಾಹುತ ತಪ್ಪಿದಂತಾಗಿದೆ.

ಮಾಹಿತಿ ಅರಿತ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಲು ಯತ್ನಿಸಿದರೂ, ನಾರಿನ ಪದಾರ್ಥವಾದ ಹಿನ್ನೆಲೆ ಕಾರ್ಖಾನೆ ಸಂಪೂರ್ಣ ಬೆಂಕಿಗೆ ಆಹುತಿಯಾಗಿದೆ.

ಶಾಸಕರಿಂದ ಸಾಂತ್ವನ: ತೆಂಕಲಕೊಪ್ಪಲು ಗ್ರಾಮದ ಶ್ರೀನಿವಾಸ್ ಅವರಿಗೆ ಸೇರಿದ ತೆಂಗಿನ ನಾರು ಕಾರ್ಖಾನೆಗೆ ಶನಿವಾರ ಸಂಜೆ ಆಕಸ್ಮಿಕ ಬೆಂಕಿ ತಗುಲಿ ಅಪಾರ ನಷ್ಟ ಉಂಟಾದ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಶಾಸಕ ಹೆಚ್.ಪಿ.ಮಂಜುನಾಥ್ ಭೇಟಿ ನೀಡಿ ಕಾರ್ಖಾನೆ ಮಾಲೀಕ ಶ್ರೀನಿವಾಸ್ ಮತ್ತು ಪುತ್ರ ಹೇಮಂತ್ ಅವರಿಗೆ ಸಾಂತ್ವನ ಹೇಳಿ ಆತ್ಮಸ್ಥೈರ್ಯ ತುಂಬಿದರು.

ತಿ.ನರಸೀಪುರದಲ್ಲಿ ಕಮಲ ಅರಳಿಸಲು ಕಾರ್ಯಕರ್ತರು ಸನ್ನದ್ಧ

ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್



ತಿ.ನರಸೀಪುರ ಫೆ.26– ಯಾವುದೇ ಸಂದರ್ಭ ವಿಧಾನಸಭಾ ಚುನಾವಣೆ ಬಂದರೂ ತಿ.ನರಸೀಪುರದಲ್ಲಿ ಕಮಲ ಅರಳಿಸಲು ಪಕ್ಷದ ಕಾರ್ಯಕರ್ತರು ಸನ್ನದ್ಧರಾಗಿದ್ದಾರೆ ಎಂದು ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷರಾಗಿ ಚೌಹಳ್ಳಿ ಸಿದ್ದರಾಜು ಆಯ್ಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯ ವಿಧಾನಸಭೆ ಚುನಾವಣೆ ಯಾವುದೇ ಸಂದರ್ಭ ಘೋಷಣೆಯಾದರೂ, ಪಕ್ಷದ ಅಭ್ಯರ್ಥಿ ಗೆಲುವಿಗೆ ದುಡಿಯಲು ಸಿದ್ಧರಾಗಿ ಎಂದರು.

ಹೈಕಮಾಂಡ್ ಕ್ಷೇತ್ರದ ಅಧಿಕೃತ ಅಭ್ಯರ್ಥಿ ಘೋಷಣೆ ಮಾಡಿಲ್ಲ. ಅಭ್ಯರ್ಥಿ ಆಯ್ಕೆ ಪ್ರಧಾನಿ ಮೋದಿ, ರಾಷ್ಟ್ರೀಯ ಅಧ್ಯಕ್ಷ ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರ ವಿವೇಚನೆಗೆ ಬಿಟ್ಟಿದ್ದು, ಪಕ್ಷ ನೀಡಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ತಿಳಿಸಿದರು.

ರಾಜ್ಯ ಸಮಿತಿ ಸೂಚನೆಯಂತೆ ಬೂತ್ ವಿಜಯ ಅಭಿಯಾನ ರಾಜ್ಯಾದ್ಯಂತ ನಡೆದಿದೆ. ಕಾರ್ಯಕರ್ತರ ಮನೆ ಮೇಲೆ ಬಿಜೆಪಿ ಧ್ವಜ ಹಾರಿಸುವುದರೊಂದಿಗೆ ಮುಂಬರುವ ಚುನಾವಣೆ ವಿಜಯದ ಕಡೆಗೆ ಸದೃಢ ಹೆಜ್ಜೆಯನ್ನಿಡುವ ಅಭಿಯಾನ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀಡಿರುವ ಸವಲತ್ತುಗಳನ್ನು ಮತದಾರರಿಗೆ ತಲುಪಿಸಬೇಕು ಎಂದರು.

ಮೈಸೂರು ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಚೌಹಳ್ಳಿ ಸಿದ್ದರಾಜು ಮಾತನಾಡಿದರು. ಈ ವೇಳೆ ಮೈಸೂರು ಜಿಲ್ಲಾ ಗ್ರಾಮಾಂತರ ಎಸ್‌ಸಿ ಮೋರ್ಚಾ ಅಧ್ಯಕ್ಷ ಅಧ್ಯಕ್ಷ ಸಿ.ಎಂ.ಮಹದೇವಯ್ಯ, ಉಪಾಧ್ಯಕ್ಷ ಸಾಮ್ರಾಟ್, ಆಲಗೂಡು ಮಂಜು, ಪ್ರಧಾನ ಕಾರ್ಯದರ್ಶಿಗಳಾದ ಪ್ರತಾಪ್, ಮಹೇಶ್, ಮಹೇಶ್ ಬಾಬು, ಕಾರ್ಯದರ್ಶಿ ಅನಿಲ್ ಕುಮಾರ, ತೊಟ್ಟವಾಡಿ, ಯುವ ಮೋರ್ಚಾ ಅಧ್ಯಕ್ಷ ಶಿವು. ಮೋಹನ್ ಮಾರ್, ವಿಜಯಕುಮಾರ್, ಕುರುಬೂರು ಮಂಜು, ನಂಜುಂಡಸ್ವಾಮಿ ಹಾಜರಿದ್ದರು.

ನೇಮಕ



ಬನ್ನೂರು, ಫೆ.26– ಇಲ್ಲಿಗೆ ಸಮೀಪದ ಯಾಚೇನಹಳ್ಳಿ ಗ್ರಾಪಂ ಸದಸ್ಯ ವೈ.ಎಸ್. ರಾಮಸ್ವಾಮಿ ಅವರನ್ನು ಜೆಡಿಎಸ್ ರಾಜ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಜೆಡಿಎಸ್ ರಾಜ್ಯ ವಕ್ತಾರರಾಗಿ ನೇಮಕಗೊಂಡ ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ಸುತ್ತೂರು ಶ್ರೀಮಠಕ್ಕೆ ಭೇಟಿ ನೀಡಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಆಶೀರ್ವಾದ ಪಡೆದರು. ಈ ವೇಳೆ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ದೇವರಾಜ್, ಹದಿನಾರು ಸತೀಶ್ ಇತರರಿದ್ದರು.

ಚಿರತೆ ದಾಳಿಗೆ ಕುರಿ ಬಲಿ



ಹಿರೀಕ್ಯಾತನಹಳ್ಳಿ, ಫೆ.26– ಚಿರತೆ ದಾಳಿಗೆ ಕುರಿ ಬಲಿಯಾಗಿರುವ ಘಟನೆ ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಗ್ರಾಮದ ಊರಕುಪ್ಪೆ ಬಡಾವಣೆ ನಿವಾಸಿ ದೇವರಾಜು ಅವರಿಗೆ ಸೇರಿದ ಕುರಿ ಬಲಿಯಾಗಿರುವುದು. ದೇವರಾಜು ಕುರಿಗಳನ್ನು ಮನೆ ಹಿಂಭಾಗದ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದರು. ಈ ವೇಳೆ ಚಿರತೆ ದಾಳಿ ನಡೆಸಿ ಕುರಿಯನ್ನು ಕೊಂದು ಹಾಕಿದೆ. ಮಧ್ಯರಾತ್ರಿ ಚಿರತೆ ಕಂಡ ನಾಯಿಗಳು ಬೊಗಳುತ್ತಿರುವ ಶಬ್ದ ಕೇಳಿ ರೈತ ದೇವರಾಜು ಮನೆ ಕಿಟಕಿಯಿಂದ ನೋಡಿದಾಗ ಚಿರತೆ ಕುರಿ ತಿನ್ನುತ್ತಿರುವುದು ಕಂಡು ಬಂದಿದೆ. ಇದ್ದ 2 ಕುರಿಗಳಲ್ಲಿ ಒಂದನ್ನು ತಿಂದು ಹಾಕಿರುವ ಚಿರತೆ ಮತ್ತೊಂದನ್ನು ಗಾಯಗೊಳಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ಪಶುವೈದ್ಯರಿಂದ ಕುರಿ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಈ ಹಿಂದೆಯೂ ಇದೇ ರೀತಿ ಚಿರತೆ ಸಾಕುನಾಯಿಗಳನ್ನು ಹೊತ್ತೊಯ್ದಿರುವ ಘಟನೆಗಳು ಜರುಗಿವೆ. ಆದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಬೋನಿಟ್ಟು ಚಿರತೆ ಸೆರೆ ಹಿಡಿಯಲು ಕ್ರಮ ವಹಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಎಂ.ನಾಗರಾಜ್ ನಿಧನ



ನಂಜನಗೂಡು, ಫೆ.26– ನಗರದ ತ್ಯಾಗರಾಜ ಕಾಲೋನಿ ನಿವಾಸಿ ಎಂ.ನಾಗರಾಜ್ (65) ಭಾನುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ನಗರದ ಲಿಂಗಭಟ್ಟರ ಗುಡಿ ಸಮೀಪದ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಎಷ್ಟು ಸತ್ಯವೋ

ಕೆ.ವೆಂಕಟೇಶ್ ಉಸ್ತುವಾರಿ ಸಚಿವರಾಗುವುದು ಅಷ್ಟೇ ಸತ್ಯ

ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಡಾ.ಬಿ.ಜೆ.ವಿಜಯ್ ಕುಮಾರ್ ಭವಿಷ್ಯ

ಬೈಲಕುಪ್ಪೆ, ಫೆ.26– ಈಗಾಗಲೇ ಎಲ್ಲಾ ವರದಿಗಳ ಪ್ರಕಾರ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂಬ ಮಾಹಿತಿ ಎಷ್ಟು ಸತ್ಯವೋ, ಅದೇ ರೀತಿ ಮುಂಬರುವ ಚುನಾವಣೆಯಲ್ಲಿ ಪಿರಿಯಾಪಟ್ಟಣ ಕಾಂಗ್ರೆಸ್ ಅಭ್ಯರ್ಥಿ ಕೆ.ವೆಂಕಟೇಶ್ ಜಯಗಳಿಸಿ ಕಾಂಗ್ರೆಸ್ ಸರ್ಕಾರದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿಯಾಗುವುದು ಅಷ್ಟೇ ಸತ್ಯ ಎಂದು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್ ಭವಿಷ್ಯ ನುಡಿದರು.

ಪಿರಿಯಾಪಟ್ಟಣ ತಾಲೂಕಿನ ಹೊನ್ನಾಪುರ ಗ್ರಾಪಂ ವ್ಯಾಪ್ತಿಯ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ನಾನು ಪಿರಿಯಾಪಟ್ಟಣದಲ್ಲಿ ವೆಂಕಟೇಶ್ ಪರ ಕಳೆದ 3 ಚುನಾವಣೆಯಲ್ಲಿ ಪ್ರಚಾರ ಸಭೆಗಳನ್ನು ನಡೆಸಿದ್ದೇನೆ. ನಮ್ಮ ಪಕ್ಷದ ದೋಣಿ ಸರಿಯಾಗಿ ನಡೆಯುತ್ತಿತ್ತು. ಆದರೆ ಕಳೆದ ಬಾರಿ ನಮ್ಮ ಪಕ್ಷದ ಸೋಲಿಗೆ ತಾಲೂಕಿನ ನದಿದಂಡೆ ಪ್ರದೇಶಗಳ ಮತಗಳು ಕುಸಿದ ಪರಿಣಾಮ ಸೋಲು ಅನುಭವಿಸಬೇಕಾಯಿತು. ಈ ಬಾರಿ ಅದಕ್ಕೆ ಅವಕಾಶ ಮಾಡಿಕೊಡದೆ ನದಿದಂಡೆ ಪ್ರದೇಶಗಳಲ್ಲಿರುವ ಮತಗಳೇ ವೆಂಕಟೇಶಣ್ಣನವರ ವಿಜಯದ ಹೂ ಮಾಲೆಯಾಗಬೇಕು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ 9 ವರ್ಷ ಯಶಸ್ವಿಯಾಗಿ ಮುಗಿಸಿದ್ದೇನೆ. ಎಲ್ಲಾ ಉಪಚುನಾವಣೆಗಳನ್ನು ನನ್ನ ಕಾಲದಲ್ಲಿ ಗೆದ್ದಿದ್ದೇವೆ. 2023 ನನ್ನ ಅಧ್ಯಕ್ಷತೆಯ ಕೊನೆ ಚುನಾವಣೆ. ಈ ಚುನಾವಣೆ ಮೂಲಕ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಆಡಳಿತ ನಡೆಸಬೇಕು. ಇದು ನನ್ನ ಗುರಿ ಎಂದರು.



ಮಾಜಿ ಶಾಸಕ ಕೆ.ವೆಂಕಟೇಶ್ ಮಾತನಾಡಿ, ನನ್ನ ಅವಧಿಯಲ್ಲಿ ಎಲ್ಲಾ ವರ್ಗದವರನ್ನು ಸರಿ ಸಮಾನವಾಗಿ ಕಂಡಿದ್ದು, ಹಲವು ಯೋಜನೆಗಳಲ್ಲಿ ಅನುದಾನ ತಂದು ಪ್ರತಿವರ್ಗಕ್ಕೂ ಸರಿಸಮನಾಗಿ ಹಂಚಿಕೆ ಮಾಡಿದ್ದೇನೆ. ನಾನು ಶಾಸಕನಾಗಿದ್ದ 25 ವರ್ಷಗಳಲ್ಲಿ ಯಾವುದೇ ಒಬ್ಬ ಅಧಿಕಾರಿಗಳಿಗೆ ಆಗಲಿ, ಸಾಮಾನ್ಯ ಪ್ರಜೆಗಳಿಗೆ ಆಗಲಿ, ಶಾಸಕರಿಂದ ತೊಂದರೆ ಎಂಬ ಪದಗಳೇ ಬರುತ್ತಿರಲಿಲ್ಲ. ನನ್ನ ಮೇಲೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿರುವ ಹಾಲಿ ಶಾಸಕ ಮಹದೇವ್, ತಾವು ಈ ಹಿಂದೆ ಇದ್ದ ದಿನಗಳನ್ನು ಮೊದಲು ಸ್ಮರಿಸಲಿ. ಈಗಾಗಲೇ ತಾಲೂಕಿನ ಜನತೆ ನಿಮ್ಮ ಅಧಿಕಾರವನ್ನು ನೋಡಿ ಬೇಸತ್ತಿದ್ದಾರೆ. ಕಳೆದ ಬಾರಿ ಚುನಾವಣೆಯಲ್ಲಿ ಯಾವ ಮತಗಳಿಂದ ಜಯಗೊಂಡಿದ್ದೀರೋ ಅದೇ ಮತಗಳಿಂದ ಈ ಬಾರಿ ನಿಮ್ಮ ಸೋಲು ಖಚಿತ ಎಂದರು.

ಚಾಮರಾಯನ ಕೋಟೆ, ಹೊನ್ನಾಪುರ ಸೇರಿದಂತೆ ಇತರ ಕಡೆಗಳಲ್ಲಿ ಬೈಕ್ ರ‍್ಯಾಲಿಯನ್ನು ಕಾಂಗ್ರೆಸ್ ಕಾರ್ಯಕರ್ತರು ನಡೆಸಿದರು. ಸುಮಾರು 40ಕ್ಕೂ ಹೆಚ್ಚು ಜನರು ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು.

ಈ ವೇಳೆ ಮಾಜಿ ಶಾಸಕ ಪುಟ್ಟರಂಗಶೆಟ್ಟಿ, ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಟಿ.ಡಿ.ಗಣೇಶ್, ಹಿರಿಯ ವಕೀಲ ಬಿ.ವಿ. ಜವರೇಗೌಡ, ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೆಹಮದ್ ಜಾನ್ ಬಾಬು, ಡಿ.ಟಿ.ಸ್ವಾಮಿ ಇದ್ದರು.



ಮೈಸೂರು ಮ್ಯೂಸಿಕ್ ಅಸೋಸಿಯೇಷನ್ ವತಿಯಿಂದ ಸಿಸ್ಟರ್ ಜಾನ್ ಡಿ. ಬ್ರಿಟ್ಟೋ ಸ್ಮರಣಾರ್ಥ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿದ್ದ ಫ್ಯೂಷನ್ ಸಂಗೀತ ಉತ್ಸವದ ಕೊನೆಯ ದಿನವಾದ ಭಾನುವಾರ ಡಾ.ಮೈಸೂರು ಎಂ.ಮಂಜುನಾಥ್ ಹಾಗೂ ತಂಡದ ಕಲಾವಿದರು 'ಜಂಕ್ಷನ್–ಇನ್ ಕನ್ಸರ್ಟ್' ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಸಚಿವ ಶಿವರಾಂ ಹೆಬ್ಬಾರ್‌ರ ಸಕ್ಕರೆ ಕಾರ್ಖಾನೆ ಯಂತ್ರಕ್ಕೆ ಸಿಲುಕಿ ಕಾರ್ಮಿಕ ಸಾವು



ಹಾವೇರಿ, ಫೆ.26–ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಅವರ ಪುತ್ರ ವಿವೇಕ ಹೆಬ್ಬಾರ್ ಮಾಲೀಕತ್ವದ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಯಂತ್ರದ ಬೆಲ್ಟ್‌ಗೆ ಸಿಲುಕಿ ಮೃತಪಟ್ಟಿರುವ ಘಟನೆ ಶನಿವಾರ ಸಂಜೆ ನಡೆದಿದೆ. ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ದುಂಢಸಿ ಗ್ರಾಮದ ನವೀನ ಬಸಪ್ಪ ಚಲವಾದಿ (19 ವರ್ಷ) ಮೃತಪಟ್ಟ ಕಾರ್ಮಿಕರಾಗಿದ್ದಾರೆ. ಕಬ್ಬು ತುಂಬುವ ಯಂತ್ರದ ಬೆಲ್ಟಿಗೆ ನವೀನನ ಎರಡು ಕೈಗಳು ಸಿಲುಕಿ ತುಂಡಾಗಿ, ತೀವ್ರ ರಕ್ತಸ್ರಾವದಿಂದ ಕಾರ್ಮಿಕ ನವೀನ್ ಮೃತಪಟ್ಟಿದ್ದಾನೆ ಎನ್ನಲಾಗಿದೆ. ಕೋಣನಕೇರಿಯ ವಿಐಪಿಎನ್ ಡಿಸ್ಟಿಲರಿ ಕಾರ್ಖಾನೆಯಲ್ಲಿ ಯಾವುದೇ ಸುರಕ್ಷಾ ಕ್ರಮವಿಲ್ಲದೇ, ದೊಡ್ಡ ದೊಡ್ಡ ಯಂತ್ರಗಳ ಬೆಲ್ಟ್ ಹತ್ತಿರ ಕೌಶಲರಹಿತ ಕಾರ್ಮಿಕನಿಂದ ಬುಟ್ಟಿಯಿಂದ ಕಬ್ಬಿನ ಪುಡಿಯನ್ನು ತುಂಬಿ ಹಾಕಿಸಲಾಗುತ್ತಿತ್ತು. ಸ್ಥಳದಲ್ಲಿ ಯಾವುದೇ ಜಾಲರಿ, ಸುರಕ್ಷಾ ಕ್ರಮಗಳಿಲ್ಲದ ಕಾರಣ ಈ ದುರ್ಘಟನೆ ನಡೆದಿದೆ" ಎಂದು ಮೃತನ ಸಂಬಂಧಿಗಳು ದೂರಿದ್ದಾರೆ.

ಕಾರ್ಖಾನೆ ಮಾಲೀಕ ವಿವೇಕ ಹೆಬ್ಬಾರ್, ಜನರಲ್ ಮ್ಯಾನೇಜರ್ ಮಂಜುನಾಥ, ಲೇಬರ್ ಸಪ್ಲೈರ್‌ಗಳಾದ ಬಸವರಾಜ, ಉಮೇಶ ಸುರವೇ, ವಿಶ್ವನಾಥ ಎ.ಎಸ್, ಆಕಾಶ ಧರ್ಮೋಜಿ ಸೇರಿದಂತೆ 6 ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಈ ಕುರಿತು ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿನಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಕಲ್ಲು ತೂರಾಟ: ಕಿಟಕಿಗೆ ಹಾನಿ

ಬೆಂಗಳೂರು, ಫೆ.26– ಮೈಸೂರು–ಚೆನ್ನೈ ಮಾರ್ಗದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಮೇಲೆ ಕಲ್ಲು ತೂರಾಟ ನಡೆಸಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಇದರಿಂದಾಗಿ ಕೋಚ್‌ನ ಎರಡು ಕಿಟಕಿ ಗಾಜುಗಳಿಗೆ ಹಾನಿಯಾಗಿದೆ ಎಂದು ನೈಋತ್ಯ ರೈಲ್ವೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನ ಕೆ.ಆರ್‌ಪುರಂ ಬಳಿ ಶನಿವಾರ ಈ ಘಟನೆ ಸಂಭವಿಸಿದ್ದು, ಚೆನ್ನೈ–ಬೆಂಗಳೂರು–ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಚೆನ್ನೈನಿಂದ ಬೆಂಗಳೂರಿಗೆ ಬರುವ ಮಾರ್ಗದಲ್ಲಿ ದುಷ್ಕರ್ಮಿಗಳು ಕಲ್ಲು ಎಸೆದಿದ್ದಾರೆ. ಬೆಂಗಳೂರಿನಲ್ಲಿ ಇಲ್ಲಿವರೆಗೆ ಸಾಮಾನ್ಯ ರೈಲುಗಳನ್ನು ಗುರಿ ಮಾಡಿಕೊಂಡಿದ್ದ ದುಷ್ಕರ್ಮಿಗಳು ಇದೀಗ ಮೊದಲ ಬಾರಿ ವಂದೇ ಭಾರತ್ ರೈಲಿಗೆ ಕಲ್ಲೆಸೆದಿದ್ದಾರೆ.

ಘಟನೆ ನಡೆದಿರುವುದು ನಿಜ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಈ ಬಗ್ಗೆ ರೈಲ್ವೆ ಸಂರಕ್ಷಣಾ ಪಡೆ (ಆರ್‌ಪಿಎಫ್) ಪ್ರಕರಣ ದಾಖಲಿಸಲಾಗಿದೆ. ಈಗಾಗಲೇ ರಾಜ್ಯ ರೈಲ್ವೆ ಪೊಲೀಸರಿಗೆ ಮಾಹಿತಿ ನೀಡಿದ್ದು, ದುಷ್ಕರ್ಮಿಗಳ ಬಂಧನಕ್ಕೆ ಕ್ರಮ ಕೈಗೊಳ್ಳುವಂತೆ ಮನವಿ ಕೂಡ ಮಾಡಲಾಗಿದೆ ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಲ್ಲು ತೂರಾಟದಂತಹ ಘಟನೆಗಳು ಕಂಡುಬಂದಲ್ಲಿ ಟೋಲ್–ಫ್ರೀ ಸಹಾಯವಾಣಿ ಸಂಖ್ಯೆ 139ಕ್ಕೆ ಕರೆ ಮಾಡುವಂತೆ ಸಾರ್ವಜನಿಕರು ಮತ್ತು ಪ್ರಯಾಣಿಕರಿಗೆ ಮನವಿ ಮಾಡಲಾಗಿದೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು